ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಮಾರ್ಚ್ 18, 2009 ರೂ. 12/-



5ನೇ ವರ್ಷಕ್ಕೆ

ಸನ್ ಸ್ಟ್ರೋಕ್!





ಅನಂತ್‌ಗೆ ಯಡ್ಡಿ ಸ್ಕೆಚ್!

ಆರ್.ಪೇಟೆ ಪೊಲೀಸ್ ಮರ್ಡರ್!





ಮರಿ ಉದಾಸಿಗೆ ಟಿಕೆಟ್

ಬಿಜೆಪಿ ಇಬ್ಭಾಗ



ಪೇಜಾವರ


ಬೂತ್ ಕಾರ್ಯಾಚರಣೆ

ನಟಿಯನ್ನು ಕೊಂದ ಉದಯವಾಣಿ

ಆಸ್ಕರಾ.... ಮಾರುಕಟ್ಟೆಗೋಸ್ಕರಾ..!? ದಿಲ್‌ವಾಲೆ(ಹಾಲಿವುಡ್) ದುಲ್ಹನಿಯಾ(ಬಾಲಿವುಡ್) ಲೇ ಜಾಯೇಂಗೆ

ಚಾರ್ವಾಕ
ಶಿವಸುಂದರ್

'ಸ್ಲಂ ಡಾಗ್' ಚಿತ್ರಕ್ಕೆ ಎಂಟು ಆಸ್ಕರ್ ಮಾತ್ರವಲ್ಲದೆ ಈವರೆಗೆ ಬೇರೆ ಬೇರೆ ದೇಶಗಳ ಒಟ್ಟು 66 ಚಿತ್ರ ಪ್ರಶಸ್ತಿಗಳು ಸಿಕ್ಕಿವೆ. ಅದನ್ನು ತಯಾರಿಸಲು ವೆಚ್ಚವಾದದ್ದು 75 ಕೋಟಿ ರೂಪಾಯಿಗಳು! ಆದರೆ ಈಗಾಗಲೇ ಅದೇ ಗಳಿಸಿರುವ ಮೊತ್ತ 600 ಕೋಟಿ ರೂಪಾಯಿಗಳು! ಆಸ್ಕರ್ ಪ್ರಶಸ್ತಿ ಬಂದಕಾರಣದಿಂದಲೇ ಈ ಚಿತ್ರಕ್ಕೆ ಏನಿಲ್ಲವೆಂದರೂ 500 ಕೋಟಿ ರೂಪಾಯಿಗಳಷ್ಟು ವ್ಯವಹಾರವಾಗುವ ನಿರೀಕ್ಷೆಯಿದೆ. ಅಂದರೆ ಆಸ್ಕರ್ ಪ್ರಶಸ್ತಿ ಬಂದರೆ ಹೂಡಿದ ಹಣಕ್ಕೆ 6 ಪಟ್ಟು ಹೆಚ್ಚು ಲಾಭ ಬರಲಿದೆ. ಹಾಗಿರುವಾಗ ಆಸ್ಕರ್ ಪ್ರಶಸ್ತಿಯ ಮೇಲಿನ ಹೂಡಿಕೆಯೂ ಒಂದು ಒಳ್ಳೆಯ ವ್ಯಾಪಾರವೇ ಅಲ್ಲವೇ?



ಆಸ್ಕರ್ ಪ್ರಶಸ್ತಿಗೆ ಓಟು ನೀಡುವ 6000 ಮತದಾರರಿಗೆ ಜನವರಿಯಲ್ಲಿ ಮತದಾನ ಪತ್ರವನ್ನು ನೀಡಲಾಗುತ್ತದೆ. ಅವರು ಫೆಬ್ರವರಿ ಮೊದಲ ವಾರದಲ್ಲಿ ತಮ್ಮ ಆಯ್ಕೆಯನ್ನು ಬರೆದು ಗುಪ್ತವಾಗಿ ವಾಪಸ್ ನೀಡಬೇಕು. ಈ ಮತದಾನದ ಗುಪ್ತತೆಯನ್ನು ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡುವುದು ಮತ್ತು ಅದರ ಎಣಿಕೆ ಮಾಡಿ ವಿಜೇತರನ್ನು ಆರಿಸುವ ಸಂಪೂರ್ಣ ಪ್ರಕ್ರಿಯೆಯ ಜವಾಬ್ದಾರಿ ಮತ್ತೊಂದು (ಕು)ಖ್ಯಾತ ಬಹುರಾಷ್ಟ್ರೀಯ ಕಂಪನಿಯಾದ ಪ್ರೈಸ್‌ವಾಟರ್‌ಹೌಸ್ ಕೂಪರ್ಸ್ ಸಂಸ್ಥೆಯದು. ಈ ಕಂಪನಿಯ ಹೆಸರು ನೆನಪಿರಬೇಕಿಲ್ಲವೇ? ಕೇವಲ ಲೆಕ್ಕದ ಹೇರಾಫೇರಿ ಮಾಡಿ ಜನತೆಯ ಸಾವಿರಾರು ಕೋಟಿ ನುಂಗಿ ಹಾಕಿದ ಸತ್ಯಂ ಕಂಪನಿಯ ಲೆಕ್ಕಾಚಾರದ ವಿಶ್ವಾಸಾರ್ಹತೆಗೆ ಸರ್ಟಿಫಿಕೇಟ್ ನೀಡುತ್ತಿದ್ದು ಇದೇ ಕಂಪನಿಯೇ!

'ಸ್ಲಂಡಾಗ್' ಎಂಬ ಈ ವಾರ್ನರ್ ಬ್ರದರ್ಸ್ ಚಿತ್ರ ಮುಖ್ಯವಾಗುವುದು ಕೇವಲ ಅದಕ್ಕೆ ಆಸ್ಕರ್ ಬಂದಿತು ಎಂಬ ಕಾರಣಕ್ಕಲ್ಲ. 'ಸ್ಲಂಡಾಗ್'ನಂತಹ ಚಿತ್ರನಿರ್ಮಾಣದ ಮೂಲಕ ಹಾಲಿವುಡ್‌ನ ಬೃಹತ್ ಚಿತ್ರನಿರ್ಮಾಣ ಸಂಸ್ಥೆಗಳು ಭಾರತದ ಚಲನಚಿತ್ರ ಮಾರುಕಟ್ಟೆಯನ್ನು ಆಕ್ರಮಿಸಲು ಹೇಗೆ ಹೊಸ ವ್ಯೂಹತಂತ್ರಗಳನ್ನು ರೂಪಿಸುತ್ತಿದೆ ಎಂಬುದಕ್ಕೂ ಈ ಚಿತ್ರ ಹೆಚ್ಚು ಮುಖ್ಯವಾಗುತ್ತದೆ.

ಈವರೆಗೆ ಭಾರತದಲ್ಲಿ ಹಾಲಿವುಡ್ ಚಿತ್ರ ವ್ಯಾಪಾರವೆಂದರೆ ಹಾಲಿವುಡ್ ಚಿತ್ರಗಳ ವಿತರಣೆ ಮತ್ತು ಸ್ಥಳೀಯ ಭಾಷೆಗಳಿಗೆ ಡಬ್ಬಿಂಗ್ ಮಾಡಿಕೊಳ್ಳುವ ಹಕ್ಕಿನ ಮಾರಾಟ ಮಾತ್ರವಾಗಿತ್ತು. ಚಿತ್ರ ನಿರ್ಮಾಣದ ತಾಂತ್ರಿಕವರ್ಗದಲ್ಲಾಗಲೀ, ಕಥೆಯ ವಸ್ತು ಹಾಗೂ ಅದರ ಚಿತ್ರಣದಲ್ಲಾಗಲೀ ಭಾರತೀಯರು ಇದ್ದದ್ದು ಅಪರೂಪ. ಆದರೆ ಸ್ಲಂಡಾಗ್ ನೋಡಿ! ಆ ಚಿತ್ರದ ಕಥೆ ವಿಕಾಸ್ ಸ್ವರೂಪ್ ಎಂಬ ಭಾರತೀಯ ಅಧಿಕಾರಿಯದ್ದು. ಅದರ ತಾಂತ್ರಿಕ ವರ್ಗದಲ್ಲಿ ಆಸ್ಕರ್ ಪಡೆದ ರಹಮಾನ್, ರಸೂಲ್ ಪೂಕುಟ್ಟಿ, ಗುಲ್ಜಾರ್‌ರವರನ್ನೂ ಒಳಗೊಂಡಂತೆ ಹೆಚ್ಚು ಜನ ಭಾರತೀಯರಿದ್ದರು. ಶೂಟಿಂಗ್ ನಡೆದದ್ದೆಲ್ಲಾ ಭಾರತದಲ್ಲೇ. ಆದರೆ ನಿರ್ದೇಶಕರನ್ನೂ ಒಳಗೊಂಡಂತೆ ಮುಖ್ಯ ತಾಂತ್ರಿಕ ವರ್ಗ ವಿದೇಶಿಯರು ಮತ್ತು ಅದರ ನಿರ್ಮಾಣ ಮತ್ತು ಜಾಗತಿಕ ವಿತರಣೆ ಮಾತ್ರ ವಾರ್ನರ್ಸ್ ಬ್ರದರ್ಸ್ ಮತ್ತು ಫಾಕ್ಸ್ ಸರ್ಚ್‌ಲೈಟ್ ಎಂಬ ದೈತ್ಯ ಬಹುರಾಷ್ಟ್ರೀಯ ಕಂಪನಿಗಳದ್ದು!

ಭಾರತೀಯ ತಾಂತ್ರಿಕ ವರ್ಗ, ಭಾರತೀಯ ಕಥೆ, ಭಾರತೀಯರು ನೋಡಲು ಬಯಸುವ ರೀತಿಯಲ್ಲಿ ಹಾಡು, ನೃತ್ಯ ಮೆಲೊಡ್ರಾಮಗಳನ್ನೊಳಗೊಂಡ ಅಥವಾ ಒಂದು ಮಾತಿನಲ್ಲಿ ಹೇಳುವುದಾದರೆ ಬಾಲಿವುಡ್ ರೀತಿಯಲ್ಲಿ ಹಾಲಿವುಡ್ ಚಿತ್ರ ನಿರ್ಮಾಣ ಮಾಡುವ ಹೊಸ ಹಾಲಿವುಡ್ ಮಾರುಕಟ್ಟೆ ತಂತ್ರಕ್ಕೆ ಈ ಸ್ಲಂಡಾಗ್ ಒಂದು ಉದಾಹರಣೆ. ಇದೊಂದು ಅಪವಾದವೇನಲ್ಲ. ಇತ್ತೀಚೆಗೆ ಅಕ್ಷಯ್‌ಕುಮಾರ್-ದೀಪಿಕಾ ಪಡುಕೋಣೆ ಅಭಿನಯಿಸಿದ ಬಾಲಿವುಡ್ಡಿನ 'ಚಾಂದಿನಿಚೌಕ್‌ಸೆ ಚೈನಾ ತಕ್' ಚಿತ್ರದ ನಿರ್ಮಾಪಕರೂ ಇದೇ ವಾರ್ನರ್ಸ್ ಬ್ರದರ್ಸ್ ಸಂಸ್ಥೆಯೇ. ಏಕಕಾಲದಲ್ಲಿ ಭಾರತ ಮತ್ತು ಚೀನಾ ಮಾರುಕಟ್ಟೆಗಳ ಮೇಲೆ ಕಣ್ಣಿಟ್ಟು ತೆಗೆದ ಚಿತ್ರವದು. ಅಷ್ಟು ಮಾತ್ರವಲ್ಲ ಇದೇ ಸಂಸ್ಥೆಯೇ ಈ ವರ್ಷ ಭಾರತದ ಚಲನಚಿತ್ರೋದ್ಯಮದಲ್ಲಿ 200 ಕೋಟಿ ರೂಪಾಯಿಗಳನ್ನು ಹೂಡಲಿದೆ.

ಹಾಗೆಯೇ ಹಾಲಿವುಡ್ಡಿನ ಆರು ದೈತ್ಯ ಚಿತ್ರನಿರ್ಮಾಣ ಸಂಸ್ಥೆಗಳಲ್ಲಿ ಒಂದಾದ ಸೋನಿ ಪಿಕ್ಚರ್ಸ್ ಎಂಟರ್ಟೈನ್‌ಮೆಂಟ್ ಸಂಸ್ಥೆ ಬಾಲಿವುಡ್ಡಿನ ಸಂಜಯ್ ಲೀಲಾ ಬನ್ಸಾಲಿಯೊಂದಿಗೆ 2007ರಲ್ಲಿ ಹಿಂದಿ ಚಲನಚಿತ್ರ ಸಾವರಿಯಾವನ್ನು ನಿರ್ಮಿಸಿತ್ತು. ಅದೇ ಸಂಸ್ಥೆಯೇ ಈ ವರ್ಷ ಸ್ಟೈಟ್ ಮತ್ತು ತೇರೆ ಸಂಗ್ ಎಂಬ ಹಿಂದಿ ಚಿತ್ರಗಳನ್ನು ನಿರ್ಮಿಸುತ್ತಿದೆ. ಇದಲ್ಲದೆ ರಫ್ತಾರ್ ಎಂಬ ಚಿತ್ರವನ್ನೂ ಈ ಸಂಸ್ಥೆ ಸಹ ನಿರ್ಮಾಣ ಮಾಡುತ್ತಿದೆ. ಇದಲ್ಲದೆ ಸ್ಲಂಡಾಗ್ ಚಿತ್ರ ವಿತರಿಸಿದ ಫಾಕ್ಸ್ ಸಂಸ್ಥೆಯೇ ವರ್ಷಕ್ಕೆ 6 ಹಿಂದಿ ಚಿತ್ರಗಳ ನಿರ್ಮಾಣ ಮಾಡಲು ಯೋಚಿಸುತ್ತಿದೆ. ಇದಲ್ಲದೆ ಮತ್ತೊಂದು ದೈತ್ಯ ಹಾಲಿವುಡ್ ಸಂಸ್ಥೆಯಾದ ವಾಲ್ಟ್ ಡಿಸ್ನಿ ಸಂಸ್ಥೆ ಭಾರತದ ಯಶ್‌ರಾಜ್ ಸಂಸ್ಥೆಯೊಂದಿಗೆ ಕೂಡಿ ಚಿತ್ರೋದ್ಯಮದಲ್ಲಿ 1300 ಕೋಟಿ ರೂಪಾಯಿಗಳಷ್ಟು ಹೂಡಿಕೆ ಮಾಡಲಿದೆ. ಅಮೆರಿಕದ ಆರು ದೈತ್ಯ ಚಿತ್ರನಿರ್ಮಾಣ ಸಂಸ್ಥೆಗಳಲ್ಲಿ ಮತ್ತೊಂದಾದ ವಯಾಕಾಮ್ ಸಂಸ್ಥೆ ಭಾರತದ ರಾಘವ್ ಬಹಲ್‌ರ ಟಿವಿ-18 ಗುಂಪಿನ ಜೊತೆಗೂಡಿ ಚಿತ್ರೋದ್ಯಮ ಹಣಹೂಡಿಕೆ ನಿಧಿಯೊಂದನ್ನು ಪ್ರಾರಂಭಿಸಲಿದೆ.

ಇದ್ದಕ್ಕಿದ್ದಂತೆ ಬಾಲಿವುಡ್ಡಿನ ಮೇಲೆ ಈ ಹಾಲಿವುಡ್ ರ್‍ಯಾಂಬೋಗಳು ಸ್ಟಾರ್‌ವಾರ್ ಮಾಡಲು ಕಾರಣವೇನು?

ಇಂದು ತೈವಾನ್‌ನಲ್ಲಿ ಚಿತ್ರವೀಕ್ಷಣೆಯಿಂದ ಬರುವ ಆದಾಯದ ಶೇ.96ರಷ್ಟು ಪಾಲು, ಥೈಲ್ಯಾಂಡಿನ ಶೇ.78ರಷ್ಟು ಮತ್ತು ಜಪಾನಿನ ಶೇ.65ರಷ್ಟು ಪಾಲು ಹಾಲಿವುಡ್ಡಿನ ಚಿತ್ರಗಳದ್ದೇ ಆಗಿದೆ. ಭಾರತದಲ್ಲಿ ಈ ಪ್ರಮಾಣದಲ್ಲಿಲ್ಲದಿದ್ದರೂ ನಿಧಾನವಾಗಿ ಹಾಲಿವುಡ್ಡಿನ ಪ್ರಮಾಣ ಏರುತ್ತಿದೆ. ಹೀಗಾಗಿಯೇ 1950-70ರಲ್ಲಿ ಹಾಲಿವುಡ್ ಚಿತ್ರಗಳು ತಮ್ಮ ಆದಾಯದ ಶೇ. 30ರಷ್ಟು ಭಾಗವನ್ನು ಮಾತ್ರ ಅಮೆರಿಕದ ಹೊರಗಿನಿಂದ ಪಡೆಯುತ್ತಿದ್ದರೆ, ಈಗ ಹಾಲಿವುಡ್ಡಿನ ಆದಾಯದ ಅರ್ಧ ಭಾಗ ಬರುತ್ತಿರುವುದು ಅಮೆರಿಕದ ಹೊರಗಿನ ವೀಕ್ಷಕರಿಂದಲೇ! ಮುಂದಿನ ಇಪ್ಪತ್ತು ವರ್ಷಗಳಲ್ಲಿ ಹಾಲಿವುಡ್ಡಿನ ಮುಕ್ಕಾಲು ಭಾಗ ಆದಾಯ ಹೊರಗಿನ ದೇಶಗಳ ವೀಕ್ಷಕರಿಂದಲೇ ಬರುತ್ತದೆ ಎಂದು ಅಂದಾಜಿಸಲಾಗಿದೆ.

ಹೀಗಾಗಿ ಕ್ರಮೇಣವಾಗಿ ಹಾಲಿವುಡ್ಡಿನ ಚಿತ್ರಗಳನ್ನು ಪ್ರಧಾನವಾಗಿ ಹೊರಗಿನ ದೇಶಗಳ ವೀಕ್ಷಕರನ್ನೇ ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತಿದೆ. ಉದಾಹರಣೆಗೆ ಯುವಜನತೆಯ ಆರಾಧಿಸುವ ಜಾಕಿ ಚಾನ್‌ಗೆ 70ರ ದಶಕದಲ್ಲಿ ಹಾಲಿವುಡ್ಡಿಗೆ ಪ್ರವೇಶವೇ ದೊರೆತಿರಲಿಲ್ಲ. ಒಂದೆರಡು ಚಿತ್ರಗಳಲ್ಲಿ ಅಭಿನಯಿಸಿದ್ದರೂ ಅದನ್ನು ಅಮೆರಿಕನ್ ಮಾದರಿಯಲ್ಲಿ ತಿದ್ದಿತೀಡಲಾಗಿತ್ತು. ಆದರೆ 90ರ ನಂತರ ಅದೇ ಹಾಲಿವುಡ್ ಏಷಿಯಾದ ವೀಕ್ಷಕರನ್ನು ಗಮನದಲ್ಲಿಟ್ಟುಕೊಂಡು ಜಾಕಿಚಾನ್ ಬ್ರಾಂಡಿನ ಚಿತ್ರಗಳನ್ನು ನಿರ್ಮಿಸತೊಡಗಿದೆ.

ಇತ್ತೀಚೆಗೆ ಭಾರತದ ದೊಡ್ಡ ಉದ್ಯಮ ಸಂಸ್ಥೆಗಳ ಕೂಟವಾದ ಸಿಐಐ, ಭಾರತದ ಚಲನಚಿತ್ರೋದ್ಯಮದ ಅಭಿವೃದ್ಧಿ ಸಾಧ್ಯತೆಗಳ ಕುರಿತು ಮಾಡಿದ ಅಧ್ಯಯನದ ಪ್ರಕಾರ ಭಾರತದ ಚಲನ ಚಿತ್ರೋದ್ಯಮ 2010ರ ವೇಳೆಗೆ 14,400 ಕೋಟಿ ರೂಪಾಯಿಗಳ ಬೃಹತ್ ಮಾರುಕಟ್ಟೆಯಾಗಲಿದೆ. ಹಾಲಿವುಡ್ಡಿನ ಖುದ್ದು ಅಧ್ಯಯನದ ಪ್ರಕಾರ ಭಾರತದ ಚಿತ್ರೋದ್ಯಮ 4.1 ಬಿಲಿಯನ್ ಮಾರುಕಟ್ಟೆಯದು. ಇದನ್ನು ಅಮೆರಿಕದ 9 ಬಿಲಿಯನ್ ಮಾರುಕಟ್ಟೆಗೆ ಹೋಲಿಸಿದರೆ ಹಾಲಿವುಡ್ಡಿಗೆ ಭಾರತದ ಮಾರುಕಟ್ಟೆ ಎಷ್ಟು ಮುಖ್ಯವಾದದ್ದು ಎಂಬುದು ಅರ್ಥವಾಗುತ್ತದೆ!

ಆದ್ದರಿಂದ ಈಗ ಹಾಲಿವುಡ್ಡಿನ ಚಾಣಾಕ್ಯರು ಒಂದೆಡೆ ಭಾರತೀಯ ಛಾಯೆಯುಳ್ಳ ಹಾಲಿವುಡ್ ಚಿತ್ರಗಳನ್ನೂ ಮತ್ತೊಂದೆಡೆ ಭಾರತೀಯ ಭಾಷಾ ಚಿತ್ರಗಳನ್ನೂ ನಿರ್ಮಿಸಲು ಮುಂದೆ ಬಂದಿದ್ದಾರೆ. ಹಿಂದಿ, ತಮಿಳು, ತೆಲುಗು, ಮಲಯಾಳಂ ಭಾಷಾ ಚಿತ್ರಗಳಿಗೆ ಕೇವಲ ಭಾರತದಲ್ಲಿ ಮಾತ್ರವಲ್ಲದೆ ಅಮೆರಿಕದಲ್ಲಿ, ಯೂರೋಪಿನಲ್ಲಿ ಮತ್ತು ಏಷಿಯಾದ ಇತರ ದೇಶಗಳಲ್ಲೂ ಮಾರುಕಟ್ಟೆ ಇರುವುದರಿಂದ ಭಾರತೀಯ ಚಿತ್ರೋದ್ಯಮದ ಸಹಕಾರದೊಂದಿಗೆ ಹಾಲಿವುಡ್ಡಿನ ಜಾಗತೀಕರಣವೂ ಯಶಸ್ವಿಯಾಗುತ್ತದೆ ಮತ್ತು ಲಾಭಕರವಾಗುತ್ತದೆ. ಈ ಜಾಗತಿಕ ಜೈತ್ರಯಾತ್ರೆಯ ಭಾಗವಾಗಿಯೇ ಬಾಲಿವುಡ್ಡಿನ ಹಾಲಿವುಡ್ಡೀಕರಣವೂ ಪ್ರಾರಂಭಗೊಂಡಿದೆ. ■

No Comments



"ಪ್ರಜಾಪ್ರಭುತ್ವದಲ್ಲಿ ಸಣ್ಣಪುಟ್ಟ ಭಿನ್ನಾಭಿಪ್ರಾಯ ಇದ್ದದ್ದೇ. ಈಗ ಎಲ್ಲವೂ ಸರಿಯಾಗಿದೆ ಮತ್ತು ನಾನು ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಸಂಪೂರ್ಣವಾಗಿ ಭಾಗವಹಿಸುತ್ತೇನೆ."

-ಸಿದ್ದರಾಮಯ್ಯ



"ರಾಜಕೀಯದ ಗಂಧಗಾಳಿ ಇಲ್ಲದ ಕ್ರಿಕೆಟಿಗರ ಮೇಲೆ ದಾಳಿ ನಡೆಸಿದ್ದು ಅಕ್ಷಮ್ಯ ಅಪರಾಧ."

-ಸೌರವ್ ಗಂಗೂಲಿ

"ಮಾತು ಕೇಳುವ ಮಗನಿಗೆ ತಂದೆ ಏನಾದರೂ ಹೇಳುತ್ತಲೇ ಇರುತ್ತಾನೆ. ಹಾಗೆಯೇ ನನ್ನ ಪಕ್ಷದ ಮುಖಂಡರು ನನಗೆ ಲೋಕಸಭೆಗೆ ಸ್ಪರ್ಧಿಸುವಂತೆ ಹೇಳಿದ್ದಾರೆ. ತಿರಸ್ಕರಿಸುವ ಹಾಗಿಲ್ಲ."

-ರೇವೂ ನಾಯಕ ಬೆಳಮಗಿ

"ಕೆಲವು ಪೊಲೀಸ್ ಪಡೆಗಳಲ್ಲಂತೂ ರಜೆ ಕೊಡಲು ಕೆಲವು ಕಿರಿಯ ಅಧಿಕಾರಿಗಳು ಕಾನ್‌ಸ್ಟೇಬಲ್‌ಗಳಿಂದ ಲಂಚವನ್ನು ಅಪೇಕ್ಷಿಸುತ್ತಾರೆ. ಹೀಗಿರುವಾಗ ಮೇಲಧಿಕಾರಿಯ ಬಗ್ಗೆ ಯಾವ ಭಾವನೆ ಬರಬಹುದು, ನೀವೇ ಊಹಿಸಿ."

- ದಿ.ವಿ.ಗುರುಪ್ರಸಾದ್, ಹಿರಿಯ ಪೊಲೀಸ್ ಅಧಿಕಾರಿ, ಅಂಕಣ ಬರಹದಲ್ಲಿ

"ಕಳೆದ ಲೋಕಸಭೆಯಲ್ಲಿ 57 ಎಂಪಿಗಳು ಯಾವುದೇ ಚರ್ಚೆಯಲ್ಲಿ ಭಾಗವಹಿಸಲಿಲ್ಲ, 78 ಎಂಪಿಗಳು ಒಂದು ಪ್ರಶ್ನೆಯನ್ನೂ ಕೇಳಲಿಲ್ಲ."

-ಪತ್ರಿಕಾ ವರದಿ

ಅಮ್ಮಂದಿರೇ, ಕೇಳಿಸಿಕೊಳ್ಳಿ!



"ಕಾಂಗ್ರೆಸ್ ಅಮ್ಮ-ಮಕ್ಕಳ ಪಕ್ಷ, ಜೆಡಿಎಸ್ ಅಪ್ಪ-ಮಕ್ಕಳ ಪಕ್ಷ, ಬಿಜೆಪಿ ಮಾತ್ರವೇ ಕೇವಲ ಅಪ್ಪಂದಿರ ಪಕ್ಷ...ಬೇಕಾದರೆ ನಮ್ಮ ನಾಯಕರ ಪಟ್ಟಿ ನೋಡಿ-ಯಡಿಯೂರಪ್ಪ, ಈಶ್ವರಪ್ಪ, ಶಿವಪ್ಪ....."

-ವೆಂಕಯ್ಯ ನಾಯ್ಡು

ಹಾಗಾದರೆ ಉಚಿತ ವಿದ್ಯುತ್ ಭರವಸೆ ಯಾವ ಪಕ್ಷದ್ದು?

"ರಾಜ್ಯದ ವಿದ್ಯುತ್ ಬರದ ಬಗ್ಗೆ ನಮ್ಮನ್ನು ಕೇಳಬೇಡಿ. 55 ವರ್ಷಗಳ ಕಾಲ ಕೇಂದ್ರ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸಿದವರನ್ನು ಕೇಳಿ."

-ಯಡಿಯೂರಪ್ಪ

ಈ ಪ್ರಶ್ನೆ ಕೇಳಿದ್ದು ಯಾರು ಗೊತ್ತೆ?

"ಅಷ್ಟಕ್ಕೂ ಈ ರಾಘವೇಂದ್ರ ಯಾರು? ಪಕ್ಷಕ್ಕಾಗಲೀ ಸಮಾಜಕ್ಕಾಗಲೀ ಅವರ ಕೊಡುಗೆ ಏನು? ಯಡಿಯೂರಪ್ಪನವರ ಮಗ ಅನ್ನುವುದು ಬಿಟ್ಟರೆ ಅವರಿಗಿರುವ ಅರ್ಹತೆಯಾದರೂ ಏನು?"

- ವಿಶ್ವೇಶ್ವರ ಭಟ್ಟ, ವಿಕದ ತಮ್ಮ ಅಂಕಣದಲ್ಲಿ

ಆಚಾರವಿಲ್ಲದ ನಾಲಿಗೆ

"ವಂಶಪರಂಪರೆಯನ್ನು ನಾವೆಷ್ಟೇ ವಿರೋಧಿಸಿದರೂ ಮತದಾರರು ಅದಕ್ಕೆ ಮನ್ನಣೆ ನೀಡುತ್ತಾ ಬಂದಿದ್ದಾರೆ. ನನ್ನ ಮಗ ಕೂಡಾ ಆತನ ಗೆಲ್ಲುವ ಸಾಮರ್ಥ್ಯದಿಂದಲೇ ಟಿಕೆಟ್ ಪಡೆದಿದ್ದಾನೆ."

-ಯಡಿಯೂರಪ್ಪ

ಇದೇನು ಆತ್ಮ ವಿಮರ್ಶೆಯೋ? ಹೆಗ್ಗಳಿಕೆಯೋ?

"ರಾಜ್ಯದಲ್ಲಿ ಬಿಜೆಪಿ ಮೊದಲ ಬಾರಿಗೆ ಅಧಿಕಾರದ ರುಚಿ ಅನುಭವಿಸಲು ಈ ತೃತೀಯ ದರ್ಜೆ ಪಕ್ಷವೇ ಕಾರಣ ಎಂಬುದನ್ನು ವೆಂಕಯ್ಯ ನಾಯ್ಡು ಮರೆಯಬಾರದು."

-ಹೆಚ್.ಡಿ.ಕುಮಾರಸ್ವಾಮಿ


ಆಹಾ ಆತ್ಮರತಿಯೇ!

"ಇಂದಿನ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ, ಧರ್ಮ ಮತ್ತು ಚರಿತ್ರೆ ಕುರಿತ ಪ್ರಚಲಿತ ಸಮಾಜವಾದಿ ನಿಲುವುಗಳಿಗೆ ಸದೃಶವಾಗಿ ಹೊಸದೊಂದು ಸ್ಪೇಸ್ ನಿರ್ಮಿಸುವ ನನ್ನ ಪ್ರಯತ್ನದ significance ಅನ್ನು ಅವರು (ವಿಮರ್ಶಕ ಕೆ.ಸತ್ಯನಾರಾಯಣ ಅವರು) ಅಷ್ಟೇನೂ ವಿವರವಾಗಿ ಗಮನಿಸಿದಂತಿಲ್ಲ."

- ಡಿ.ಎಸ್. ನಾಗಭೂಷಣ, ತನ್ನ ಬರಹದ ವಿಮರ್ಶೆಗೆ ಉತ್ತರಿಸುತ್ತಾ

ಒಂದು ಒಳ್ಳೆಯ ಮಾತು

"ಕಲಾವಿದರಿಗೆ ಜಾತಿ, ಧರ್ಮ, ಭಾಷೆಯ ಬೇಧ-ಭಾವ ಇಲ್ಲ, ನಮ್ಮ ನಡುವೆ ದೇವರೂ ಅಡ್ಡ ಬರಲು ಸಾಧ್ಯವಿಲ್ಲ. ಧರ್ಮ, ದೇವರು, ಜಾತಿ ಇಲ್ಲದೆ ನಾನು ಇಷ್ಟು ಕಾಲ ಜೀವನ ನಡೆಸಿರುವೆ. ಈ ಪಯಣದಲ್ಲಿ ನನ್ನನ್ನು ರಕ್ಷಿಸಿದ್ದು ಕಲಾವಿದರು ಮತ್ತು ಅಭಿಮಾನಿಗಳು. ನಾನು ತಮಿಳಿಗ. ಆದರೆ ನನ್ನ ಗುರು ತಾಯ್ ನಾಗೇಶ್ ನಿಮ್ಮವರು. ಜೊತೆಗೆ ಜಿ.ವಿ. ಅಯ್ಯರ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಲಂಕೇಶ್, ಕಾರಂತ್ ಮತ್ತಿತರರು ಕಲಾ ಮಾಧ್ಯಮದಿಂದ ಭಾಷೆಯ ಗಡಿಯನ್ನು ಮೀರಿ ನಮ್ಮವರೂ ಆಗಿದ್ದಾರೆ."



- ಕಮಲ್ ಹಾಸನ್

ಚಿಂತಕರ ಚಾವಡಿ

ಒಂದರ್ಥದಲ್ಲಿ ಎಲ್ಲಾ ಕಥೆಗಳು ಯಾವುದಾದರೂ 'ಆತ್ಮ'ದ ಕಥೆಗಳೇ!

"ಕನ್ನಡ ಲೇಖಕಿಯರು ಇವರಂತೆ ಬರೆದಿಲ್ಲ, ಮರಾಠಿ ಲೇಖಕಿಯರಂತೆ ಆತ್ಮಕಥೆಗಳನ್ನು ಬರೆದಿಲ್ಲ, ಇಂಗ್ಲಿಷರಂತೆ ಪತ್ತೇದಾರಿ ಕಾದಂಬರಿಗಳನ್ನು ಬರೆದಿಲ್ಲ, ಬಂಗಾಳಿಯರಂತೆ ದೇಶಪ್ರೇಮ ಗೀತೆಗಳನ್ನು ಬರೆದಿಲ್ಲ, ಇತ್ಯಾದಿ ಹೋಲಿಕೆಗಳನ್ನು ಮೊದಲು ನಿಲ್ಲಿಸಿ. ಹಾಗೆ ನೋಡಿದರೆ ವಿಶ್ವ ಸಾಹಿತ್ಯಕ್ಕೆ ಹೋಲಿಸಿದಾಗ ಕನ್ನಡದಲ್ಲಿ ಬರೆಯದೇ ಇರುವುದು ಬೇಕಾದಷ್ಟಿದೆ. ತಮಿಳುನಾಡಲ್ಲಿ ಇಪ್ಪತ್ತು ವರ್ಷದ ಹಿಂದೆಯೇ ಸ್ತ್ರೀ ಆತ್ಮಹತ್ಯಾ ಬಾಂಬರುಗಳು ಬಂದಿದ್ದರೂ ಕರ್ನಾಟಕದಲ್ಲಿ ಏಕೆ ಕಾಣಿಸಿಕೊಂಡಿಲ್ಲ? ಆಂಧ್ರದಲ್ಲಿ ನಲವತ್ತು ವರ್ಷದ ಹಿಂದೆಯೇ ನಕ್ಸಲ್ ಮಹಿಳೆಯರು ಕಾಣಿಸಿಕೊಂಡರೂ ಕರ್ನಾಟಕದಲ್ಲಿ ಯಾಕಿಷ್ಟು ತಡವಾಯಿತು, ಅಂತಹ ವಾತಾವರಣವಿರಲಿಲ್ಲವೇ? ಪಾಶ್ಚಾತ್ಯ ಮಹಿಳೆಯರು ಬೇಜಾರಾದಾಗಲೆಲ್ಲಾ ಗಂಡಂದಿರನ್ನು ಬದಲಾಯಿಸುತ್ತಾರೆ, ಕನ್ನಡದ ಮಹಿಳೆಗೆ ಇನ್ನೂ ಬೇಜಾರಾಗಿಲ್ಲವೇ? ಇಂತಹ ಪ್ರಶ್ನೆಗಳನ್ನು ಕೇಳುವುದೊಂದು ಬಾಕಿ ಇದೆ...(ಕನ್ನಡ ಮಹಿಳೆಯರ) ವ್ಯಕ್ತಿತ್ವಗಳು ಅನೇಕವಿದ್ದರೂ ಅವರೊಳಗಿನ ಹಿರಿಮೆ ಅವರಿಗೇ ತಿಳಿಯದಾಗಿದೆ. ಇದು ಕನ್ನಡ ಹೆಂಗಸರ ವಿನಯ. ಹೀಗಾಗಿಯೇ ಇಲ್ಲಿ ಆತ್ಮಕಥೆ ಕಡಿಮೆ."

- ಲಲಿತಾ ಸಿದ್ದಬಸವಯ್ಯ, ಲೇಖಕಿ


ಒಂದು ಪೊಲೀಸ್ ವಿಚಾರಣೆಯ ಸ್ಯಾಂಪಲ್....



ಕಂಡಹಾಗೆ

■ ಗೌರಿ ಲಂಕೇಶ್

ಕಳೆದ ವಾರ ನನ್ನ ಗೆಳತಿ ಮತ್ತು ನಮ್ಮ ಹೋರಾಟಗಳಲ್ಲಿ ಸಕ್ರಿಯವಾಗಿರುವ ನಮ್ಮೆಲ್ಲರ ಹಿತೆಯಾದ ಸಂಜನಾಳ ಮೇಲೆ ಹಲ್ಲೆಯಾಯಿತು. ಅಂದು ರಾತ್ರಿ ಸುಮಾರು ಹತ್ತು ಗಂಟೆಗೆ ಆಕೆ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಆಕೆಯ ಸ್ಕೂಟರ್ ಪಂಕ್ಚರ್ ಆಯಿತು. ಆಗ ಅದನ್ನು ಯಾವುದೋ ಒಂದು ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ನಿಲ್ಲಿಸಿ ಆಟೋ ರಿಕ್ಷಾ ಹತ್ತಲು ಸಂಜನಾ ಹೋಗುತ್ತಿದ್ದಾಗ ಅದೆಲ್ಲಿಂದಲೋ ಮೋಟರ್ ಬೈಕ್ ಮೇಲೆ ಒಂದು ಇಬ್ಬರು ಪುರುಷರು ಏಕಾಏಕಿ ಆಕೆಯ ಮುಖಕ್ಕೆ ಹೊಡೆದರು. ಆ ಅನಿರೀಕ್ಷಿತ ಧಾಳಿಯಿಂದ ಸಂಜನಾಳಿಗೆ ಶಾಕ್ ಆದರೂ ಆಕೆ ಬೈಕಿನ ಹಿಂದಿನ ಸೀಟಿನಲ್ಲಿ ಕೂತಿದ್ದವನ ಶರ್ಟ್ ಹಿಡಿದು ಎಳೆದಳು. ಆಕೆ ಎಷ್ಟು ಗಟ್ಟಿಯಾಗಿ ಎಳೆದಿದ್ದಾಳೆಂದರೆ ಬೈಕ್ ಮೇಲಿದ್ದ ಇಬ್ಬರೂ ನೆಲಕ್ಕೆ ಬಿದ್ದರು. ಅಷ್ಟೊತ್ತಿಗೆ ಸಂಜನಾಳ ಶಾಕ್ ಕೋಪಕ್ಕೆ ತಿರುಗಿ ಆಕೆ ಅವರಿಬ್ಬರನ್ನು ಬೈಯಲಾರಂಭಿಸಿದಳು. ಕೂಡಲೇ ಅವರಿಬ್ಬರು ಬೈಕನ್ನು ಹತ್ತಿ ಪರಾರಿಯಾದರು.



ಇದೆಲ್ಲ ಕಲವೇ ಕ್ಷಣಗಳಲ್ಲಿ ನಡೆದುಹೋಗಿದೆ. ಇಷ್ಟೇ ಅಲ್ಲ, ಕಳೆದ ಒಂದು ತಿಂಗಳಲ್ಲೇ ಬೆಂಗಳೂರಿನಲ್ಲಿ ಇಂತಹ ಕನಿಷ್ಠ ಎಂಟು ಪ್ರಕರಣಗಳು ಸಂಭವಿಸಿವೆ. ಇವೆಲ್ಲ ವರದಿಯಾದ ಪ್ರಕರಣಗಳು. ವರದಿಯಾಗದೇ ಇರುವ ಇನ್ನೆಷ್ಟು ಪ್ರಕರಣಗಳು ಸಂಭವಿಸಿವೆಯೋ?

ಸಂಜನಾ ಮತ್ತು ಇತರೆ ಹತ್ತಾರು ಮಹಿಳೆಯರ ಮೇಲೆ ಇಂತಹ ದಾಳಿಗಳಾಗುತ್ತಿರುವ ಆಕಸ್ಮಿಕವೂ ಅಲ್ಲ, ಅಪರೂಕ್ಕೊಮ್ಮೆ ಆದಂತಹವೂ ಅಲ್ಲ. ಬದಲಾಗಿ ಬಜೆಪಿ ಸರ್ಕಾರ ಅಧಿಕಾರದಲ್ಲಿ ಇರುವ ತನಕ ಯಾರು ಬೇಕಾದರೂ ಕಂಡಕಂಡ ಮಹಿಳೆಯರ ಮೇಲೆ ವಿನಾಕಾರಣ ದಾಳಿ ಮಾಡಿಯೂ ದಕ್ಕಿಸಿಕೊಳ್ಳಬಹುದೆಂಬ ವಾತಾವರಣ ಸೃಷ್ಟಿಯಾಗಿದೆ.

ಆ ದಾಳಿಯಲ್ಲಿ ಸಂಜನಾಳಿಗೆ ದೈಹಿಕವಾಗಿ ಹೆಚ್ಚು ಪೆಟ್ಟಾಗಲಿಲ್ಲ, ಎರಡು ದಿನಗಳ ಕಾಲ ಆಕೆಯ ಗದ್ದ ಊದಿಕೊಂಡಿತ್ತು, ಭುಜದಲ್ಲಿನ ನೋವು ಇವತ್ತಿಗೂ ಕಾಡುತ್ತಿದೆ. ಆದರೆ ಅಪಾರವಾಗಿ ಘಾಸಿ ಆಗಿದ್ದು ಸಂಜನಾಳ ಸಾಮಾಜಿಕ ಪ್ರಜ್ಞೆಗೆ. ಸುಶಿಕ್ಷಿತಳಾದ, ಸುಲಭವಾಗಿ ಹೆದರುವವಳಲ್ಲದ, ತನ್ನ ರಕ್ಷಣೆ ಮತ್ತು ಹಕ್ಕುಗಳಿಗಾಗಿ ದನಿ ಎತ್ತಬಲ್ಲ ತನಗೇ ಹೀಗಾದರೆ ಇನ್ನು ಅರಕ್ಷಿತ ಹೆಚ್ಚು ಧೈರ್ಯವಿಲ್ಲದ ಮಹಿಳೆಯರ ಮೇಲೆ ಇಂತಹ ದಾಳಿ ನಡೆದರೆ ಅವರು ಅದನ್ನು ಎದುರಿಸಲಾಗುವುದಿಲ್ಲ ಎಂಬುದೇ ಸಂಜನಾಳ ಚಿಂತೆ.

ಈ ಪ್ರಕರಣವಾದ ನಂತರ ಸಂಜನಾ, ಆಕೆಯ ಸ್ನೇಹಿತರು ಮತ್ತು ಮಹಿಳೆಯರ ಮೇಲೆ ಇಂತಹ ದೌರ್ಜನ್ಯಗಳನ್ನು ಖಂಡಿಸುವ ಹಲವರು ಬೆಂಗಳೂರಿನ ಪೊಲೀಸ್ ಕಮೀಷನರ್ ಶಂಕರ್ ಬಿದರಿಯವರ ಕಚೇರಿ ಮುಂದೆ ಪ್ರತಿಭಟನೆಯೊಂದನ್ನು ಹಮ್ಮಿಕೊಂಡರು. ಅವರ ಬೇಡಿಕೆ ಸಂಜನಾ ಮತ್ತು ಇತ್ತೀಚೆಗೆ ಇತರ ಮಹಿಳೆಯರ ಮೇಲೆ ದಾಳಿ ಮಾಡಿದವರನ್ನು ಬಂಧಿಸಿ ಎಂಬುದಾಗಿರಲಿಲ್ಲ. (ಅವತ್ತಿನ ಕತ್ತಲ ರಾತ್ರಿಯಲ್ಲಿ ಕ್ಷಣಾರ್ಧದಲ್ಲಿ ಸಂಜನಾಳ ಮೇಲೆ ದಾಳಿ ಮಾಡಿದವರನ್ನು ಪ್ರಾಯಶಃ ಆಕೆ ಗುರುತಿಸಲಾಗುವುದಿಲ್ಲ). ಬದಲಾಗಿ ಅವರು ಬಿದರಿಯವರಲ್ಲಿ ಕೇಳಿದ್ದು "ಇಂತಹ ದಾಳಿಗಳನ್ನು ತಡೆಯಬೇಕು. ಆ ನಿಟ್ಟಿನಲ್ಲಿ ಇಂತಹ ದೌರ್ಜನ್ಯಕ್ಕೆ ಕಾನೂನಿನಡಿ ಎಂತಹ ಶಿಕ್ಷೆ ವಿಧಿಸಲಾಗುತ್ತಿದೆ ಎಂಬ ಪ್ರಜಾರಾಂದೋಲನವನ್ನು ಹಮ್ಮಿಕೊಳ್ಳಿ" ಎಂಬುದನ್ನಷ್ಟೆ.

ಇದಕ್ಕೆ ಬಿದರಿ ಮಹಾಶಯರು ಕೊಟ್ಟ ಉತ್ತರವೇನು ಗೊತ್ತೆ? "ಇದೊಂದು ಸ್ಪ್ರೇ ಇನ್‌ಸಿಡೆಂಟು. ಬೆಂಗಳೂರು ಸುಸಂಸ್ಕೃತ ನಗರ. ಇಲ್ಲಿ ಮಹಿಳೆಯರ ಮೇಲೆ ಇಂತಹ ದಾಳಿಗಳು ನಡೆಯುವುದಿಲ್ಲ, ಕಾನೂನಿನಡಿ ಮಹಿಳೆಯರ ಮೇಲಿನ ದಾಳಿ ಶಿಕ್ಷಾರ್ಹ. ಆದರೆ ಎಂತಹ ಶಿಕ್ಷೆ ಎದುರಿಸಬೇಕಾಗುತ್ತದೆ ಎಂಬುದರ ಬಗ್ಗೆ ಪ್ರಚಾರಾಂದೋಲನದ ಅಗತ್ಯವಿಲ್ಲ, ಈ ಕಾನೂನನ್ನು 1800 ರ ದಶಕದಲ್ಲೇ ರೂಪಿಸಿದ್ದರಿಂದ ಎಲ್ಲರಿಗೂ ಕಾನೂನು ಗೊತ್ತಿದೆ. ನೀವೇ ಬೇಕಿದ್ದರೆ ಅಂತಹ ಒಂದು ಪ್ರಚಾರಾಂದೋಲನವನ್ನು ಕೈಗೆತ್ತಿಕೊಳ್ಳಿ. ಆದರೆ ಲೋಕಸಭಾ ಚುನಾವಣೆಗಳು ಮುಗಿದ ನಂತರ ಮಾತ್ರ." Of course, ಬಿದರಿ ಸಾಹೇಬರು ಈ ಎಲ್ಲ ಸಲಹೆಗಳನ್ನು ತಮ್ಮ ಎಂದಿನ ಹುಬ್ಬೇರಿಸಿಕೊಂಡು "ಗೊತ್ತಾಯ್ತಾ?" ಎಂದು ಕೇಳುವ ರೀತಿಯಲ್ಲೇ ನೀಡಿದರು.

ಬಿದರಿ ಸಾಹೇಬರ ಬೋಧನೆಗಳನ್ನು ಕೇಳಿ ಬೇಸತ್ತ ಪ್ರತಿಭಟನಾಕಾರರು "ಹೋಗಲಿ, ಇಂತಹ ದಾಳಿಗಳು ನಡೆದಾಗಲಾದರೂ ದೂರುಗಳನ್ನು ಕೂಡಲೇ ದಾಖಲಿಸಿಕೊಳ್ಳುವಂತೆ ಪೊಲೀಸರಿಗೆ ಆದೇಶಿಸಿ" ಎಂದು ಕೋರಿದರು.

ಆಗ ಬಿದರಿಯವರು "ಹಾಗೇನಿಲ್ಲ, ದೂರು ದಾಖಲಿಸಿಕೊಳ್ಳದ 29 ಪೊಲೀಸರನ್ನು ಮೊನ್ನೆ ತಾನೆ ವಜಾಗೊಳಿಸಿದ್ದೇನೆ. ಇತ್ತೀಚೆಗೆ ಈ ರಾಷ್ಟ್ರೀಯ ಮಾನವಹಕ್ಕುಗಳ ಕಮಿಷನ್, ರಾಜ್ಯ ಮಾನವಹಕ್ಕುಗಳ ಕಮಿಷನ್‌ಗಳೆಲ್ಲಾ ಬಂದು ಪೊಲೀಸರ‍್ಯಾರೂ ಪುರುಷರಾಗಿ ಉಳಿದಿಲ್ಲ" ಎಂದಿದ್ದಾರೆ. ಇದನ್ನು ಕೇಳಿ ದಂಗಾದ ಪ್ರತಿಭಟನಾಕರರು ಸುಮ್ಮನೆ ವಾಪಸ್ಸು ಹೋಗಿದ್ದಾರೆ.

ಇದಾದ ಕೆಲ ದಿನಗಳ ನಂತರ ಹಲವು ಪತ್ರಿಕೆಗಳಿಗೆ ಸಂದರ್ಶನ ನೀಡಿದ ಬಿದರಿಯವರು "ತಮ್ಮ ಮೇಲೆ ದಾಳಿಯಾಗಿದೆ ಎಂದು ದೂರು ಕೊಟ್ಟಿರುವ ಮಹಿಳೆಯರ ಸಾಚಾತನವನ್ನೇ ತನಿಖೆಗೆ ಒಳಪಡಿಸಬೇಕಿದೆ. ಇದರ ಹಿಂದೆ ರಾಜಕೀಯ ಪಿತೂರಿ ಇರಬಹುದು. ಸಂಜನಾಳಿಗೆ ಆರು ಬಾರಿ ನೋಟೀಸ್‌ಗಳನ್ನು ಕಳುಹಿಸಿದ್ದರೂ ಆಕೆಯೇ ಅವುಗಳಿಗೆ ಸ್ಪಂದಿಸಿಲ್ಲ" ಎಂದೆಲ್ಲ ಬೇಕಾಬಿಟ್ಟಿ ಆರೋಪಿಸಿದ್ದಾರೆ.

ಪೊಲೀಸ್ ಕಮಿಷನ್ನರೇ ಇಂತಹ ನಿಲುವು ತೆಗೆದುಕೊಂಡರೆ, ಇನ್ನು ಅವರ ಅಧೀನದಲ್ಲಿ ಕೆಲಸ ಮಾಡುವ ಪೊಲೀಸರು ಹೇಗೆ ವರ್ತಿಸಬಹುದು? ಸಂಜನಾಳಿಗಾದ ಅನುಭವ ಅಘಾತಕಾರಿಯಾಗಿದೆ.

ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ಸಂಜಾಳನ್ನು ಕರೆಸಿಕೊಂಡ ಎಸಿಪಿ ಪಿ. ಲಕ್ಷ್ಮಣ್ ಮತ್ತು ಇನ್ಸ್‌ಪೆಕ್ಟರ್‌ಗಳಾದ ಲೋಕೇಶ್ವರ್ ಹಾಗೂ ಜಗದೀಶ್ ಎಂಬುವವರು ಆಕೆಯ ಮೇಲೆ ಹಲ್ಲೆ ಮಾಡಿದವರನ್ನು ಪತ್ತೆಹಚ್ಚುವ ಬದಲು, ಸಂಜನಾಳನ್ನೇ ವಿಚಾರಣೆಗೆ ಒಳಪಡಿಸಿದ್ದಾರೆ. ಆಕೆಯನ್ನು ಆ ಪೊಲೀಸ್ ಅಧಿಕಾರಿಗಳ ಕೇಳಿದ ಪ್ರಶ್ನೆಗಳಲ್ಲಿ ಹಲವು ಹೀಗಿವೆ:

* ನಿನಗೆ 28 ವರ್ಷವಾದರೂ ಮದುವೆ ಆಗಿಲ್ಲ. ಸಾಮಾನ್ಯವಾಗಿ ಮದುವೆಯಾಗದ ಹುಡುಗಿಯರು ಇಂತಹ ದಾಳಿ ನಡೆದಾಗ ತಮ್ಮ ತಂದೆಗೆ ಮೊದಲು ಫೋನ್ ಮಾಡುತ್ತಾರೆ. ಆದರೆ ನೀನು ನಿನ್ನ ಸ್ನೇಹಿತರಿಗೆ ಫೋನ್ ಮಾಡಿದ್ದು ಯಾಕೆ?
* ನೀನು ಯಾವ, ಯಾವ ಸಂಘಟನೆಗಳ ಸದಸ್ಯೆಯಾಗಿದ್ದೀಯಾ?
* ನೀನು ಓದಿರುವುದು ಪೊಲಿಟಿಕಲ್ ಸೈನ್ಸ್. ಆದರೆ ನೀನು ಹೇಗೆ ತೆಹಲ್ಕಾ ಪತ್ರಿಕೆಯ ವರದಿಗಾರ್ತಿಯಾಗಿದ್ದೀ?
* ಕೆಲಸದ ಪ್ರಯುಕ್ತ ಸಂತ ಕಬೀರನ ಸಂಗೀತೋತ್ಸವಕ್ಕೆ ಹೋಗಿದ್ದೆ ಎಂದೆ. ಯಾರ ಜೊತೆ ಹೋಗಿದ್ದೆ?
* ನಿಜವಾಗಲೂ ನಿನ್ನ ಗಾಡಿ ಪಂಕ್ಚರ್ ಆಯಿತಾ? ಪಂಕ್ಚರ್ ಆಗಿದ್ದ ಸ್ಕೂಟರ್ ಅನ್ನು ತಳ್ಳಿಕೊಂಡು ಹೋಗುವ ಶಕ್ತಿ ನಿನಗೆ ಹೇಗೆ ಬಂತು?

ಒಟ್ಟಾರೆ ಅವರ ಧಾಟಿ ದಾಳಿಗೊಳಗಾದ ಸಂಜನಾಳೇ ಅಪರಾಧಿ, ಆಕೆ ಪೊಲೀಸರಿಗೆ ದೂರು ನೀಡಿದ್ದೇ ದೊಡ್ಡ ತಪ್ಪು ಎಂಬಂತಿತ್ತು.

ಸಂಜನಾಳಂತೆ ದಾಳಿಗೊಳಗಾದ ಗೀತಾಂಜಲಿ

▶▶▶ 5

ಊದಿಕೊಳ್ಳುತ್ತಿರುವ ಬಲೂನ್ !

ಈ ಮಾತು ಕೇರಳಕ್ಕೆ ಚೆನ್ನಾಗಿ ಒಪ್ಪುತ್ತದೆ. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಭೀಕರ ಪರಿಣಾಮಗಳು ಭಾರತದ ಉಳಿದೆಲ್ಲಾ ರಾಜ್ಯಗಳಿಗಿಂತ Money Order Economy ಎಂದೇ ಪರಿಗಣಿತವಾಗಿರುವ ಕೇರಳವನ್ನು ಹೆಚ್ಚಾಗಿ ಬಾಧಿಸಲಾರಂಭಿಸಿವೆ. ಗಲ್ಫ್ ದೇಶಗಳಲ್ಲಿ ಅಪಾರ ಸಂಖ್ಯೆಯಲ್ಲಿರುವ ಮಲೆಯಾಳಿಗಳು ಈಗ ಉದ್ಯೋಗ ಕಳೆದುಕೊಂಡು ತಾಯ್ನಾಡಿಗೆ ಹಿಂತಿರುಗುತ್ತಿದ್ದಾರೆ.

ಕೇರಳದ ಒಟ್ಟು ಜನಸಂಖ್ಯೆ ಸುಮಾರು ಮೂರು ಕೋಟಿ. ಅದರಲ್ಲಿ ಮೂವತ್ತೈದು ಲಕ್ಷದಷ್ಟು ಜನ (ಶೇ.30ಕ್ಕಿಂತ ಜಾಸ್ತಿ) ವಿದೇಶಗಳಿಗೆ ಉದ್ಯೋಗವನ್ನರಸಿಕೊಂಡು ಹೋಗಿದ್ದಾರೆ. ಪ್ರಾಯಶಃ ಭಾರತದ ಬೇರಾವ ರಾಜ್ಯವೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿದೇಶಕ್ಕೆ ಹೋಗಿಲ್ಲ. ವಿದೇಶಕ್ಕೆ ಹೋಗಿರುವ ಈ ಮೂವತ್ತೈದು ಲಕ್ಷ ಮಲೆಯಾಳಿಗಳಲ್ಲಿ ಸುಮಾರು 25 ಲಕ್ಷ ಜನ ಗಲ್ಫ್ ದೇಶಗಳಲ್ಲಿದ್ದಾರೆ. ವಿದೇಶದಲ್ಲಿರುವ ಒಬ್ಬೊಬ್ಬ ಮಲೆಯಾಳಿ ವ್ಯಕ್ತಿಯ ಮೇಲೆ ಕೇರಳದಲ್ಲಿ ಐದೈದು ಜನ ಅವಲಂಬಿತರಾಗಿದ್ದಾರೆ. ಅಂದರೆ, ಕೇರಳದ ಮೂರು ಕೋಟಿ ಜನರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ವಿದೇಶಗಳಿಂದ ಮಲೆಯಾಳಿ ಉದ್ಯೋಗಿಗಳು ಕಳಿಸುವ ಮನಿ ಆರ್ಡರ್ ಹಣವನ್ನೇ ಆಶ್ರಯಿಸಿದ್ದಾರೆ. ಅವರಲ್ಲಿ ಗಲ್ಫ್ ದೇಶಗಳಿಂದ ಬರುವ ಹಣವನ್ನು ಆಶ್ರಯಿಸಿರುವವರು ಹೆಚ್ಚೂ ಕಡಿಮೆ ಒಂದೂ ಕಾಲು ಕೋಟಿಗಿಂತ ಜಾಸ್ತಿಯಿದ್ದಾರೆ.

ಈಗ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಹಿಂದೆಂದೂ ಕೇಳಿ ಕಂಡರಿಯದಷ್ಟು ಅಪಾರವಾಗಿ ಕುಸಿದಿದೆ. ಒಂದು ಬ್ಯಾರಲ್ ಕಚ್ಚಾ ತೈಲಕ್ಕೆ 147 ಡಾಲರ್ ಇದ್ದದ್ದು ಈಗ 42 ಡಾಲರ್‌ಗೆ ಬಂದಿದೆ. ಅದು ಇನ್ನೂ 25 ಡಾಲರ್‌ಗೆ ಬರುವ ನಿರೀಕ್ಷೆಯಿದೆ ಎಂದು ಅಂದಾಜಿಸಲಾಗುತ್ತಿದೆ. ವಾಸ್ತವದಲ್ಲಿ ಇದು ಪೆಟ್ರೋಲಿಯಂ ಉತ್ಪಾದನೆಯನ್ನೇ ಆಧರಿಸಿರುವ ಗಲ್ಫ್ ದೇಶಗಳ ಮೇಲೆ ತೀವ್ರತರವಾದ ಅಡ್ಡ ಪರಿಣಾಮಗಳನ್ನು ಬೀರುತ್ತಿದೆ. ತೈಲೋತ್ಪನ್ನ ಮಾಡುತ್ತಿದ್ದ ಕಂಪನಿಗಳು ಬೆಲೆ ಕುಸಿತದ ಕಾರಣದಿಂದಾಗಿ ಉತ್ಪಾದನೆಯನ್ನು ಒಂದೋ ಭಾರೀ ಪ್ರಮಾಣದಲ್ಲಿ ಕಡಿಮೆಗೊಳಿಸಿವೆ ಇಲ್ಲವೇ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿವೆ. ಇದರಿಂದಾಗಿ ಇಡೀ ಗಲ್ಫ್ ಪ್ರದೇಶದಲ್ಲಿ ನಿರುದ್ಯೋಗ ಬಹುದೊಡ್ಡ ಪ್ರಮಾಣದಲ್ಲಿ ತಾಂಡವವಾಡಲಾರಂಭಿಸಿದೆ. 2008ರಲ್ಲಿ ಶೇ. 6.8ರಷ್ಟಿದ್ದ ಗಲ್ಫ್ ಪ್ರದೇಶದ ಆರ್ಥಿಕಾಭಿವೃದ್ಧಿಯ ದರ 2009ರಲ್ಲಿ 3.5ಕ್ಕಿಂತ ಕಡಿಮೆಗೆ ಕುಸಿಯುವ ಸಾಧ್ಯತೆಯಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜಿಸಿದೆ. ಇದೆಲ್ಲದರ ಪರಿಣಾಮವಾಗಿ ಗಲ್ಫ್ ಪ್ರದೇಶದಲ್ಲಿ ಕೆಲಸ ಕಳೆದುಕೊಂಡು ಕೇರಳಕ್ಕೆ ಮರಳುವ ಮಲೆಯಾಳಿಗಳ ಪ್ರಮಾಣವೂ ದೊಡ್ಡ ಮಟ್ಟದಲ್ಲಿ ಪ್ರಾರಂಭವಾಗಿದೆ. 2008ರ ಸೆಪ್ಟೆಂಬರ್‌ನಿಂದೀಚೆಗೆ ಗಲ್ಫ್ ರಾಷ್ಟ್ರಗಳಿಂದ ಕೇರಳಕ್ಕೆ ಎಷ್ಟು ಜನ ವಾಪಸ್ಸಾಗಿದ್ದಾರೆ ಎಂಬ ನಿಖರ ಮಾಹಿತಿ ಲಭ್ಯವಿಲ್ಲವಾದರೂ ಗಲ್ಫ್‌ನಿಂದ one side ಟಿಕೆಟ್ ಬುಕ್ ಮಾಡಿಸಿಕೊಂಡು ಮರಳುತ್ತಿರುವವರ ಸಂಖ್ಯೆ ಜಾಸ್ತಿಯಾಗಿದೆ ಎಂದು ಹಲವಾರು ಟ್ರಾವೆಲ್ ಏಜೆನ್ಸಿಗಳು ಹೇಳಿವೆ.

ನಿರುದ್ಯೋಗಿಗಳಾಗಿ ಹಿಂಡುಹಿಂಡಾಗಿ ಮರಳುತ್ತಿರುವ ಜನರನ್ನು ಕಂಡು ಖುದ್ದು ಕೇರಳ ಸರ್ಕಾರವೇ ದಂಗಾಗಿ ಹೋಗಿದೆ. ರಾಜ್ಯದ ಹಣಕಾಸು ಮಂತ್ರಿ ಗಲ್ಫ್‌ನಿಂದ ನಿರುದ್ಯೋಗಿಗಳಾಗಿ ಬರುತ್ತಿರುವ ಜನರಿಗೆ ಉದ್ಯೋಗ ಕೊಡುವುದಕ್ಕಾಗಿ 10 ಸಾವಿರ ಕೋಟಿ ರೂಪಾಯಿಗಳಷ್ಟು ವಿವಿಧ ಯೋಜನೆಗಳಲ್ಲಿ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಈಗ್ಗೆ ಮೂರು ತಿಂಗಳ ಹಿಂದೆಯೇ ಅವರು "ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ಕೇರಳದಲ್ಲಿ 15 ಲಕ್ಷ ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ" ಎಂದು ಎಚ್ಚರಿಸಿದ್ದರು. ಈಗ ನಿರುದ್ಯೋಗಿಗಳ ಪ್ರಮಾಣ ಅದಕ್ಕಿಂತಲೂ ಜಾಸ್ತಿಯಾಗುವ ನಿರೀಕ್ಷೆಯಿದೆ.

ಸಾರಾಂಶೀಕರಿಸಿ ಹೇಳುವುದಾದರೆ ಗಲ್ಫ್ ಆದಾಯವನ್ನೇ ನೆಚ್ಚಿಕೊಂಡಿದ್ದ ಕೇರಳ ಎಂಬ ಬಲೂನು ಊದಿಕೊಳ್ಳುತ್ತಿದೆ. ಯಾವಾಗ ಸಂಕ್ಷೋಭೆಯಾಗಿ ಒಡೆದುಕೊಳ್ಳುತ್ತೋ ಗೊತ್ತಿಲ್ಲ. ■

'ನೂರಾರು ಹೂಗಳು ಅರಳಲಿ...'

ಅಮೆರಿಕದ ಬರಹಗಾರ ಪೀಟರ್ ಹೆಸ್ಸಿ ಬರೆದಿರುವ ಆಧ್ಯಾತ್ಮಿಕ ಗುರು ಅರಬಿಂದೋ ಅವರ ಜೀವನ ಚರಿತ್ರೆಯ ಪುಸ್ತಕ Lives of Sri Aurobindo ಅನ್ನು ಒರಿಸ್ಸಾ ಸರ್ಕಾರ ನಿಷೇಧಿಸಿದೆ. ಪುಸ್ತಕದಲ್ಲಿ ಅರಬಿಂದೋ ಅವರ ವ್ಯಕ್ತಿತ್ವಕ್ಕೆ ಕಳಂಕ ತರುವಂತಹ ವಿಚಾರಗಳಿದ್ದು ಇದರಿಂದ ಲಕ್ಷಾಂತರ ಅರಬಿಂದೋ ಅನುಯಾಯಿಗಳ ಭಾವನೆಗೆ ಘಾಸಿಯುಂಟಾಗುತ್ತದೆ ಎಂಬ ಕಾರಣವನ್ನು ಕೋರ್ಟಿನಲ್ಲಿ ಸರ್ಕಾರ ಹೇಳಿದೆ. ಹೆಚ್ಚೂಕಡಿಮೆ ಇದೇ ವಾದವನ್ನು ಕೇಂದ್ರ ಸರ್ಕಾರವೂ ಪುನರುಚ್ಚರಿಸಿದೆ.

'ಭಾವನೆಗಳಿಗೆ ಘಾಸಿಯಾಗುತ್ತದೆ' ಎಂಬ ವಿತಂಡವಾದವನ್ನಿಟ್ಟು ಪುಸ್ತಕಗಳನ್ನು ನಿಷೇಧಿಸುವುದು, ಆ ಮೂಲಕ ಲೇಖಕನೊಬ್ಬನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದು ಒಂದು ರೀತಿಯಲ್ಲಿ ಅಂಟುರೋಗದಂತೆ ಹರಡುತ್ತಿದೆ. ಕರ್ನಾಟಕದಲ್ಲಿ ಬಂಜಗೆರೆ ಜಯಪ್ರಕಾಶ್ ಅವರು ಬಸವಣ್ಣನವರು ಜಾತಿ ಮೂಲದ ಬಗ್ಗೆ ಅಪಾರ ಸಂಶೋಧನೆ ಮಾಡಿ ಬರೆದ 'ಆನುದೇವ ಹೊರಗಣವನು' ಎಂಬ ಪುಸ್ತಕ ಲಿಂಗಾಯತರ ಭಾವನೆಗಳಿಗೆ 'ಘಾಸಿ' ಉಂಟು ಮಾಡುತ್ತದೆಂದು ಕರ್ನಾಟಕ ಸರ್ಕಾರ ಅದನ್ನು ನಿಷೇಧಿಸಿತು. ಅದಕ್ಕೂ ಮೊದಲು ಹೆಚ್.ಎಸ್.ಶಿವಪ್ರಕಾಶ್ ಅವರ 'ಮಹಾಚೈತ್ರ', ಕೆ.ವಿ.ನಾರಾಯಣ ಅವರ 'ಧರ್ಮಕಾರಣ' ಪುಸ್ತಕಗಳನ್ನೂ 'ಭಾವನೆಗಳ ಘಾಸಿ' ಎಂಬ ಕಾರಣ ಕೊಟ್ಟು ನಿಷೇಧಿಸಲಾಗಿತ್ತು. ಈಗ Lives of Sri Aurobindo ಆ ಪಟ್ಟಿಗೆ ಹೊಸ ಸೇರ್ಪಡೆ.



'ಜನರ ಭಾವನೆಗಳಿಗೆ ಘಾಸಿಯಾಗುತ್ತೆ' ಎಂಬುದಕ್ಕೊಂದು ಅರ್ಥವೇ ಇಲ್ಲ. ಸ್ವಾತಂತ್ರ್ಯ ಹೋರಾಟಕ್ಕೆ ದ್ರೋಹ ಬಗೆದ ವಾಜಪೇಯಿ, ಭೈರೋನ್ ಸಿಂಗ್ ಶೇಖಾವತ್‌ರಂಥವರನ್ನು ಭಗತ್‌ಸಿಂಗ್‌ನಂಥ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಹೋಲಿಸಿ ಮಹಾನ್ ದೇಶಪ್ರೇಮಿಗಳಂತೆ ಚಿತ್ರಿಸುವುದು ನಮ್ಮಂಥವರ ಭಾವನೆಗಳಿಗೆ 'ಘಾಸಿ'ಯಾಗುತ್ತದೆ; ಹಾಗಂತ ಅವರನ್ನು ದೇಶಪ್ರೇಮಿ ಗಳೆಂದು, ಧೀರ ಸ್ವಾತಂತ್ರ್ಯಯೋಧರೆಂದು ಚಿತ್ರಿಸಿ ಬರೆದ ಪುಸ್ತಕಗಳನ್ನೆಲ್ಲಾ ನಿಷೇಧಿಸಿ ಎಂದು ಒತ್ತಾಯಿಸಿದರೆ ಹೇಗಿರುತ್ತದೆ? ತಾಯ್ನಾಡಿಗಾಗಿ ತನ್ನೆರಡು ಮಕ್ಕಳನ್ನೇ ಒತ್ತೆಯಿಟ್ಟ, ಬ್ರಿಟಿಷರನ್ನು ಈ ನೆಲದಿಂದ ಓಡಿಸಬೇಕೆಂದು ರಣರಂಗದಲ್ಲೇ ಒಬ್ಬ ಸಾಮಾನ್ಯ ಸೈನಿಕನಂತೆ ಹೋರಾಡಿ ಜೀವತೆತ್ತ ಮಹಾನ್ ದೇಶಪ್ರೇಮಿ ಟಿಪ್ಪು ಸುಲ್ತಾನ್‌ನನ್ನು ಆತ ಮುಸ್ಲಿಮನಾಗಿದ್ದ ಎಂಬ ಒಂದೇ ಕಾರಣಕ್ಕೆ ಮತಾಂಧ ಎಂದು ಚಿತ್ರಿಸುವುದು ಕೇವಲ ಮುಸ್ಲಿಮರ ಭಾವನೆಗಳನ್ನು ಮಾತ್ರವಲ್ಲ, ಎಲ್ಲಾ ಪ್ರಜಾತಾಂತ್ರಿಕ ಜನರ ಭಾವನೆಗಳನ್ನು 'ಘಾಸಿ' ಮಾಡುತ್ತದೆ; ಹಾಗಂತ ಟಿಪ್ಪು ವ್ಯಕ್ತಿತ್ವವನ್ನು ತೇಜೋವಧೆ ಮಾಡಿದ ಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಒತ್ತಾಯಿಸಿದರೆ ಹೇಗಿರುತ್ತೆ? 'ರೇಪ್ ಮಾಡುವುದು ಅಪರಾಧವಲ್ಲ, ಅದು ಮುಸ್ಲಿಮರ ವಿರುದ್ಧದ ಹೋರಾಟದಲ್ಲಿ ಒಂದು ಅಸ್ತ್ರ' ಎಂದು ಹೇಳಿದ ಗೋಳ್ವಾಲ್ಕರ್‌ನನ್ನು ಮಹಾನ್ ದೇಶಪ್ರೇಮಿ ಎಂದು ಬಣ್ಣಿಸಿರುವುದು ಈ ದೇಶದ ಶಾಂತಿಪ್ರಿಯರ ಭಾವನೆಗಳನ್ನು 'ಘಾಸಿ'ಗೊಳಿಸುತ್ತದೆ; ಆದಕ್ಕಾಗಿ ಗೋಳ್ವಾಲ್ಕರ್ ಕುರಿತಂತೆ ಸಂಘಪರಿವಾರ ಬರೆದ ಪುಸ್ತಕಗಳನ್ನೆಲ್ಲಾ ನಿಷೇಧಿಸಿ ಎಂದು ಒತ್ತಾಯಿಸಿದರೆ ಹೇಗಾಗುತ್ತದೆ? ಎಲ್‌ಟಿಟಿಇಯ ಪರವಾಗಿ ಮಾತನಾಡಿದರೆ ಸಿಂಹಳೀಯರಿಗೆ ಘಾಸಿಯಾಗುತ್ತದೆ, ಅದರ ವಿರುದ್ಧವಾಗಿ ಮಾತನಾಡಿದರೆ ತಮಿಳರಿಗೆ ಘಾಸಿಯಾಗುತ್ತದೆ. ಸರ್ದಾ[...] ಡ್ಯಾಂ ಕಟ್ಟುವುದರ ಪರವಾಗಿ ಮಾತನಾಡಿದರೆ ಅದರಿಂದ [...] ಪಾಲಾಗುವ ಲಕ್ಷಾಂತರ ಆದಿವಾಸಿಗಳಿಗೆ ಘಾಸಿಯಾಗುತ್ತದೆ; ಅ[...] ವಿರುದ್ಧವಾಗಿ ಮಾತನಾಡಿದರೆ ಸರ್ಕಾರಗಳಿಗೆ, ಅದನ್ನು ಕಟ್ಟುತ್ತಿರು[...] ಬಂಡವಾಳಿಗರಿಗೆ ಘಾಸಿಯಾಗುತ್ತದೆ. ಕಂಬಾಲಪಲ್ಲಿಯಲ್ಲಿ ಸುಟ್ಟು ಕರಕಲಾದ ದಲಿತರ ಪರವಾಗಿ ಬರೆದರೆ ಅವರನ್ನು ಸುಟ್ಟ ಕ್ರೂರಿಗ[...] ಘಾಸಿಯಾಗುತ್ತದೆ; ವಿರುದ್ಧವಾಗಿ ಬರೆದರೆ ಇಡೀ ದಲಿತ ಸಮುದಾಯ[...] ಪ್ರಜಾತಂತ್ರ ಪ್ರೇಮಿಗಳಿಗೆ ಹಾಗೂ ಕೊಂದವರನ್ನು ನಿರ್ದೋಷಿಗಳೆಂ[...] ಸರ್ಟಿಫಿಕೇಟ್ ಕೊಟ್ಟ ಕೋರ್ಟುಗಳಿಗೆ ಘಾಸಿಯಾಗುತ್ತದೆ. ರೈ[...] ಆತ್ಮಹತ್ಯೆಗಳಿಗೆ ಸರ್ಕಾರದ ನೀತಿಗಳು ಕಾರಣ ಎಂದರೆ ಸರ್ಕಾರ[...] ವಿದೇಶಿ ಕಂಪೆನಿಗಳಿಗೆ ಘಾಸಿಯಾಗುತ್ತದೆ; ಈ ಆತ್ಮಹತ್ಯೆಗಳಿಗೆ ರೈತ[...] ಹೊಣೆಗಾರರು ಎಂದರೆ ಇಡೀ ರೈತ ಸಮುದಾಯಕ್ಕೆ ಘಾಸಿಯಾಗುತ್ತ[...]

ನಿಜ ಹೇಳಬೇಕೆಂದರೆ ಏನೇ ಬರೆದರ[...] ಒಬ್ಬರಲ್ಲಾ ಒಬ್ಬರಿಗೆ 'ಘಾಸಿ' ಆಗೇ ಆಗುತ್ತ[...] ಯಾರಿಗೂ ಘಾಸಿಯಾಗದಂತೆ ಬರೆಯುವುದ[...] ಮಾತನಾಡುವುದು ಸಾಧ್ಯವೇ ಇಲ್ಲ. ಯಾರಿಗ[...] ಘಾಸಿಯಾಗಬಾರದು ಎಂತಿದ್ದರೆ ಬರೆಯು[...] ದನ್ನೇ, ಮಾತನಾಡುವುದನ್ನೇ ನಿಲ್ಲಿಸಬೇಕಾಗುತ್ತ[...] ಒಂದು ಪುಸ್ತಕದಿಂದ, ಲೇಖನದಿಂದ ಅಥವ[...] ಒಬ್ಬರ ಮಾತಿನಿಂದ ಯಾರಿಗಾದರೂ ಘಾ[...] ಯಾದರೆ ಅದಕ್ಕೆ ಪ್ರತಿಯಾಗಿ ಅವರೂ ತಮ[...] ಸರಿ ಎನ್ನಿಸಿದ್ದನ್ನು ಬರೆಯಬೇಕು, ಮಾತನಾ[...] ಬೇಕು. ಆ ಮೂಲಕ ಆರೋಗ್ಯಪೂರ್ಣ[...] ಸಂವಾದಕ್ಕೆ ಮುಂದಾಗಬೇಕು. ಅದನ್ನು ಬಿಟ್ಟು[...] ಬರೆಯುವುದರ ಮೇಲೆ, ಮಾತನಾಡುವುದ[...] ಮೇಲೆ ನಿಷೇಧ ಹೇರುವುದು ಫ್ಯಾಸಿಸ[...] ವರ್ತನೆಯಾಗುತ್ತದೆ.

ಗೋಳ್ವಾಲ್ಕರ್, ಸಾವರ್ಕರ್, ವಾಜಪೇಯಿ[...] ಅಡ್ವಾಣಿ, ಶೇಖಾವತ್‌ಗಳಂಥ ದೇಶದ್ರೋಹಿಗ[...] ನ್ನೆಲ್ಲಾ ದೇಶಪ್ರೇಮಿಗಳು ಎಂದು ಚಿತ್ರಿಸಿ, ಟಿಪ್ಪು ಸುಲ್ತಾನ್‌ರಂಥ ದೇಶಪ್ರೇಮಿಗಳನ್ನು ಮತಾಂಧ[...]ರಂತೆ ಚಿತ್ರಿಸಿ, ಭಗತ್‌ಸಿಂಗ್, ಡಾ.ಬಿ.ಆರ್.ಅಂಬೇಡ್ಕರ್‌ರಂಥ ನಾಸ್ತಿಕರನ್ನು ಹಿಂದೂತ್ವದ ಕಟು ವಿರೋಧಿಗಳನ್ನು ಹಿಂದೂತ್ವ ನಂಜು ಸಿದ್ಧಾಂತದ[...] ಪ್ರತಿಪಾದಕರೆಂಬಂತೆ ಚಿತ್ರಿಸಿ ಹತ್ತಾರು ಪುಸ್ತಕಗಳನ್ನು ಸಂಘಪರಿವಾ[...] ಪ್ರಕಟಿಸಿದೆ; ಕನ್ನಡದ ಲೇಖಕ ಎಸ್.ಎಲ್.ಭೈರಪ್ಪನಂಥವರು ಕೋಮುದ್ವೇಷದ ವಿಷಕಾರುವ 'ಆವರಣ'ದಂತಹ ವಿಕೃತಿಗಳನ್ನು ಬರೆದಿದ್ದಾರೆ. ಅದರಿಂದ ಪ್ರಜ್ಞಾವಂತ ಬುದ್ಧಿಜೀವಿಗಳಿಗೆ, ಶಾಂತಿಪ್ರಿಯರಿಗೆ ಪ್ರಜಾತಂತ್ರವಾದಿಗಳಿಗೆ, ಕೋಮುಸೌಹಾರ್ದದಿಂದ ಬದುಕುತ್ತಿರುವ ಸಮುದಾಯಗಳಿಗೆ ಘಾಸಿಯಾಗಿರುವುದು ನಿಜವಾದರೂ ಅವುಗಳನ್ನೆಲ್ಲಾ ನಿಷೇಧಿಸಬೇಕೆಂದು ಯಾರೂ ಎಂದೂ ಒತ್ತಾಯಿಸಿಲ್ಲ. ಅದಕ್ಕೆ ಪ್ರತಿಯಾಗಿ ವಾಸ್ತವ ಏನು ಎಂಬುದನ್ನು ತಿಳಿಸುವ ಪುಸ್ತಕಗಳನ್ನು, ಲೇಖನಗಳನ್ನು ಬರೆದಿದ್ದಾರೆ. ಆ ಮೂಲಕ ಆರೋಗ್ಯಪೂರ್ಣ ಚರ್ಚೆಗೆ, ಸಂವಾದಕ್ಕೆ ಮುಂದಾಗಿದ್ದಾರೆ. ಈ ಸಂದರ್ಭದಲ್ಲಿ 'Let a hundred flowers bloom, let a hundred schools of thought contend' ಎಂಬ ಚೀನಾದ ಕಮ್ಯೂನಿಸ್ಟ್ ಕ್ರಾಂತಿಕಾರಿ ನಾಯಕ ಮಾವೋತ್ಸೆ ತುಂಗ್ ಅವರ ಮಾತು ಸೂಕ್ತವೆನಿಸುತ್ತದೆ. ನೂರಾರು ವಿಚಾರಧಾರೆಗಳು ಆರೋಗ್ಯಪೂರ್ಣವಾಗಿ ಸಂವಾದ, ಸಂಘರ್ಷ ನಡೆಸಿ[...]ದಾಗಲೇ ವಾಸ್ತವ ಬೆಳಕಿಗೆ ಬರುತ್ತದೆ. ನಿಷೇಧ, ಮುಟ್ಟುಗೋಲುಗಳು ಸತ್ಯವನ್ನು ಮುಚ್ಚಿಹಾಕುತ್ತವೆ. ■

ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ



ಕೊಲ್ಲುವುದಕ್ಕೆ ಸಿಕ್ಕ ಲೈಸೆನ್ಸ್

ಎನ್‌ಕೌಂಟರ್ ಘಟನೆಗಳಲ್ಲೂ ಪೊಲೀಸರ ವಿರುದ್ಧ ಕೊಲೆ ಮೊಕದ್ದಮೆ ದಾಖಲಿಸಬೇಕು ಎಂಬ ಆಂಧ್ರ ಪ್ರದೇಶದ ಹೈಕೋರ್ಟ್ ಆದೇಶಕ್ಕೆ ಮೊನ್ನೆ ಸುಪ್ರೀಮ್ ಕೋರ್ಟ್ ತಡೆಯಾಜ್ಞೆ ನೀಡಿದೆ. ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್, ನ್ಯಾಯಮೂರ್ತಿಗಳಾದ ಸದಾಶಿವಮ್ ಮತ್ತು ಜೆ.ಎಂ.ಪಂಚಾಲ್ ಅವರನ್ನೊಳಗೊಂಡ ನ್ಯಾಯಪೀಠ ಇಂತಹದ್ದೊಂದು ಗಂಭೀರ ತೀರ್ಪಿಗೆ ತಡೆಯಾಜ್ಞೆ ನೀಡಿದೆ. ಸುಪ್ರೀಮ್ ಕೋರ್ಟು ತನ್ನ ಅಂತಿಮ ಆದೇಶವನ್ನು ಇನ್ನೂ ನೀಡಿಲ್ಲವಾದರೂ ಕಾನೂನು ಸುವ್ಯವಸ್ಥೆ ಕಾಪಾಡುವ




ಕರ್ತವ್ಯದಲ್ಲಿ ನಿರತರಾದ ಪೊಲೀಸರಿಗೆ ಕೆಲವು ಜವಾಬ್ದಾರಿಗಳಿರುತ್ತವೆ, ಅವರನ್ನು ಇತರರಂತೆ ಪರಿಗಣಿಸಲು ಬರುವುದಿಲ್ಲ ಎಂಬ ವಾದವನ್ನಿಟ್ಟುಕೊಂಡು ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ಕೊಟ್ಟಿರುವುದು ಒಂದು ರೀತಿಯಲ್ಲಿ ಪೊಲೀಸರು ಎನ್‌ಕೌಂಟರ್ ಹೆಸರಿನಲ್ಲಿ ಬೇಕಾಬಿಟ್ಟಿಯಾಗಿ ನಡೆಸುತ್ತಿರುವ ಕೊಲೆಗಳಿಗೆ ಪ್ರಾಥಮಿಕ ಮನ್ನಣೆ ದೊರೆತಂತಾಗಿದೆ.

2006ರಲ್ಲಿ ಆಂಧ್ರಪ್ರದೇಶದ ನಲ್ಲಮಲ್ಲ ಅರಣ್ಯ ಪ್ರದೇಶದಲ್ಲಿ ಎಂಟು ಜನ ನಕ್ಸಲೀಯರನ್ನು ಅಲ್ಲಿನ ಪೊಲೀಸರು ಎನ್‌ಕೌಂಟರ್ ಹೆಸರಿನಲ್ಲಿ ಕೊಂದು ಹಾಕಿದ್ದರು. ಆಂಧ್ರ ಪ್ರದೇಶದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಹತ್ತಾರು ವರ್ಷಗಳಿಂದ ಹೋರಾಡುತ್ತಾ ಬಂದಿರುವ Andhra Pradesh Civil Liberties Committee (APCLC) ಸಂಘಟನೆಯು ಈ ಘಟನೆಯ ವಿರುದ್ಧ ಹೈಕೋರ್ಟಿನಲ್ಲಿ ಮೊಕದ್ದಮೆ ಹೂಡಿತ್ತು. ಎನ್‌ಕೌಂಟರ್‌ನಲ್ಲಿ ಪಾಲ್ಗೊಂಡ ಪೊಲೀಸ್ ಅಧಿಕಾರಿಗಳ ವಿರುದ್ಧ ಮೊದಲು ಕೊಲೆ ಮೊಕದ್ದಮೆಯನ್ನು ದಾಖಲಿಸಬೇಕೆಂಬುದು, ಪೊಲೀಸರು ನ್ಯಾಯಾಲಯದಲ್ಲಿ ತಾವು ನಿಜಕ್ಕೂ ಆತ್ಮರಕ್ಷಣೆಗಾಗಿಯೇ ಕೊಲ್ಲಬೇಕಾಯಿತೆಂಬುದನ್ನು ಸಾಬೀತುಪಡಿಸಬೇಕೆಂಬುದು ಎಪಿಸಿಎಲ್‌ಸಿಯ ವಾದದ ಹುರುಳಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟಿನ ಐವರು ನ್ಯಾಯಮೂರ್ತಿಗಳ ಪೀಠ ಕಾನೂನಿನ ದೃಷ್ಟಿಯಲ್ಲಿ ಪೊಲೀಸರೂ ಇನ್ನಿತರ ನಾಗರಿಕರಿಗೆ ಸಮಾನರಾಗಿದ್ದರಿಂದ ಎನ್‌ಕೌಂಟರ್‌ನಲ್ಲಿ ಪಾಲ್ಗೊಂಡ ಪೊಲೀಸ್ ಅಧಿಕಾರಿಗಳ ವಿರುದ್ಧ ಮೊಕದ್ದಮೆ ದಾಖಲಿಸಬೇಕೆಂದು, ತಾವು ಆತ್ಮರಕ್ಷಣೆಗಾಗಿಯೇ ಕೊಲ್ಲಬೇಕಾಯಿತೆಂಬುದನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕೆಂದು ಫೆಬ್ರುವರಿ 6ರಂದು ತೀರ್ಪಿತ್ತಿತ್ತು. ಇದನ್ನು ಪ್ರಶ್ನಿಸಿ ಆಂಧ್ರ ಪ್ರದೇಶ ಪೊಲೀಸ್ ಅಧಿಕಾರಿಗಳ ಸಂಘದ ಪರವಾಗಿ ಹರೀಶ್ ಸಾಳ್ವೆ ಅವರು ಸುಪ್ರೀಮ್ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಈಗ ಸುಪ್ರೀಮ್‌ಕೋರ್ಟು ಹೈಕೋರ್ಟಿನ ಆದೇಶಕ್ಕೆ ತಡೆಯಾಜ್ಞೆ ಕೊಟ್ಟಿದೆ.

ನಕ್ಸಲರನ್ನು, ನಿರಾಯುಧ ನಾಗರಿಕರನ್ನು ಯಾವ ಪ್ರಚೋದನೆಯೂ ಇಲ್ಲದೇ ಎನ್‌ಕೌಂಟರ್ ಹೆಸರಿನಲ್ಲಿ ಕೊಲ್ಲುತ್ತಿರುವ ಕೆಟ್ಟ ಚರಿತ್ರೆ ಆಂಧ್ರ ಪ್ರದೇಶ ಪೊಲೀಸರಿಗಿದೆ. ಬಂಧಿಸಲು ಸಾಧ್ಯವಿದ್ದಾಗಲೂ ಏಕಾಏಕಿ ಗುಂಡು ಹಾರಿಸಿ ಕೊಂದ, ಮನೆಯಲ್ಲಿ ಮಲಗಿದ್ದವರನ್ನು ಎತ್ತಿಕೊಂಡು ಹೋಗಿ ಟಾರ್ಚರ್ ಮಾಡಿ ಕೊಂದುಹಾಕಿದ, ಆಮೇಲೆ ಅವೆಲ್ಲವಕ್ಕೂ ಎನ್‌ಕೌಂಟರ್ ಎಂಬ ಹಣೆಪಟ್ಟಿ ಹಚ್ಚಿದ ಅದೆಷ್ಟೋ ಪ್ರಕರಣಗಳನ್ನು ಹಲವಾರು ಸತ್ಯಶೋಧನಾ ವರದಿಗಳು ಎತ್ತಿ ತೋರಿಸಿವೆ. ಅಷ್ಟೇ ಏಕೆ, ಕಾನೂನು ಬದ್ಧವಾಗಿ, ಪ್ರಜಾತಾಂತ್ರಿಕ ಚೌಕಟ್ಟಿನೊಳಗೇ ಕಾರ್ಯನಿರ್ವಹಿಸುತ್ತಿದ್ದ ಅನೇಕ ಮಾನವ ಹಕ್ಕುಗಳ ಹೋರಾಟಗಾರರನ್ನೂ ಎನ್‌ಕೌಂಟರ್ ಹೆಸರಿನಲ್ಲಿ ಕೊಂದು ಹಾಕಿದ ಹೀನ ಚರಿತ್ರೆ ಅವರಿಗಿದೆ. ಈ ಹಿನ್ನೆಲೆಯಲ್ಲಿ ಆಂಧ್ರಪ್ರದೇಶ ಹೈಕೋರ್ಟು ಕೊಟ್ಟ ತೀರ್ಪು ಪೊಲೀಸರ ಈ ಬರ್ಬರತೆಯನ್ನು ಸಂಪೂರ್ಣವಾಗಿ ನಿಲ್ಲಿಸಲ[...] ಸಾಧ್ಯವಾಗದಿದ್ದರೂ ಕಾನೂನುಬಾಹಿರ ಕೊಲೆಗಳನ್ನು ನಡೆಸು[...] ಅವರ ಪ್ರವೃತ್ತಿಗೆ ಒಂದಿಷ್ಟು ಅಡ್ಡಿಯನ್ನಾದರೂ ಒಡ್ಡುತ್ತಿತ[...] ಎನ್‌ಕೌಂಟರ್ ಹೆಸರಿನಲ್ಲಿ ಅಮಾಯಕರನ್ನು ಕೊಲ್ಲು[...] ಪೊಲೀಸರು ಕಂಡಲ್ಲಿ ಗುಂಡಿಕ್ಕುವ ಮೊದಲು ಎರ[...] ಬಾರಿ ಯೋಚನೆ ಮಾಡುವಂತಾದರೂ ಆಗುತ್ತಿತ್ತು. ಈ[...] ಆ ಅಡೆತಡೆಯನ್ನೂ ಸುಪ್ರೀಮ್ ಕೋರ್ಟು ನಿವಾರ[...] ಮಾಡಿದಂತಾಗಿದೆ.

ನಾಗರಿಕ ಸಮಾಜದಿಂದ ಬಹುದೊಡ್ಡ ಪ್ರತಿರೋ[...] ವಿದ್ದಾಗಲೂ ಬರ್ಬರವಾಗಿ ಹತ್ಯೆ ಮಾಡುತ್ತಿದ್ದ ಪೊಲೀಸ[...] ಈಗ ಸುಪ್ರೀಮ್ ಕೋರ್ಟಿನಿಂದ ಲೈಸೆನ್ಸ್ ಸಿಕ್ಕ ಮೇ[...] ಇನ್ನೆಷ್ಟು ಕ್ರೂರವಾಗಬಹುದು? ■




▶▶ 3

ಒಂದು ಪೊಲೀಸ್ ವಿಚಾರಣೆಯ ಸ್ಯಾಂಪಲ್....


ಎಂಬ ಮತ್ತೊರ್ವ ಮಹಿಳೆಯ ಅನುಭವ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಫೆಬ್ರವರಿ 17 ರಂದು ನಾಲ್ಕು ಜನ ಯುವಕರು ಗೀತಾಂಜಲಿಯ ಕಾರ್ ಅನ್ನು ಹಿಂಬಾಲಿಸಿ ಅನಂತರ ...ಗಟ್ಟಿದ್ದಾರೆ. ಆಕೆಯನ್ನು ಕಾರಿನಿಂದ ಹೊರಗೆಳೆಯಲು ಪ್ರಯತ್ನಿಸಿ ಅದಾಗದಿದ್ದಾಗ ಅವಳ ...ಗೆ ಹೊಡೆದು, ಅದರ ಮೇಲೆ ಉಗಿದು ದಾಂಧಲೆ ಮಾಡಿದ್ದಾರೆ. ಅವರಿಂದ ತಪ್ಪಿಸಿಕೊಳ್ಳಲು ...ಾಂಜಲಿ ಪ್ರಯತ್ನಿಸಿದಾಗ ಆಕೆಯ ಕಾರಿನ ಮೇಲೆ ಹಲವು ಗೆರೆಗಳು ಮೂಡಿವೆ.

ಈ ದಾಳಿ ಕುರಿತು ಗೀತಾಂಜಲಿ ಪೊಲೀಸರಿಗೆ ದೂರು ನೀಡಿದರೆ ಪೊಲೀಸರು "ಅಂತಹ ಘಟನೆಯೇ ನಡೆದಿಲ್ಲ. ಆಕೆ ಸುಳ್ಳು ಹೇಳುತ್ತಿದ್ದಾಳೆ. ಅಥವಾ ಆಕೆಯೇ ತನ್ನ ಕಾರ್ ಅನ್ನು ಎಲ್ಲಿಗೋ ಡಿಕ್ಕಿ ಹೊಡೆದು ಈಗ ತನ್ನ ಮೇಲೆ ದಾಳಿ ನಡೆಯಿತು ಎಂದು ಹೇಳುತ್ತಿದ್ದಾಳೆ" ಎಂದೇ ಮೊಂಡುವಾದವನ್ನು ಮಂಡಿಸುತ್ತಿದ್ದಾರೆ. ಅಷ್ಟೇ ಅಲ್ಲ, "ಇದೊಂದು ಸುಳ್ಳು ದೂರಾದ್ದರಿಂದ ಈ ಕೇಸನ್ನು ಬಂದ್ ಮಾಡುತ್ತಿದ್ದೇವೆ" ಎಂಬ ನೋಟೀಸನ್ನೂ ಗೀತಾಂಜಲಿಗೆ ಕಳುಹಿಸಿದ್ದಾರೆ.



ಇದರ ವಿರುದ್ಧ ಕೆಲ ಮಹಿಳಾ ಸಂಘಟನೆಗಳು ಪ್ರತಿಭಟಿಸಲು ಸಿದ್ಧತೆ ನಡೆಸಲಾರಂಭಿಸಿದಾಗ "ಇಲ್ಲ, ಅದು ಬೇರೆ ಯಾರಿಗೋ ಕಳುಹಿಸಬೇಕಿತ್ತು. ತಪ್ಪಾಗಿ ನಿಮಗೆ ಬಂದಿದೆ. ಆ ನೋಟೀಸನ್ನು ವಾಪಸ್ಸು ಕೊಡಿ" ಎಂದು ಪೊಲೀಸರು ಒತ್ತಾಯ ಮಾಡುತ್ತಿದ್ದಾರೆ. ಈ ಒತ್ತಾಯದ ಹಿಂದೆ ಗೀತಾಂಜಲಿಗೆ ನ್ಯಾಯ ಒದಗಿಸಬೇಕೆಂಬ ಕಾಳಜಿಯಂತೂ ಇಲ್ಲ. ...ಬದಲಾಗಿ ಚುನಾವಣೆ ಪ್ರಕಟಗೊಂಡಿರುವಾಗ ಮಹಿಳಾ ಸಂಘಟನೆಗಳು ಬಿಜೆಪಿ ಸರ್ಕಾರದ ವಿರುದ್ಧ ಬೀದಿಗಿಳಿದರೆ ಕಷ್ಟ; ಆದ್ದರಿಂದ ಸದ್ಯಕ್ಕೆ ಅವರು ಪ್ರತಿಭಟಿಸದಂತೆ ನೋಡಿಕೊಳ್ಳುವ ...ನ್ನಾರ ಪೊಲೀಸರದ್ದಾಗಿದೆ.

ಇದೆಲ್ಲಕ್ಕಿಂತ ವಿಚಿತ್ರ ಪ್ರಕರಣ ಸ್ಪಂದನಾ ಎಂಬ ಮತ್ತೋರ್ವ ಮಹಿಳೆಗಾದದ್ದು. ಕಳೆದ ...ಬ್ರವರಿ 20 ರಂದು ಆಕೆ ವಸಂತನಗರ ಪ್ರದೇಶದಲ್ಲಿ ನಡೆದು ಹೋಗುತ್ತಿದ್ದಾಗ ಎದುರಿನಿಂದ ...ಲ್ಲವರು ಪೋಲಿ ಪುಂಡರ ಗುಂಪು ಬರುತ್ತಿರುವುದನ್ನು ನೋಡಿದ್ದಾರೆ. ಜೀನ್ಸ್ ಪ್ಯಾಂಟ್ ...ಟ್ಟಿದ್ದ ಆಕೆ ಸುಮ್ಮನೆ ಯಾಕೆ ತೊಂದರೆ ಎಂದು ರಸ್ತೆಯನ್ನು ಕ್ರಾಸ್ ಮಾಡಿದ್ದಾರೆ. ಹಾಗೆ ...ಾಡುವಾಗ ರಸ್ತೆ ನಡುವಿದ್ದ ಡಿವೈಡರ್ ಅನ್ನು ದಾಟಿ ಹೋಗಿದ್ದಾರೆ. ಆದರೆ ಆ ಪುಂಡರ ...ಂಪು ಸ್ಪಂದನಾಳನ್ನು ಹಿಂಬಾಲಿಸಿ "ಜೀನ್ಸ್ ತೊಟ್ಟಿದ್ದೀಯಲ್ಲಾ, ನಿನಗೆ ನಾಚಿಕೆ ಆಗಲ್ವಾ" ...ದು ಅವರನ್ನು ಥಳಿಸಲಾರಂಭಿಸಿದ್ದಾರೆ. ಭಯಭೀತರಾದ ಸ್ಪಂದನಾ ಹತ್ತಿರದಲ್ಲಿ ನಿಂತಿದ್ದ ...ಟೋ ರಿಕ್ಷಾ ಅನ್ನು ಹತ್ತಲು ಯತ್ನಿಸಿದ್ದಾರೆ. ಆದರೆ ಅದರಿಂದ ಆಕೆಯನ್ನು ಎಳೆಯಲು ...ಡರು ಪ್ರಯತ್ನಿಸಿದ್ದಾರೆ. ಆಗ ಸ್ಪಂದನಾ ಆಟೋ ಚಾಲಕನನ್ನು ಬೇಡಿದ್ದಾರೆ, "ಇಲ್ಲಿಂದ ...ಡಲೇ ನನ್ನನ್ನು ಕರೆದುಕೊಂಡು ಹೋಗಲಿಲ್ಲ ಅಂದರೆ ನಿನ್ನ ಮೇಲೂ ಪೊಲೀಸರಿಗೆ ದೂರು ...ಡುತ್ತೇನೆ" ಎಂದೂ ಬೆದರಿಸಿದ್ದಾರೆ. ಹಾಗೆ ಬೆದರಿಸಿದ್ದರಿಂದ ಆಕೆ ಆ ಪುಂಡರಿಂದ ...ಪಾವಾಗಿದ್ದಾರೆ.



ಪೊಲೀಸರಿಗೆ ದೂರು ಕೊಟ್ಟ ಸ್ಪಂದನಾ ತನ್ನ ಮೇಲೆ ದಾಳಿ ...ಡಿದವರನ್ನು ಅವರು ಹಿಡಿಯುತ್ತಾರೆ ಎಂದು ಆಶಿಸಿದ್ದರು. ...ದರೆ ಈ ಪ್ರಕರಣ ನಡೆದು ಹತ್ತು ದಿನಗಳಾದ ನಂತರ ಫೋನ್ ...ಡಿದ ಪೊಲೀಸರು ಸ್ಪಂದಳಾನನ್ನು ಕೇಳಿದ ಪ್ರಶ್ನೆ ಯಾವುದು ...ತ್ತಾ?

"ನೀವು ರಸ್ತೆ ಮಧ್ಯೆ ಇರುವ ಡಿವೈಡರ್ ಅನ್ನು ಹೇಗೆ ...ಟಿದಿರಿ? ಅದನ್ನು ನೀವು ಜಂಪ್ ಮಾಡಿದರೋ ಅಥವಾ ಹತ್ತಿ ...ಳಿದಿರೋ?"

"ಯಾಕೆ ಈ ಪ್ರಶ್ನೆ?" ಸ್ಪಂದನಾಳ ಗೊಂದಲ.

"ಯಾಕೆಂದರೆ ಡಿವೈಡರ್ ಅನ್ನು ಪರಿಶೀಲಿಸುತ್ತಿದ್ದೇವೆ. ಅದರ ಮೇಲೆಲ್ಲಾ ನಿಮ್ಮ ...ಟ್‌ಪ್ರಿಂಟ್ ಕಾಣುತ್ತಿಲ್ಲ."

ಇದಿಷ್ಟೇ ಅಲ್ಲ, ರಾತ್ರಿ ಹತ್ತೂವರೆಗೆ ಸ್ಪಂದನಾಳಿಗೆ ಫೋನ್ ಮಾಡಿ ಇಂತಹದ್ದೇ ವಿಚಿತ್ರ ...ಶ್ನೆಗಳನ್ನು ಕೇಳುವುದು, ಬೆಳಗ್ಗಾದರೆ ಕೂಡಲೇ ಠಾಣೆಗೆ ಬನ್ನಿ ಎಂದು ಆದೇಶಿಸುವುದು ...ಡೆದೇ ಇದೆ. ತನ್ನ ಮೇಲಾದ ದಾಳಿ ಬಗ್ಗೆ ದೂರು ಕೊಟ್ಟು ಪೊಲೀಸರಿಂದ ಇಷ್ಟೆಲ್ಲಾ ...ಂದರೆ ಅನುಭವಿಸುವಂತಾಯಿತಲ್ಲಾ ಎಂದು ಸ್ಪಂದನಾ ಪರಿತಪಿಸಲಾರಂಭಿಸಿದ್ದಾರೆ.


ಇತ್ತೀಚಿಗಿನ ತನಕ ಯಾವುದೇ ಭಯವಿಲ್ಲದೆ ಓಡಾಡುತ್ತಿದ್ದ ಬೆಂಗಳೂರಿನ ಸುಶಿಕ್ಷಿತ, ...ವಲಂಬಿ ಮಹಿಳೆಯರು ಇವತ್ತು ಹಿಂದೂ ಸಿದ್ಧಾಂತ ಪ್ರೇರಿತ ಪುಂಡು ಹುಡುಗರಿಗೆ ...ದರಿಕೊಂಡು ಮನೆಯಲ್ಲಿ ಕೂರುವಂತಾಗಿದೆ. ಇದು ಉತ್ಪ್ರೇಕ್ಷೆಯಲ್ಲ. ಮೊನ್ನೆ ಐಟಿ ವಲಯದಲ್ಲಿ ...ಸ ಮಾಡುತ್ತಿರುವ ಕೆಲ ಹುಡುಗಿಯರೊಂದಿಗೆ ಮಾತನಾಡಿದಾಗ, ಅವರು "ಪಬ್‌ಗೆ ...ೋದರೆ ದಾಳಿಯಾದೀತೆಂಬ ಭಯ, ಜಿಮ್‌ಗೆ ಹೋದರೆ ಇಂತಹ ಬಟ್ಟೆ ಧರಿಸುತ್ತೀರಾ ...ದು ಹಲ್ಲೆಗೆ ಗುರಿಯಾಗುವ ಭೀತಿ, ಇನ್ನು ಸಿನಿಮಾ ಇತ್ಯಾದಿಗೆ ಹೋದರೆ ನಾವು ...ಾರೊಂದಿಗಿದ್ದೇವೆ ಎಂಬ ವಿಚಾರಣೆಗೆ ಒಳಗಾಗುವ ಸಾಧ್ಯತೆ. ಎಲ್ಲಿಗೆ ಹೋಗುವುದು?" ...ದರು ಚಿಂತಾಕ್ರಾಂತರಾಗಿ.

ಒಂದೆಡೆ ಯಡ್ಡಿ, ಆಚಾರಿ ಎಂಬ ಫ್ಯಾಸಿಸ್ಟರು, ಇನ್ನೊಂದೆಡೆ ಕಪಿಸೇನೆ, ಮಂಗಸೇನೆದಂತಹ ಪೀಡಕರು; ಮತ್ತೊಂದೆಡೆ ಬಿಜೆಪಿಯ ಕೋಳಗಳನ್ನು ತಮ್ಮ ಕೈಗಳಿಗೆ ತೊಟ್ಟು ಕೂತಿರುವ ...ಲೀಸರು.

ಇದು ಖಂಡಿತವಾಗಿಯೂ ರಾಮರಾಜ್ಯವಲ್ಲ, ಬದಲಾಗಿ ಹಿಂದೂತ್ವವಾದಿ ಬಿಜೆಪಿ ...ಸ್ಥಾಪಿಸಿರುವ ನರಕ.

■ ಗೌರಿ ಲಂಕೇಶ್

ಪೊಲೀಸರಿಗೆ ಸಿಕ್ಕದ ಯೋಗೇಶ್ವರ್ ಚೆಡ್ಡಿಗಳಿಗೆ ಸಿಕ್ಕಬೇಕೆ?



ಅಡ್ವಾಣಿಯನ್ನು ಪ್ರಧಾನಿ ಮಾಡಲು ಹೊರಟ ಬಿಜೆಪಿಗಳ ಮಾಡಬಾರದ ಕೆಲಸವನ್ನು ಮಾಡಿದವರನ್ನೆಲ್ಲಾ ಪಾರ್ಟಿಗೆ ಸೇರಿಸಿಕೊಂಡು ಟಿಕೆಟ್ ಕೊಡಲಿದ್ದಾವಂತಲ್ಲಾ. ಈ ಪೈಕಿ ಚನ್ನಪಟ್ಟಣದ ಚೆಲುವಾಂತ ಚೆನ್ನಿಗ ಯೋಗೇಶ್ವರ್ ಎಂಬ ಸಮಾಜದ ಸಮಸ್ಯೆಯನ್ನು ಎಳೆದು ತಂದಿರುವ ಬಿಜೆಪಿ ಜನ ಸದರಿ "ಯೋಗೇಶ್ವರ್ ನಮ್ಮ ಪಾರ್ಟಿಯಲ್ಲಿರುವ ಎಲ್ಲಾ ಗುಣಗಳನ್ನು ರೂಢಿಸಿಕೊಂಡಿದ್ದಾರೆ. ಅವರು ಕಾಂಗ್ರೆಸ್‌ನಲ್ಲಿರಲು ನಾಲಾಯಕ್. ಅದಕ್ಕೆ ಕರೆತಂದೆವು" ಎಂದರಂತಲ್ಲಾ. "ಕಾಂಗ್ರೆಸ್‌ನಲ್ಲಿರಲು ಲಾಯಕ್ಕಲ್ಲ ಎಂದರೆ ಏನರ್ಥ?" ಎಂದರೆ, "ನೋಡಿ, ಅವರು ಪ್ರಥಮ ಬಾರಿ ಚುನಾವಣೆಯಲ್ಲಿ ಗೆಲ್ಲಬೇಕಾದರೆ ಚೆನ್ನಪಟ್ಟಣದ ಸಾಬರ ಕೇರಿಗೆ ಬೆಂಕಿ ಹಾಕಿಸಿ, ಹಿಂದೂ ಮುಸ್ಲಿಂ ಗಲಭೆ ಎಬ್ಬಿಸಿ, ಹಿಂದೂಗಳ ಓಟನ್ನು ಪಡೆದು ಶಾಸಕರಾದರು. ಆಗಲೇ ಅವರು ಬಿಜೆಪಿ ಕಡೆಗೆ ಬರಬೇಕಾಗಿತ್ತು, ಕಾಂಗ್ರೆಸ್ ಕಡೆಗೆ ಹೋಗಿಬಿಟ್ಟರು. ಆದರೂ ತುಂಬ ತಡವಾಗಿ ಜ್ಞಾನೋದಯವಾದ ಪ್ರಯುಕ್ತ ಕಡೆಗೂ ಅವರ ಮನೋಗತ ವಿಕಾಸಕ್ಕೆ ಎಡೆಮಾಡಿಕೊಡುವ ಪಾರ್ಟಿಗೆ ಬಂದಿದ್ದಾರೆ. ಈಗ ಅವರಿಗೆ ರಕ್ಷಣೆ ಕೊಡುವ ಜವಾಬ್ದಾರಿ ಮತ್ತು ಮತೀಯ ಗಲಭೆ ಜವಾಬ್ದಾರಿ ನಮ್ಮ ಮೇಲೆ ಬಿದ್ದಿದೆ. ಬಿಜೆಪಿ ಪಾರ್ಟಿಗೆ ಬರಬೇಕಾದರೆ ಕನಿಷ್ಠ ಐವತ್ತು ಪರಸೆಂಟ್ ನಮ್ಮ ಸಿದ್ಧಾಂತವನ್ನು ಅನುಸರಿಸುವವರಾಗಬೇಕು. ಆದರೆ ಯೋಗೇಶ್ವರ್ ಹಂಡ್ರೆಡ್ ಪರ್ಸೆಂಟ್ ಬಿಜೆಪಿ ಮನುಷ್ಯ" ಎಂದವಂತಲ್ಲಾ, ಥೂತ್ತೇರಿ!

* * * * * *

ಥೂತ್ತೇರಿ

ಯಾಹೂ

ಮಾರ್ವಾಡಿ ಹುಡುಗಿಯನ್ನು ಮರುಳು ಮಾಡಿ, ಆಕೆಯನ್ನು ಬಲೆಗೆ ಹಾಕಿಕೊಂಡು, ಕೈಗೆರಡು ಮಕ್ಕಳನ್ನು ಕೊಟ್ಟು, ನಡುನೀರಲ್ಲಿ ಕೈಬಿಟ್ಟರುವ ಯೋಗೇಶ್ವರ್‌ನಂಥವನು ಬಿಜೆಪಿ ಸೇರುವುದು ನ್ಯಾಯೋಚಿತವಾಗಿದೆ. ಏಕೆಂದರೆ ಬಿಜೆಪಿಯಲ್ಲಿ ಯೋಗೇಶ್ವರನಂಥವರು ಡಜನ್‌ಗಟ್ಟಲೆ ಇದ್ದಾರೆ. ಸ್ವತಃ ಮುಖ್ಯಮಂತ್ರಿಯಿಂದ ಹಿಡಿದು ರೇಣುಕಾಚಾರಿವರೆಗೆ ಎಲ್ಲರೂ ಯೋಗೇಶ್ವರ್‌ನಂಥವರೇ. ಆದ್ದರಿಂದ ಯೋಗಿ ಬಿಜೆಪಿ ಸೇರಿದ್ದು ಕೊಂಚ ತಡವಾಗಿದೆ ಎಂದು ಕಾಂಗೈಗಳು ವಿವರಿಸುವುದರ ಜೊತೆಗೆ ಯೋಗೇಶ್ವರನ ಮೆಗಾಸಿಟಿಯ ಸೈಟ್ ವ್ಯವಹಾರದ ಕರ್ಮಕಾಂಡವನ್ನು ಬಿತ್ತರಿಸತೊಡಗಿದ್ದಾರಂತಲ್ಲಾ. ಈ ಯೋಗೇಶ್ವರನ ಬಳಿ ಇರುವುದು ಐದು ಸಾವಿರ ಸೈಟು. ಆದರೆ ಜನಗಳಿಂದ ಕಾಸು ಕಿತ್ತುಕೊಂಡಿರುವುದು ಹನ್ನೊಂದು ಸಾವಿರ ಸೈಟಿಗೆ. ಇದರಲ್ಲಿ ಅರ್ಧಕ್ಕರ್ಧ ಹಣ ಸಿನಿಮಾ ತೆಗೆದು ಉಡಾಯಿಸಿದ್ದಾನೆ. ಆದ್ದರಿಂದ ಚೆಕ್ ಬೌನ್ಸ್ ಆಗುವುದು ಸಹಜವಲ್ಲವೆ? ಸೈಟಿಗೆ ಅರ್ಜಿ ಗುಜರಾಯಿಸಿದವರೆಲ್ಲಾ ಕೋರ್ಟಿಗೆ ಮೊರೆ ಹೋಗಿ, ಕೋರ್ಟ್ ಯೋಗೇಶ್‌ನನ್ನು ಹಿಡಿದು ತರಲು ಪೊಲೀಸರಿಗೆ ಹೇಳಿ ಕಳಿಸಿದೆ. ಆದರೆ ಇದುವರೆಗೂ ಪೊಲೀಸರಿಗೆ ಸಿಕ್ಕದ ಈತ ಬಿಜೆಪಿಗಳ ಕೈಗೆ ಸಿಕ್ಕಿದ್ದಾನೆಂದರೆ ಈ ಚೆಡ್ಡಿಗಳು ಇನ್ನೆಂತಹ ಪಿ.ಸಿ.ಗಳಿರಬಹುದೆಂದು ಇಡೀ ಚನ್ನಪಟ್ಟಣವೇ ಚಪ್ಪಾಳೆ ಹೊಡೆದು ನಕ್ಕಿದೆಯಂತಲ್ಲಾ, ಥೂತ್ತೇರಿ!

* * * * * *

ಬರುಬರುತ್ತ ಕರ್ನಾಟಕದ ಮತದಾರರು ಅತ್ತ ಬಿಹಾರದ ಜನ, ಇತ್ತ ತಮಿಳುನಾಡಿನ ಮೆಂಟ್ಲುಗಳನ್ನು ಮೀರಿಸುವ ಮಟ್ಟಕ್ಕೆ ಪ್ರಬುದ್ಧರಾಗುತ್ತಿದ್ದಾರಂತಲ್ಲಾ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಯಾರೊ ಮಹಾ ಮಾತೆ ಹಾಲು ಕರೆದು ಕುಮಾರಣ್ಣನ ಕಟೌಟ್ ತುಟಿಗೆ ಹುಯ್ದು ಕೃತಾರ್ಥಳಾದ ಘಟನೆ ಇನ್ನೂ ಹಸಿಯಾಗಿರುವಾಗಲೇ, ಯಾರೊ ಯಡ್ಡಿ ಭಕ್ತ ಯಡೂರಪ್ಪನ ಕಟೌಟಿಗೆ ಹಾಲು ಕುಡಿಸಿ ಹಾಸ್ಯಾಸ್ಪದನಾಗಿದ್ದಾನಂತಲ್ಲಾ. ಹುಚ್ಚರು ಬೀದಿಗೆ ಬಂದು ಬಟ್ಟೆ ಬಿಚ್ಚಿ ಕುಣಿಯುವಂತಹ ಕ್ರಿಯೆಗೆ ಸಮನಾದ ಇಂತಹ ದೃಶ್ಯ ನೋಡಿದ ಪ್ರಜ್ಞಾವಂತರು ಇಂತಹ ಹಾಲಿನ ಹುಚ್ಚರನ್ನು ಹಿಡಿದು ಆಸ್ಪತ್ರೆಗೆ ಸಾಗಿಸುವುದು ಬಿಟ್ಟು, ತಾವೂ ನೋಡುತ್ತ ನಿಂತವಂತಲ್ಲಾ, ಥೂತ್ತೇರಿ!


* * * * * *

ಇತ್ತ ನಮ್ಮ ಕೂಗುಮಾರವ್ವನ ಫಜೀತಿ ಶಾನೆ ಶೋಕಪೂರಿತವಾಗಿದೆಯಂತಲ್ಲಾ. ಉದಯ ಟಿವಿಗೆ ಅಡರಿಕೊಂಡು ಅವರಿವರನ್ನು ಹರುಕುಬಾಯಲ್ಲಿ ಮಾತನಾಡಿಸುತ್ತ ಅರ್ಧ ಪ್ರಶ್ನೆ ಕೇಳಿ, ಅದಕ್ಕೆ ಅರ್ಧ ಉತ್ತರ ತಾನೇ ಹೇಳಿ, ಹಾಸ್ಯಾಸ್ಪದವಾಗುತ್ತಲೇ ಕರ್ನಾಟಕದ ನಂಬರ್ ಒನ್ ನಾಲಾಯಕ್ ಮುಖ್ಯಮಂತ್ರಿ ಎಸ್ಸೆಂ ಕೃಷ್ಣರನ್ನು ಹೊಗಳಿ, ದಿಕೆಶಿಯನ್ನು ಹೊನ್ನಶೂಲಕ್ಕೇರಿಸಿ, ವಯಲಾರ್ ರವಿಯನ್ನು ವಲ್ಲರ್ರಾಗಿ ಹೊಗಳಿ, ಅಂತೂ ಎಂಪಿ ಟಿಕೆಟ್ ಗಿಟ್ಟಿಸಿ ಗೆದ್ದ ಈ ಮಾಯಾಂಗನೆಯೀಗ ಅತ್ತ ದರಿ ಎಂಬ ಕಾಂಗೈ, ಇತ್ತ ಹುಲಿ ಎಂಬ ಜೆಡಿಎಸ್ ಬಿಟ್ಟು ತರದಿಲ್ಲದ ನರಿಗಳ ಬೀಡಾದ ಬಿಜೆಪಿ ಬಾಗಿಲು ಕಾಯುತ್ತಿದ್ದಾಳಂತಲ್ಲಾ. ಇವಳನ್ನು ನೋಡಿದ ಕೂಡಲೇ ಪುಳಕಿತರಾದ ಸಿ.ಟಿ. ರವಿ, ರೇಣುಕಾಚಾರಿ ಮುಂತಾದ ತೋಳಗಳು ಬಾಯಿ ಚಪ್ಪರಿಸುತ್ತಿದ್ದಾಗಲೇ ಅಲ್ಲಿಗೆ ಬಂದ ಸುರೇಶ್‌ಕುಮಾರ್ ಎಂಬ ಚೆಡ್ಡಿ ಬುದ್ಧಿಜೀವಿ ಮಾಜಿ ಕಮ್ಯುನಿಸ್ಟ್‌ರನ್ನು ಗುಮಾನಿಯಿಂದ ನೋಡಬೇಕೆಂದು ಎಚ್ಚರಿಸಿದನಂತಲ್ಲಾ. ಅದಕ್ಕೆ ಕೇಶವಕೃಪದ ವಟುವೊಂದು "ಕಮ್ಯುನಿಸ್ಟ್ ಮತ್ತು ಆರೆಸೆಸ್ ನಡುವೆ ಅಂತಹ ವ್ಯತ್ಯಾಸವಿಲ್ಲ ಅನ್ನಿಸುತ್ತೆ. ನಮ್ಮ ಕಚೇರಿಗಾಗಲೇ ಕಮ್ಯುನಿಸ್ಟ್ ಸಂಘಬಿಟ್ಟು ಬಂದ ಶೆಟ್ಟಿಯೊಬ್ಬ ಇನ್‌ವಿಟೇಶನ್‌ಗಳಿಗೆ ಅಡ್ರಸ್ ಬರೆಯುತ್ತಿದ್ದಾನೆ" ಎಂದು ಸಮಾಧಾನ ಮಾಡಿದನಂತಲ್ಲಾ.

ಕೂಗುಮಾರವ್ವನ ಫಜೀತಿ ನೋಡಿದ ಕಾಂಗೈಗಳು "ಅಯ್ಯೊ ಗೌಡರ ಮನೆಯಲ್ಲಿ ಕುರುಬಾರ ಮನೆಯಲ್ಲಿ ಲಿಂಗಾಯಿತ ಮನೆಯಲ್ಲಿ ಹಾಲುನೆಕ್ಕೊಂದು ನೋಡೊ ಬೆಕ್ಕೂ" ಎಂದು ಪಿಚ್ಚಳ್ಳಿ ಶ್ರೀನಿವಾಸನ ದನಿಯಲ್ಲಿ ಗುಂಟಲೆತ್ತರಿಸಿ ಹಾಡುತ್ತಿದೆಯಂತಲ್ಲಾ, ಥೂತ್ತೇರಿ!

■ ಯಾಹೂ

ತುಮಕೂರು ವಿವಿಗೆ ಶಿವಕುಮಾರ ಸ್ವಾಮಿಗಳ ಹೆಸರೇಕೆ?



ಇದು ಯಡ್ಡಿಯ ಇನ್ನೊಂದು ಕುಚೇಷ್ಟೆ. ಸುಮ್ಮನೆ ಕುಳಿತುಕೊಳ್ಳಲಾರದೇ ಅದೆಲ್ಲೋ ಹುಳ ಬಿಟ್ಟುಕೊಂಡರು ಅನ್ನೋ ರೀತಿಯಲ್ಲಿ ಅವರು ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಯ ಹೆಸರನ್ನಿಡಲು ಹೊರಟಿದ್ದಾರೆ. ಈ ಮೂಲಕ ಲೋಕಸಭಾ ಚುನಾವಣೆಯ ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಯಡಿಯೂರಪ್ಪನವರು ಸಿದ್ಧಗಂಗಾ ಮಠದ ಭಕ್ತಕೋಟಿಯನ್ನು, ಲಿಂಗಾಯತ ಸಮುದಾಯವನ್ನು ಬಿಜೆಪಿ ಪಕ್ಷದ ಓಟುಗಳನ್ನಾಗಿ ಪರಿವರ್ತಿಸುವುದಕ್ಕೆ ಹೊರಟಿರುವುದು ಇಡೀ ರಾಜ್ಯದಲ್ಲಿ ಪ್ರತಿರೋಧದ ಅಲೆಯನ್ನು ಎಬ್ಬಿಸಿದೆ. ಅದರಲ್ಲೂ ವಿಶೇಷವಾಗಿ ತುಮಕೂರಿನ ಜನ ಯಡ್ಡಿಯ ಈ ಕೆಲಸಕ್ಕೆ ಛೀಮಾರಿ ಹಾಕುತ್ತಿದ್ದರೆ ದಲಿತ ಸಂಘರ್ಷ ಸಮಿತಿ, ದಲಿತ ಸಾಮಾಜಿಕ ಸಾಂಸ್ಕೃತಿಕ ಸಂಶೋಧನಾ ಕೇಂದ್ರ, ಮಾದಿಗ ದಂಡೋರ, ದಲಿತ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ, ಅಸ್ಪೃಷ್ಯತಾ ವಿರೋಧಿ ಸೇನೆ,ಜನಪರ ವೇದಿಕೆ, ವಕೀಲರ ವೇದಿಕೆ, ವಿಚಾರರಂಗ, ಚಮ್ಮಾರರ ಹಿತರಕ್ಷಣಾ ಸಮಿತಿ, ಹರಳಯ್ಯ ಯುವಕರ ಸಂಘ, ಒಕ್ಕಲಿಗರ ಯುವ ವೇದಿಕೆಯಂಥ ನೂರಾರು ಸಂಘಟನೆಗಳು ಈಗಾಗಲೇ ಯಡ್ಡಿಯ ಚೆಡ್ಡಿ ಕಳಚಲು ಬೀದಿಗಿಳಿದಿವೆ.

ಇನ್ನೊಂದೆಡೆ ಇಲ್ಲಿಯವರೆಗೂ ಘನತೆ-ಗಾಂಭೀರ್ಯದಿಂದಿದ್ದು ಎಲ್ಲಾ ಜಾತಿಯ ಜನರ ಪ್ರೀತಿ ವಿಶ್ವಾಸ ಗಳಿಸಿದ್ದ ಸಿದ್ದಗಂಗಾ ಸ್ವಾಮಿಗಳು ಈಗ ಕೋಮುವಾದಿಗಳೊಂದಿಗೆ ಕೈಜೋಡಿಸಿ ಚಿಲ್ಲರೆ ಪ್ರಶಸ್ತಿ, ಕೃತಕ ಸ್ಥಾನಮಾನಕ್ಕೆ ಆಸೆ ಪಡುತ್ತಿರುವುದು ಜಿಲ್ಲೆಯ ಜನರಲ್ಲಿ ಜಿಗುಪ್ಸೆ ಮೂಡಿಸಿದೆ.

ಯಡ್ಡಿ ಮುಖ್ಯಮಂತ್ರಿಯಾದ ಮೇಲೆ ಸಿಕ್ಕಿರುವ ಅಧಿಕಾರವನ್ನು ಬಳಸಿಕೊಂಡು ಬಿಜೆಪಿ ಪಕ್ಷವನ್ನು, ಸಂಘಪರಿವಾರದ ಸಿದ್ಧಾಂತವನ್ನು ಗಟ್ಟಿಗೊಳಿಸುವುದಕ್ಕೆ ಕೊಟ್ಟ ಗಮನದ ಅರ್ಧದಷ್ಟನ್ನಾದರೂ ರಾಜ್ಯದ ಅಭಿವೃದ್ಧಿಗಾಗಿ ಕೊಟ್ಟಿದ್ದರೆ ರಾಜ್ಯದ ಪರಿಸ್ಥಿತಿ ಈ ಹೊತ್ತು ಈ ರೀತಿ ಇರುತ್ತಿರಲಿಲ್ಲ. ಯಡಿಯೂರಪ್ಪನವರು ಆಯಾಕಟ್ಟಿನ ಜಾಗದಲ್ಲಿ ಸಂಘಪರಿವಾರದ ಸಿದ್ಧಾಂತಿಗಳನ್ನು, ಬಿಜೆಪಿಯ ಬೆಂಬಲಿಗರನ್ನು, ಸ್ವಜಾತಿ ಬಾಂಧವರನ್ನು ತುಂಬುತ್ತಿರುವ ಪರಿಯನ್ನು ನೋಡಿದರೆ ಇವರು ರಾಜ್ಯದ ಮುಖ್ಯಮಂತ್ರಿಯೋ ಅಥವ ಸಂಘಪರಿವಾರ-ಬಿಜೆಪಿಯ ಮುಖ್ಯಮಂತ್ರಿಯೋ ಎಂಬ ಅನುಮಾನ ಕಾಡದಿರದು. ಈಗ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಿದ್ದಗಂಗಾಮಠದ ಶಿವಕುಮಾರ ಸ್ವಾಮಿಯ ಹೆಸರನ್ನಿಡುವುದಕ್ಕೆ ಹೊರಟಿರುವುದು ಈ ಕೆಟ್ಟ ಪರಂಪರೆಯ ಮುಂದುವರಿದ ಭಾಗವಷ್ಟೆ.

ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಯಡಿಯೂರಪ್ಪನವರ ದುರುದ್ದೇಶವನ್ನು ಯಾರು ಬೇಕಾದರೂ ಅರ್ಥಮಾಡಿಕೊಳ್ಳಬಹುದು.

ಡಾ.ಶಿವಕುಮಾರ ಸ್ವಾಮಿಗಳು ಅನ್ನ ದಾಸೋಹದ ಮೂಲಕ ಕೋಟ್ಯಾಂತರ ಬಡವರ ಹಸಿವನ್ನು ನೀಗಿಸುತ್ತಿರುವುದು ನಿಜ. ಅಕ್ಷರ ದಾಸೋಹದ ಮೂಲಕ ಕೋಟ್ಯಾಂತರ ಬಡಮಕ್ಕಳ ಬಾಳಿನಲ್ಲಿ ಅಕ್ಷರದ ದೀವಿಗೆ ಹೊತ್ತಿಸಿದ್ದೂ ನಿಜ. ಎಲ್ಲಾ ಮಠಮಾನ್ಯಗಳು ಒಂದೊಂದು ಜಾತಿಯ ಸೊತ್ತಾಗಿದ್ದ ಸಂದರ್ಭದಲ್ಲಿ ಸಿದ್ದಗಂಗೆಯನ್ನು ಸರ್ವಜನಾಂಗಗಳ ತಾಣವನ್ನಾಗಿ ಮಾಡಿದ್ದೂ ನಿಜ. ಜಾತ್ಯಾತೀತ ಮೌಲ್ಯಗಳನ್ನು ಕೇವಲ ಮಾತಿನಲ್ಲಿ ಮಾತ್ರವಲ್ಲ ಕೃತಿಯಲ್ಲೂ ಸಾಧಿಸಿ ತೋರಿಸಿದ ಶ್ರೇಯಸ್ಸು ನಿಜಕ್ಕೂ ಸಿದ್ದಗಂಗಾಮಠ ಸಲ್ಲಬೇಕೆಂಬುದೂ ನಿಜ.

ಆದರೆ, ಅದೆಲ್ಲ ಈಗ ಚರಿತ್ರೆ. ತಮ್ಮ ಜೀವನದುದ್ದಕ್ಕೂ ಜಾತ್ಯಾತೀತ ಮೌಲ್ಯಗಳನ್ನೇ ಪ್ರತಿಪಾದಿಸಿಕೊಂಡು, ಆಚರಿಸಿಕೊಂಡು ಬಂದಿದ್ದ ಮಾನವೀಯ ಧರ್ಮವನ್ನು, ಮಾನವ ಪ್ರೀತಿಯನ್ನು, ಪರಧರ್ಮ ಸಹಿಷ್ಣುತೆಯನ್ನು, ಜಾತ್ಯಾತೀತೆಯನ್ನು ಎತ್ತಿ ಹಿಡಿಯುತ್ತಲೇ ಬಂದಿದ್ದ ಡಾ.ಶಿವಕುಮಾರ್ ಸ್ವಾಮಿಗಳು ಈಗ ಆರ್‌ಎಸ್‌ಎಸ್ ಮತ್ತು ಬಿಜೆಪಿ ಪಕ್ಷಗಳ ಕೋಮುವಾದಿ ಕೆಸರಲ್ಲಿ ಬೀಳುತ್ತಿದ್ದಾರೆ. ಇಲ್ಲದಿದ್ದರೆ, ಇಡೀ ಕರ್ನಾಟಕ ಕೋಮುವಾದಿಗಳ ಅಟ್ಟಹಾಸಕ್ಕೆ ಸಿಕ್ಕು ನಲುಗುತ್ತಿರುವಾಗ, ಭಜರಂಗದಳ, ಶ್ರೀರಾಮಸೇನೆ, ವಿಶ್ವಹಿಂದೂ ಪರಿಷತ್‌ನಂತಹ ಸಂಘಪರಿವಾರದ ಗೂಂಡಾಗಳು ಮುಸ್ಲೀಮರನ್ನು, ಕ್ರಿಶ್ಚಿಯನ್ನರನ್ನು ಕಂಡಲ್ಲೆ ಇರಿದು ಕೊಲ್ಲುತ್ತಿರುವಾಗ ಸ್ವಾಮಿಗಳು ಸಹಿಸಿಕೊಂಡು ಮೌನಿಯಾಗಿರುತ್ತಿರಲಿಲ್ಲ; ಯಡ್ಡಿ ಕೊಟ್ಟ ಕರ್ನಾಟಕ ರತ್ನ ಪ್ರಶಸ್ತಿಯನ್ನು ಸ್ವೀಕರಿಸುತ್ತಿರಲಿಲ್ಲ.


ಯಡ್ಡಿ ಶಿವಕುಮಾರ ಸ್ವಾಮಿಗಳನ್ನು ಈ ರೀತಿ ಎತ್ತಿ ಮೆರೆಸುತ್ತಿರುವುದು ಇದೇ ಕಾರಣಕ್ಕೆ. ಸಿದ್ಧಗಂಗಾ ಮಠದ ಬೆನ್ನಿಗಿರುವ ಭಕ್ತಕೋಟಿಯನ್ನು ಬಿಜೆಪಿ ಪಕ್ಷದ ಓಟುಗಳನ್ನಾಗಿ ಮಾಡಿಕೊಳ್ಳಬೇಕೆಂಬುದು ಅವರ ಕುತಂತ್ರ. ಅದಕ್ಕೆ ಶಿವಕುಮಾರ ಸ್ವಾಮಿಗೆ ಕರ್ನಾಟಕ ರತ್ನ ಕೊಟ್ಟಿದ್ದೂ ಆಯಿತು, ಸ್ವಾಮಿಗಳ ಜನ್ಮಶತಮಾನೋತ್ಸವಕ್ಕೆ ಸರ್ಕಾರದ ಬೊಕ್ಕಸದಿಂದ ಕೋಟಿ ಕೋಟಿ ದುಡ್ಡು ಹರಿಸಿದ್ದೂ ಆಯಿತು. ಈಗ ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರನ್ನು ಇಡಲು ಮುಂದಾಗಿರುವುದೂ ಕೂಡ ಮಠದ ಭಕ್ತಸಮೂಹದ, ಲಿಂಗಾಯತ ಸಮುದಾಯದ ಓಟುಗಳನ್ನು ಬಿಜೆಪಿಯೆಡೆಗೆ ಸೆಳೆಯುವುದಕ್ಕಾಗಿಯೆ.

ಹಾಗೇ ನೋಡಿದರೆ ತುಮಕೂರು ಅತ್ಯಂತ ಶ್ರೇಷ್ಠ ವ್ಯಕ್ತಿಗಳನ್ನು ನಾಡಿಗೆ ಕೊಡುಗೆಯಾಗಿ ನೀಡಿದೆ. ರಂಗಭೂಮಿಯಲ್ಲಿ ಕ್ರಾಂತಿಯನ್ನೇ ಮಾಡಿದ ಗುಬ್ಬಿ ವೀರಣ್ಣ, ವಿಶ್ವವಿಖ್ಯಾತ ಅಣು ವಿಜ್ಞಾನಿ ಡಾ.ರಾಜಾರಾಮಣ್ಣ, ಖ್ಯಾತ ಕವಿಗಳಾದ ಬಿ.ಎಂ.ಶ್ರೀ., ತೀ.ನಂ.ಶ್ರೀ. ಮುಂತಾದವರೆಲ್ಲರೂ ತುಮಕೂರಿನವರೆ. ನಾಡಿನ ಸಂಸ ತಿ, ಕಲೆ ಮತ್ತು ಸಾಹಿತ್ಯಕ್ಕೆ ಅಪಾರ ಕೊಡುಗೆ ಕೊಟ್ಟ ಇಂಥ ಮಹನೀಯರನ್ನು ಬಿಟ್ಟು ಕೋಮುವಾದಿ ರಾಜಕಾರಣಕ್ಕೆ ಬೆಂಬಲ ನೀಡುತ್ತಿರುವ ಶಿವಕುಮಾರ ಸ್ವಾಮಿಗಳ ಹೆಸರನ್ನು ವಿಶ್ವವಿದ್ಯಾಲಯಕ್ಕೆ ಇಡಲು ಹೊರಟಿರುವುದು ಸಹಜವಾಗಿ ತುಮಕೂರಿನ, ಕರ್ನಾಟಕದ ಜನರನ್ನು ಕೆರಳಿಸಿದೆ. ತುಮಕೂರು ವಿಶ್ವವಿದ್ಯಾನಿಲಯಕ್ಕೆ ಶಿವಕುಮಾರ ಸ್ವಾಮಿಗಳ ಹೆಸರನ್ನಿಡಲು ಹೊರಟಿರುವ ಯಡ್ಡಿಯ ಕ್ರಮವನ್ನು ಇಡೀ ತುಮಕೂರು ಜನತೆಯೇ ಒಕ್ಕೊರಲಿನಿಂದ ವಿರೋಧಿಸುತ್ತಿದೆ. ಹತ್ತಾರು ದಲಿತ, ರೈತ ಸಂಘಟನೆಗಳು, ಸಾಮಾಜಿಕ ಕಾರ್ಯಕರ್ತರು ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆ; ಈಗಿರುವ 'ತುಮಕೂರು ವಿಶ್ವವಿದ್ಯಾನಿಲಯ' ಎಂಬ ಹೆಸರನ್ನೇ ಮುಂದುವರೆಸಿಕೊಂಡು ಹೋಗಲು ಆಗ್ರಹಿಸುತ್ತಿದ್ದಾರೆ. ಹೋರಾಟ ತೀವ್ರಗೊಂಡರೆ ಯಾವ ಉದ್ದೇಶಕ್ಕಾಗಿ ಯಡ್ಡಿ ಶಿವಕುಮಾರ ಸ್ವಾಮಿಯ ಹೆಸರನ್ನು ವಿಶ್ವವಿದ್ಯಾನಿಲಯಕ್ಕೆ ಇಡಲು ಹೊರಟಿದ್ದಾರೋ ಅದೇ ಅವರಿಗೆ ಬರುವ ಚುನಾವಣೆಯಲ್ಲಿ ತಿರುಗುಬಾಣವಾದರೂ ಆಶ್ಚರ್ಯವಿಲ್ಲ.

■ ಸಿದ್ದಲಿಂಗಯ್ಯ, ತುಮಕೂರು

ಜಗ್ಗೇಶ್ ನಾಯಿಪಾಡು

ಬೆಟ್ಟದ ಮೇಲಿನ ಪರ ನೋಡಿ ಊರ ಮುಂದಿನ ಕಣ ಬಿಟ್ಟನಂತೆ!



ಇದು ನವರಸ ನಾಯಕ ಜಗ್ಗೇಶ್ ಕುರಿತಂತೆ ತುರುವೇಕೆರೆಯಲ್ಲಿ ಹುಟ್ಟಿಕೊಂಡ ಲೇಟೆಸ್ಟ್ ಜೋಕು. ದಾಸಯ್ಯನೋರ್ವ ಊರ ಮುಂದಿನ ಕಣದ ಊಟಕ್ಕೆಂದು ಬಂದವನು ಪಕ್ಕದಲ್ಲೇ ಇದ್ದ ಬೆಟ್ಟದ ಮೇಲಿನ ಪರಕ್ಕೂ ಹೋಗಿ ದುಪ್ಪಟ್ಟು ಲಾಭ ಮಾಡಿಕೊಳ್ಳಲು ಯೋಚಿಸಿದನಂತೆ. ಆತ ಹೋಗುವಷ್ಟರಲ್ಲಿ ಬೆಟ್ಟದ ಮೇಲಿನ ಪರವೂ ಮುಗಿದಿತ್ತು ವಾಪಸ್ಸು ಓಡೋಡಿ ಬರುವಷ್ಟರಲ್ಲಿ ಊರ ಮುಂದಿನ ಕಣವೂ ಮುಗಿದುಹೋಗಿತ್ತು!

ಜಗ್ಗೇಶ್‌ಗಾದ ಗತಿಗೂ ಈ ಕತೆಗೂ ಯಾವುದೇ ವ್ಯತ್ಯಾಸವಿಲ್ಲ.

ಕಾಂಗ್ರೆಸ್ಸಿನಿಂದ ಗೆದ್ದು ಎಮ್ಮೆಲ್ಲೆಯಾದರೆ ಸರ್ಕಾರ ಬಂದದ್ದು ಬಿಜೆಪಿ. ಹಾಳಾಗಲಿ ಹೇಗೋ ಕಾಲ ತಳ್ಳೋಣ ಎಂದರೆ ಕಾಂಗ್ರೆಸ್ಸಿನೊಳಗೇ ಕಿತಾಪತಿ. ತುಮಕೂರು ಕಾಂಗ್ರೆಸ್ ನಾಯಕ ಮತ್ತು ಲೋಕಸಭಾ ಸದಸ್ಯ ಜಿ.ಎಸ್. ಬಸವರಾಜು ತನಗೆ ಟಿಕೆಟ್ ತಪ್ಪಿಸಲು ನಡೆಸಿದ ಪಿತೂರಿ, ಗೆದ್ದ ನಂತರ ಕೊಟ್ಟ ಕಾಟಗಳಿಂದ ಬೇಸತ್ತು ಬಿಜೆಪಿಗೆ ಬಂದರೆ ಈಗ ಅದೇ ಬಸವರಾಜುವೇ ತುಮಕೂರು ಬಿಜೆಪಿ ಚುಕ್ಕಾಣಿ ಹಿಡಿದಿದ್ದಾರೆ!


ಯಾವತ್ತು ತುಮಕೂರಿನ ಕಾಂಗ್ರೆಸ್ ಸಂಸದ ಜಿ.ಎಸ್. ಬಸವರಾಜುಗೆ ಬಿಜೆಪಿ ಟಿಕೆಟ್ ಗ್ಯಾರಂಟಿಯಾಯ್ತೋ, ಮಿಕ್ಕೆಲ್ಲರಿಗಿಂತಲೂ ದೊಡ್ಡ ಬೊಬ್ಬೆ ಹಾಕಿದ್ದು ಜಗ್ಗೇಶ್. ಯಾರ ಮೇಲಿನ ಸಿಟ್ಟಿಗೆಂದು ಬಿಜೆಪಿಗೆ ಬಂದನೋ ಈಗ ಆತನೇ ತುಮಕೂರಿನ ಬಿಜೆಪಿ ಲೋಕಸಭಾ ಅಭ್ಯರ್ಥಿಯೆಂದರೆ ತನ್ನದು ನಾಯಿಪಾಡೆ?

ಇದು ಜಗ್ಗೇಶ್ ಪೀಕಲಾಟ. ಬಿಜೆಪಿ ನಾಯಕ ಅಶೋಕ್ ನಂಬಿ ಕಾಂಗ್ರೆಸ್ ಬಿಟ್ಟು ಎಮ್ಮೆಲ್ಲೇಗಿರಿಯನ್ನೂ ಕಳಕೊಂಡ ಜಗ್ಗೇಶ್‌ಗೆ ಸಿಕ್ಕಿದ್ದು ಕೆಎಸ್ಸಾರ್ಟಿಸಿಯ ಪುಡಿ ಉಪಾಧ್ಯಕ್ಷಗಿರಿ ಮಾತ್ರ. ಕನಿಷ್ಠ ತನ್ನ ಪತ್ನಿಗಾದರೂ ತುರುವೇಕೆರೆಯ ಬಿಜೆಪಿ ಟಿಕೆಟ್ ಸಿಗಬಹುದೆಂಬ ನಿರೀಕ್ಷೆ ಜಗ್ಗೇಶ್‌ಗಿತ್ತು. ಆದರೆ ಉಪಚುನಾವಣೆಯಲ್ಲಿ ಟಿಕೆಟ್ಟು ಲಕ್ಷ್ಮಿನಾರಾಯಣರ ಪಾಲಾದರೆ, ಜಗ್ಗೇಶ್-ಅಶೋಕ್ ಸೇರಿ ಏನೆಲ್ಲಾ ಸರ್ಕಸ್ ಮಾಡಿದರೂ ಅಲ್ಲಿ ಬಿಜೆಪಿಯನ್ನು ಗೆಲ್ಲಿಸಲಾಗಲಿಲ್ಲ. ಹೋಗಲಿ ತುಮಕೂರಿನ ಲೋಕಸಭಾ ಅಭ್ಯರ್ಥಿಯಾಗಿಯಾದರೂ ಬಿಜೆಪಿ ತನ್ನನ್ನು ಕೈಹಿಡಿಯುತ್ತದೆ ಎಂಬ ಜಗ್ಗೇಶ್ ಕೊನೆಯ ಆಸೆಯೂ ಈಗ ನೀರು ಪಾಲಾಗಿದೆ.

ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ ಎಂಬಂತೆ ಕಡುವೈರಿ ಬಸವರಾಜುವೇ ಬಿಜೆಪಿಗೆ ಬಂದಿದ್ದಾರೆ. ಜಗ್ಗೇಶ್ ಕಾದು ಕೂತಿದ್ದ ಟಿಕೆಟ್ಟನ್ನೂ ಕಿತ್ತುಕೊಂಡಿದ್ದಾರೆ. ಮತ್ತೆ ಕಾಂಗ್ರೆಸ್ಸಿಗೆ ಹೋಗಲು ಮುಖವಿಲ್ಲ. ಬಿಜೆಪಿಯಲ್ಲೇ ಇದ್ದರೆ ಬೆಲೆಯಿಲ್ಲ. ಹಾಗೊಮ್ಮೆ ಇದ್ದರೂ ಬಸವರಾಜು ಉಳಿಸೋಲ್ಲ. ಇದು ನಾಯಿಪಾಡಾ ಅಥವಾ ಪರದ ಆಸೆಗೆ ಬಿದ್ದು ಕಣವನ್ನು ಕಳಕೊಂಡು ದಾಸಯ್ಯನಿಗಾದ ಗತಿಯಾ? ■

ವಿ.ಕ.ಭಟ್: 'ಅನಂತ' ಪ್ರೀತಿ, ಯಡ್ಡಿ ದ್ವೇಷ


ಕರ್ನಾಟಕದ ನಂ.1 ಪತ್ರಿಕೆ 'ವಿಜಯ ಕರ್ನಾಟಕ' ಮುಖ್ಯಮಂತ್ರಿ ಯಡ್ಡಿ ವಿರುದ್ಧ ತಿರುಗಿ ಬಿದ್ದಿದೆ. ಕಾರಣ ಸಂಪಾದಕ 'ಚೆಡ್ಡಿ' ಭಟ್ಟರ ಬಿಜೆಪಿ ಬಗೆಗಿನ 'ಅನಂತ'ಪ್ರೀತಿ. ಟೈಮ್ಸ್ ಮಾರ್ವಾಡಿಗಳ ದುಡ್ಡಿನಲ್ಲಿ ಸಂಘಪರಿವಾರದ ಮುಖವಾಣಿಯಂತೆ ವಿಜಯ ಕರ್ನಾಟಕವನ್ನು ರೂಪಿಸುತ್ತಿರುವ ವಿಶ್ವೇಶ್ವರ ಭಟ್ಟರಿಗೆ ಮೊದಲಿನಿಂದಲೂ ಯಡ್ಡಿ ಕಂಡರೆ ಅಷ್ಟಕಷ್ಟೇ.



ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅನಂತಕುಮಾರ್ ಬಳಗದ ಇಬ್ಬರಿಗೆ ಟಿಕೆಟ್ ನೀಡಲಿಲ್ಲ ಎಂಬ ಕಾರಣಕ್ಕೆ ಯಡ್ಡಿ ವಿರುದ್ಧ ವಿಕ ದ್ವೇಷ ಕಾರಲಾರಂಭಿಸಿತು. ಅದಕ್ಕೆ ಸರಿಯಾಗಿ ಯಡ್ಡಿ ಒಂದರ ಮೇಲೊಂದು ತಪ್ಪುಗಳನ್ನು ಎಸಗುತ್ತಾ ಹೋದರು. ಇದೆಲ್ಲ ಅವರನ್ನು ಹಣಿಯಲು ವಿಕಗೆ ಸಕತ್ ಸಾಮಗ್ರಿಗಳಾದವು. ಅದರಲ್ಲೂ ಮೇವರಿಕ್ ಹಗರಣದ ಸಂದರ್ಭದಲ್ಲಿ ಯಡ್ಡಿಯನ್ನು ನೇರವಾಗಿ ಟಾರ್ಗೆಟ್ ಮಾಡಿ ವರದಿ ಪ್ರಕಟಿಸಲಾಯಿತು. ಎಷ್ಟರ ಮಟ್ಟಿಗೆ ಅಂದರೆ ದಿನಪತ್ರಿಕೆಗೆ ಒಗ್ಗದ ಶೈಲಿಯಲ್ಲಿ ಕುಟುಕಬ್ಬುಗಳನ್ನು ಬಳಸಿ ವಿಕ ವರದಿ ಮಾಡಿತ್ತು. ಅದರ ಹಿಂದೆ ಭಟ್ಟರ ಅನಂತು ಪ್ರೇಮ ಮತ್ತು ಯಡ್ಡಿ ದ್ವೇಷ ಎರಡೂ ಇತ್ತೆಂಬುದು ಆಗಲೇ ಬಹಿರಂಗಗೊಂಡಿತ್ತು.

ಇದು ಗೊತ್ತಾಗುತ್ತಿದ್ದಂತೆಯೇ ಎಚ್ಚೆತ್ತ ಯಡ್ಡಿ ವಿಕಕ್ಕೆ ಹರಿದು ಹೋಗುತ್ತಿದ್ದ ಸರ್ಕಾರಿ ಜಾಹೀರಾತುಗಳಿಗೆ ಬ್ರೇಕ್ ಹಾಕಿದರು. ಈ ಬೆಳವಣಿಗೆಯಿಂದ ಕಂಗೆಟ್ಟ ಮಾರ್ವಾಡಿಗಳು ನಂತರ ಮುಖ್ಯಮಂತ್ರಿಯೊಂದಿಗೆ ಸಂಧಾನ ನಡೆಸಿ, ಮತ್ತೆ ಜಾಹೀರಾತು ಬರುವಂತೆ ಮಾಡಿಕೊಂಡರು.

ಈಗ ಮತ್ತೆ ವಿಶ್ವೇಶ್ವರ ಭಟ್ಟರು ಯಡ್ಡಿ ವಿರುದ್ಧ ಹರಿಹಾಯುತ್ತಿದ್ದಾರೆ. ಅನಂತುವನ್ನು ನಿರ್ಲಕ್ಷಿಸಿ ಮೂಲೆಗುಂಪು ಮಾಡುತ್ತಿರುವ ಯಡ್ಡಿಗೆ ಬುದ್ಧಿ ಕಲಿಸುವವರೆಗೆ ಸುಮ್ಮನಿರುವುದಿಲ್ಲ ಎಂಬ ಅವರು ಪಣ ತೊಟ್ಟಿರುವಂತಿದೆ. ಈ ಒಂದೇ ಕಾರಣಕ್ಕೆ ಯಡ್ಡಿ ಮಾಡುವ ಎಲ್ಲಾ ತಪ್ಪುಗಳನ್ನು ಹುಡುಕೀ ಹುಡುಕೀ ಬರೆಯುವ ಧೈರ್ಯ ತೋರಿದ್ದಾರೆ! ಅಷ್ಟೇ ಅಲ್ಲ, ತಮ್ಮ ಎಂದಿನ ಪತ್ರಿಕಾಧರ್ಮದ ಶೈಲಿಯಲ್ಲಿ ತಾವೇ ಓದುಗರ ಹೆಸರಿನಲ್ಲಿ ಪತ್ರ ಬರೆದುಕೊಂಡು ಯಡ್ಡಿಯ ಪುತ್ರವ್ಯಾಮೋಹವನ್ನು ಖಂಡಿಸಿ ಮುಖಪುಟದಲ್ಲೇ ಪ್ರಕಟಿಸಿದ್ದಾರೆ.



ಇತ್ತ ಯಡ್ಡಿ ತಮ್ಮ ಮಗನಿಗೆ ಮತ್ತು ಬೇಕಾದವರಿಗೆ ಟಿಕೆಟ್ ಕೊಡಿಸಿ ಗೆದ್ದಿದ್ದರೆ ಅತ್ತ ಸೋತ ಅನಂತು 'ಹಾಸಿಗೆ' ಹಿಡಿದಿದ್ದಾರೆ. ಯಡ್ಡಿಯ ಪ್ರಭಾವದಿಂದಾಗಿ ಅನಂತು ರಾಜ್ಯದಲ್ಲಿ ಮಾತ್ರವಲ್ಲ ರಾಷ್ಟ್ರಮಟ್ಟದಲ್ಲಿಯೂ ಮೂಲೆಗುಂಪಾಗುವ ಸಾಧ್ಯತೆಗಳು ಕಾಣುತ್ತಿರುವುದು ವಿಕ ಭಟ್ಟರ ಪಿತ್ತ ನೆತ್ತಿಗೇರುವಂತೆ ಮಾಡಿದೆ.

ಅನಂತು ಮಾತಿಗೆ ಎಲ್ಲಿಲ್ಲದ ಬೆಲೆ ನೀಡುತ್ತಿದ್ದ ಆಡ್ವಾಣಿಯೇ ಈಗ ಉಲ್ಟಾ ಹೊಡೆಯಲಾರಂಭಿಸಿದ್ದಾರೆ. ಯಡ್ಡಿ ಬಳಿ ಅಧಿಕಾರ ಮತ್ತು ರಾಜಕೀಯ ಶಕ್ತಿ ಇದೆ, ಅನಂತು ಬಳಿ ಒಣ ವೇದಾಂತ ಬಿಟ್ಟರೆ ಬೇರೆ ಏನಿದೆ ಎಂದು ಭಾವಿಸಿರುವ ಆಡ್ವಾಣಿ ಇತ್ತೀಚೆಗೆ ಅನಂತು ಮಾತಿಗಿಂತ ಜಾಸ್ತಿ ಯಡ್ಡಿ ಮಾತಿಗೇ ಕಿವಿಗೊಡಲಾರಂಭಿಸಿದ್ದಾರೆ. ಹೀಗಾಗಿಯೇ ಯಡ್ಡಿಗೆ ಫೋನ್ ಮಾಡಿ ಮಗನನ್ನು ಕಣಕ್ಕಿಳಿಸಲು ತಮ್ಮ ಅಭ್ಯಂತರವಿಲ್ಲ ಎಂದು ಅವರು ಸ್ಪಷ್ಟೀಕರಣ ನೀಡಿದ್ದು.

ಅನಂತುವನ್ನು ಹತ್ತಿರ ಸೇರಿಸಿಕೊಳ್ಳುವುದಕ್ಕಿಂತ ದೂರವಿಡುವುದೇ ವಾಸಿ ಎಂದುಕೊಂಡಿರುವ ಆಡ್ವಾಣಿ, ದೇಶಾದ್ಯಂತ ಚುನಾವಣೆಯ ತಂತ್ರಗಾರಿಕೆ ರೂಪಿಸುವ ಮಹತ್ವದ ಜವಾಬ್ದಾರಿಯನ್ನು ಅನಂತು ಬದಲಿಗೆ ಅರುಣ್ ಜೇಟ್ಲಿ ಹೆಗಲಿಗೆ ಹೋರಿಸಿದ್ದಾರೆ. ಆಡ್ವಾಣಿ ಮನೆ ಅಂಗಳದಲ್ಲಿಯೂ ಈಗ ಅನಂತು ತೃತೀಯ ದರ್ಜೆಯ ನಾಯಕ. ಅನಂತುನ ಕಾರ್ಯದರ್ಶಿಯಾಗಿ 'ಮೇಲೆ' ಬಂದ ವಿಕ ಭಟ್ಟರಿಗೆ ಪಾಪ ಇದನ್ನು ನೋಡಿಕೊಂಡು ಸುಮ್ಮನಿರಲಾಗುತ್ತದೆಯೇ?

ಅದಕ್ಕೆ ಈ ಚೆಡ್ಡಿ ಪತ್ರಿಕೆ ಈಗ ಯಡ್ಡಿ ವಿರುದ್ಧ ಕೆಂಡಕಾರುತ್ತಿದೆ. ■



ಬಾಂಬ್ ಇಡಲು ಬಣಕಾರ ರೆಡಿ

"ಹಿಂದೆ ನನಗೇ ಬತ್ತಿ ಇಟ್ಟಿದ್ದ ಮಗಾ.. ಈಗ ಸರಿಯಾಗಿ ಸಿಕ್ಯಾನೆ, ಬರೋಬ್ಬರಿ ಬಾಂಬ್ ಇಡತೀನಿ..." ಎಂದು ಹಿರೇಕೆರೂರಿನ ಮಾಜಿ ಶಾಸಕ ಉಜ್ಜನೇಶ ಬಣಕಾರ ಮತ್ತು ಅವನಪ್ಪ ಬಿ.ಜಿ. ಬಣಕಾರ ಪಾರ್ಲಿಮೆಂಟ್ ಚುನಾವಣೆಗಾಗಿ ಕಾಯುತ್ತಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಿರೇಕೆರೂರಿನಿಂದ ಟಿಕೆಟ್ ಕೇಳಿದ್ದ ಜೂನಿಯರ್ ಬಣಕಾರನಿಗೆ ಉದಾಸಿ ಸರಿಯಾಗಿ 'ಬಿ' ಫಾರ್ಮ್ ಸಿಗದಂತೆ ಮಾಡಿದ್ದ. ಉಜ್ಜನೇಶನಿಗೆ ಟಿಕೆಟ್ ತಪ್ಪಿಸಿದ್ದಕ್ಕೆ ಹಿರೇಕೆರೂರಿನ ಬಿಜೆಪಿ ಕಾರ್ಯಕರ್ತರು ಯಡಿಯೂರಪ್ಪ ಮತ್ತು ...ದಾಸಿಯ ಭಾವಚಿತ್ರಕ್ಕೆ ಚಪ್ಪಲಿ ಹಾರ ಹಾಕಿ ಮೆರವಣಿಗೆ ಕೂಡಾ ಮಾಡಿದ್ದರು.

...ಈಗ ಉದಾಸಿ ತನ್ನ ಮಗ ಶಿವಕುಮಾರ್‌ಗೆ ಟಿಟು ಕೊಡಿ ಎನ್ನುತ್ತಾ ಬರುತ್ತಾನೆ. ಆಗ ಬರೋಬ್ಬರಿ ...ಕೇಯ ಬಾಂಬ್ ಇಟ್ಟು ಸೇಡು ತೀರಿಸಿಕೊಂಡರಾಯ್ತು ಎಂದು ಬಣಕಾರ ಅಪ್ಪ-ಮಗ ಸ್ಕೆಚ್ ಹಾಕುತ್ತಿದ್ದಾರೆ.


ಠಕ್ಕರ್ ಕೊಡಲು ಸಲಿಂ ರೆಡಿ..!



ಹಾವೇರಿ ಕಾಂಗ್ರೆಸ್ಸನ್ನು ಹಾಳುಗೆಡವಿದ ಕೋಳಿವಾಡ, ಸಜ್ಜಿಗಳೆಲ್ಲಾ ಸುಧಾರಿಸಿದ್ದಾಗಿದೆ. ಜೀವ ಕಳೆದುಕೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರೆಲ್ಲಾ ಸಲಿಂ ಅಹ್ಮದ್ ಮೂಲಕ ಮತ್ತೊಮ್ಮೆ ಉಸಿರಾಡಲು ಸಿದ್ಧರಾಗಿದ್ದಾರೆ. ಸತತವಾಗಿ ಸೋಲಿನ ಛಾಯೆಯಿಂದ ಕಂಗೆಟ್ಟಿದ್ದ ಕಾಂಗ್ರೆಸ್ಸಿನಲ್ಲೀಗ ಗೆಲುವಿನ ವಿಶ್ವಾಸದ ಭಾವನೆಗಳು ತೇಲುತ್ತಿದ್ದು ಠಕ್ಕರಾಕಿ ಬಿಜೆಪಿಗೆ ತಕ್ಕ ಪಾಠ ಕಲಿಸಲು ಎಲ್ಲಾ ತಾಲೀಮು ನಡೆದಿದೆ.


ಗೊಬ್ಬರ ಕೇಳಿದ ರೈತರ ಎದೆಗೆ ಗುಂಡಿಟ್ಟಿದ್ದು, ವೇತನ ಕೊಡದೆ ಸಂಗೂರ ಶುಗರ್ಸ್ ಸಿಬ್ಬಂದಿಯನ್ನು ಬೀದಿಗೆ ತಳ್ಳಿದ್ದಲ್ಲದೆ ಇಬ್ಬರು ಅಮಾಯಕ ಕಾರ್ಮಿಕರ ಪ್ರಾಣ ತೆಗೆದದ್ದು, ಜಿಲ್ಲೆಗೆ ಬಂದ ಕೋಟಿ ಕೋಟಿ ಹಣ ಲೂಟಿ ಮಾಡಿದ್ದು ಮಂತ್ರಿ ಉದಾಸಿ ಮತ್ತಾತನ ಚೇಲಾಗಳ ಕೊಡುಗೆ. ಇದನ್ನೆಲ್ಲ ಉದಾಸಿ ವಿರುದ್ಧ ಪ್ರಯೋಗಿಸಲು ಕಾಂಗ್ರೆಸ್ಸಿಗೆ ಪ್ರಮುಖ ಅಸ್ತ್ರವಾಗಲಿವೆ.

ಯುವ ನಾಯಕ ಸಲಿಂ ಅಹ್ಮದ್ ಉದಾಸಿ ಪುತ್ರನಿಗೆ ಸರಿಯಾದ ಠಕ್ಕರ್ ನೀಡುವುದು ನಿಶ್ಚಿತ.



ಕುಮಾರ್

ಹಾವೇರಿ: ಮರಿಉದಾಸಿಗೆ ಟಿಕೆಟ್ ರೇಸಿನಲ್ಲಿದ್ದವರಿಗೆ ಚಾಕಲೇಟ್!




ಸಿ.ಎಂ.ಉದಾಸಿ

...ನಾ ಹುಟ್ಟಾ ಬಿಜೆಪಿ, ಕಟ್ಟಾ ಕಾರ್ಯಕರ್ತ... ...ತಕ್ಕಿ ತಿಂದು ಸಂಘಟನೆ ಮಾಡೇನಿ..." ಎಂದು ...ದ್ದ ಚೆಡ್ಡಿಗಳೆಲ್ಲಾ ಈಗ ಅಕ್ಷರಶಃ ಎರಡೂ ಕೈಯಿಂದ ...ು ಬಡಿದುಕೊಳ್ಳುತ್ತಿದ್ದಾರೆ. "ಪಕ್ಷ ...ರದಲ್ಲಿ ಇಲ್ಲದಿದ್ದಾಗ ನಾವೆಲ್ಲ ಮನೆ-ಮಠ ...ತು ದುಡಿದದ್ದಾಯಿತು. ಈಗ ರಾಜ್ಯದಲ್ಲಿ ...ಅಧಿಕಾರದಲ್ಲಿದೆ. ಆದರೆ ನಿಷ್ಠಾವಂತರ್‍ಯಾರೂ ... ಕಣ್ಣಿಗೆ ಬೀಳುತ್ತಿಲ್ಲವೆ?" ಎಂದು ...ೇರಿಯ ಚೆಡ್ಡಿಗಳು ಯಡ್ಡಿಯ ಕಪಿಸೈನ್ಯ ...ಡಿ ಅಡ್ವಾಣಿಯ ರಾಕ್ಷಸರನ್ನು ಮತ್ತು ...ಲ್ಗೇಟ್ ಸದಾನಂದ ಗೌಡನ ಪಿಶಾಚಿಗಳನ್ನು ...ಸಿ ಉಗಿಯುತ್ತಿದ್ದಾರೆ.


...ಜನತಾದಳದಲ್ಲಿದ್ದು ಮಂತ್ರಿಗಿರಿಯ ರುಚಿ ...ಭವಿಸಿದ ಅವಕಾಶವಾದಿ ರಾಜಕಾರಣಿ ... ಮಂತ್ರಿ ಸಿ.ಎಂ. ಉದಾಸಿ ಬಿಜೆಪಿಗೆ ...ಸಿ ಈಗ ನಿಷ್ಠಾವಂತರನ್ನು ಮೂಲೆಗುಂಪು ...ತಿದ್ದಾನೆ. ತನ್ನ ಪುತ್ರ ಶಿವಕುಮಾರನನ್ನು ...ಲ ಎರಡು ತಿಂಗಳ ಹಿಂದೆ ಪಾಲಿಟಿಕ್ಸ್ ...ಗ್ಗಿಳಿಸಿ ಈಗ ಪಾರ್ಲಿಮೆಂಟ್ ಟಿಕೆಟ್ ...ಸುವಲ್ಲಿಯೂ ಯಶಸ್ವಿಯಾಗಿದ್ದಾನೆ. ಆದರೆ ...ದರಲ್ಲಿ ನನ್ನ ಪಾತ್ರವೇನೂ ಇಲ್ಲ, ಇದೆಲ್ಲಾ ...ರ್ಯಕರ್ತರ ಒತ್ತಾಸೆ, ಪ್ರೀತಿಯಿಂದ ಆಗಿದೆ" ...ು ಬೊಗಳೆ ಪುರಾಣ ಶುರು ಹಚ್ಚಿಕೊಂಡಿದ್ದಾನೆ.

...ಟಿಕೆಟ್‌ನ ಪಡೆಯುವ ರೇಸ್‌ನಲ್ಲಿದ್ದ ಸವಣೂರಿನ ...ಜಿ ಶಾಸಕ ರಾಜಶೇಖರ ಸಿಂಧೂರ ಮತ್ತು ಶಿಗ್ಗಾವಿಯ ...ಲ್ಲಾಧ್ಯಕ್ಷ ಸೋಮಣ್ಣ ಬೇವಿನಮರದಗೆ ನಿಗಮ ...ಡಳಿಯ ಅಧ್ಯಕ್ಷಗಾದಿಯ ಚಾಕಲೇಟ್ ಕೊಡಿಸಿ ...ನಿಂದ ಸೈಡ್ ಸರಿಸಿದ್ದಾನೆ. ಪೈಪೋಟಿಯಲ್ಲಿದ್ದ ...ಣೇಬೆನ್ನೂರಿನ ಮಾಜಿ ಜಿಲ್ಲಾಧ್ಯಕ್ಷ ಕೆ. ಶಿವಲಿಂಗಪ್ಪ ...ೂ ಸಿಗದೆ ಬಾಯಿ ಒಣಗಿಸಿಕೊಂಡರೆ ನಿಷ್ಠಾವಂತ ...ಯ ಕಾರ್ಯಕರ್ತರು ಈ ಅವಕಾಶವಾದಿ ರಾಜಕಾರಣ ...ದ ಬೇಸತ್ತು ಕಾಂಗ್ರೆಸ್, ಜೆಡಿಎಸ್‌ನತ್ತ ಗುಳೇಹೋಗುವ ...ಾಗಳೂ ಗೋಚರಿಸುತ್ತಿವೆ.

...ಹಿಂದೊಮ್ಮೆ ಜನತಾದಳ ವಿಭಜನೆಯ ಹಂತ ...ಪಿದ್ದಾಗ ರಾಜಕೀಯವಾಗಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ... ಉದಾಸಿ ತನ್ನ ಶಿಷ್ಯರಾದ ಬ್ಯಾಡಗಿಯ ನೆಹರು ಓಲೇಕಾರ, ಹಾವೇರಿಯ ಶಿವರಾಜ ಸಜ್ಜನ, ರಾಣೆಬೆನ್ನೂರಿನ ಜಿ.ಶಿವಣ್ಣನನ್ನು ಕರೆದುಕೊಂಡು ಬಿಜೆಪಿ ಸೇರಿದ್ದ. ಆಗ ಕೇಂದ್ರದಲ್ಲಿದ್ದ ವಾಜಪೇಯಿ ಅಲೆಯನ್ನು ಆಧರಿಸಿ ವಿಧಾನಸಭಾ ಚುನಾವಣೆಯಲ್ಲಿ ಗೆದ್ದೂ ಬಿಟ್ಟ. ಆಗ ಹೊರಗಿನ ದೆವ್ವ ಬಂದು ಮನೆ ದೆವ್ವವನ್ನು ಓಡಿಸಿದಂತಾಗಿತ್ತು ನಿಷ್ಠಾವಂತ ಬಿಜೆಪಿ ಕಾರ್ಯಕರ್ತರಿಗೆ. ಅಂದು ಶುರುವಾದ ನಿಷ್ಠಾವಂತ ಬಿಜೆಪಿ ಕಾರ್ಯಕರ್ತರ ಮಟಾಷ್ ಕಾರ್ಯಕ್ರಮ ಇಂದಿಗೂ ಮುಂದುವರೆದಿದೆ. ಉದಾಸಿಯೊಂದಿಗೆ ಬಿಜೆಪಿಗೆ ಕಾಲಿಟ್ಟವರೆಲ್ಲಾ ನುರಿತ ಹೆಗ್ಗಣಗಳೇ ಆಗಿದ್ದು ಅವರೆಲ್ಲಾ ಎರಡು ಅವಧಿ ತಿಂದು ತೇಗಿ ದುಂಡಗಾಗಿದ್ದಾರೆ. ಆದರೆ ಕಷ್ಟಕಾಲದಲ್ಲಿ ಪಕ್ಷಕ್ಕಾಗಿ ಬೆವರು ಸುರಿಸಿದವರೆಲ್ಲಾ ಇಂದಿಗೂ "ಜಿ ಹುಜೂರ್" ಎನ್ನುವ ಸ್ಥಿತಿಯಲ್ಲೇ ಇದ್ದಾರೆ.



ಸಜ್ಜನ್



ಬೊಮ್ಮಾಯಿ


ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕ್ಷೇತ್ರ ಪುನರ್ವಿಂಗಡಣೆಯ ಕಾರಣದಿಂದ ಕ್ಷೇತ್ರ ಕಳೆದುಕೊಂಡಿದ್ದ ಖಾಸಾ ಶಿಷ್ಯ ಶಿವರಾಜ ಸಜ್ಜನ ಮುಂದೆ ಲೋಕಸಭೆ ಟಿಕೆಟ್‌ಗಾಗಿ ಬೆನ್ನು ಬೀಳುತ್ತಾನೆ, ಆಗ ತನ್ನ ಮಗನ ರಾಜಕೀಯ ಭವಿಷ್ಯಕ್ಕೆ ಅಡ್ಡಿಯಾಗುತ್ತಾನೆ ಎಂದು ವರ್ಷದ ಹಿಂದೆಯೇ ಸ್ಕೆಚ್ ಹಾಕಿದ್ದ ಉದಾಸಿ ಮಧ್ಯದಲ್ಲಿ ಎದುರಾದ ಎಂಎಲ್‌ಸಿ ಚುನಾವಣೆಯಲ್ಲಿ ಸಜ್ಜನನಿಗೆ ಟಿಕೆಟ್ ಕೊಡಿಸಿ ಆರಿಸಿ ತಂದು ತನ್ನ ಮಗನ ದಾರಿಯನ್ನು ಸುಗಮವಾಗಿಸಿದ್ದ. ಈಗ ಮಂಜುನಾಥ್ ಕನ್ನೂರ ಕೂಡ ಬಿಜೆಪಿ ತೊರೆದು ವಾಪಸ್ ಕಾಂಗ್ರೆಸ್‌ಗೆ ಬಂದಿರುವುದರಿಂದ ಉದಾಸಿ ಸುಲಭವಾಗಿ ತನ್ನ ಮಗನಿಗೆ ಟಿಕೆಟ್ ಗಳಿಸುವಂತಾಗಿದೆ.

ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಸೋಲಿನ ಭಯದಲ್ಲಿದ್ದ ಉದಾಸಿ ಅನುಕಂಪದ ಓಟಿನ ಆಸೆಗಾಗಿ "ಇದು ನನ್ನ ಕೊನೆಯ ಚುನಾವಣೆ" ಎಂದು ಹೇಳಿಕೊಂಡಿದ್ದ ಆದರೆ ಜನ ಈ ಮುದಿಯನನ್ನು ನಂಬುವ ಸ್ಥಿತಿಯಲ್ಲಿರಲಿಲ್ಲ. ಇನ್ನೇನು ಸೋಲು ನಿಶ್ಚಿತ ಎಂದಾಗ ಉದಾಸಿಯ ಪುತ್ರ ಶಿವಕುಮಾರ್ ತನ್ನ ರಿಯಲ್ ಎಸ್ಟೇಟ್ ದಂಧೆ ಬಿಟ್ಟು ಹಾನಗಲ್‌ನಲ್ಲಿ ಠಿಕಾಣಿ ಹೂಡಿ ತಂದೆಯ ಗೆಲುವಿಗಾಗಿ ಕ್ಷೇತ್ರದಲ್ಲಿ ಹಣದ ಹೊಳೆಯನ್ನೇ ಹರಿಸಿದ್ದ ಮಗನ ಕೊಳ್ಳೆ ಹೊಡೆದ ದುಡ್ಡಿನಿಂದಲೇ ಉದಾಸಿ ಗೆದ್ದಿದ್ದು ಆಮೇಲೆ ಮಂತ್ರಿಯಾದದ್ದು. ತನ್ನ ಮಗ ಮಾಡಿದ ಈ ಘನಂದಾರಿ ಕೆಲಸಕ್ಕೆ ಈಗ ಅವನಿಗೆ ಬಿಜೆಪಿ ಟಿಕೆಟ್ ಸಿಕ್ಕಿದೆ.

ಎರಡು ಅವಧಿ ಜಿಲ್ಲಾ ಉಸ್ತುವಾರಿ ಮಂತ್ರಿ, ಮೂರು ಬಾರಿ ಮಂತ್ರಿ ಮಂಡಳದೊಳಗಿದ್ದು ಸದ್ಯ ಮುಖ್ಯಮಂತ್ರಿ ಯಡಿಯೂರಪ್ಪನ ಖಾಸಾ ಚೇಲನಂತಾಗಿರುವ ಉದಾಸಿಗೆ ಸರಿಯಾಗಿ ಠಕ್ಕರ್ ಕೊಟ್ಟವನು ಜಿಲ್ಲಾ ಬಿಜೆಪಿ ಅಧ್ಯಕ್ಷ ಸೋಮಣ್ಣ ಬೇವಿನಮರದ. 2004ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್‌ನೊಂದಿಗೆ ಶಿಗ್ಗಾವಿ ಕ್ಷೇತ್ರಕ್ಕೆ ಸ್ಪರ್ಧಿಸಿದ್ದ ಬೇವಿನಮರದಗೆ ಗೆಲುವೇನೂ ದೂರವಿರಲಿಲ್ಲ, ಆದರೆ ಬಿಜೆಪಿ ಟಿಕೆಟ್‌ಗಾಗಿ ಪೈಪೋಟಿಯಲ್ಲಿದ್ದ ಸವಣೂರಿನ ತಂಬಾಕು ದೊರೆ ರಾಜಶೇಖರ ಸಿಂಧೂರನಿಗೆ ಟಿಕೆಟ್ ಸಿಗದೆ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬೇವಿನಮರದನ ಗೆಲುವಿಗೆ ಕ್ಯಾನ್ಸರ್ ತಂದಿಟ್ಟು ತಾನು ಸುಲಭವಾಗಿ ಆಯ್ಕೆಯಾದ. ಬಣಜಿಗನಾದ ಸಿಂಧೂರನ ಗೆಲುವಿಗೆ ಸ್ವಜಾತಿ ಪ್ರೇಮದ ಉದಾಸಿ ಒಳಗೊಳಗೆ ಪ್ರಚಾರ ಮಾಡಿದ್ದನೆಂಬುದು ಈಗ ಗುಟ್ಟಾಗಿ ಉಳಿದಿಲ್ಲ.



ಬೇವಿನ ಮರದ



ಆವಾಗಿನಿಂದ ಅಧಿಕಾರಕ್ಕಾಗಿ ಹಾತೊರೆಯುತ್ತಿದ್ದ ಬೇವಿನಮರದ ಕಳೆದ ನಾಲ್ಕು ತಿಂಗಳ ಹಿಂದೆ ಎಂಎಲ್‌ಸಿ ಟಿಕೆಟ್‌ಗಾಗಿ ನಾಯಕರ ಮುಂದೆ ದುಂಬಾಲು ಬಿದ್ದಾಗ ಕೂಡ ಉದಾಸಿ-ಬೊಮ್ಮಾಯಿಗಳಿಬ್ಬರು ಇವನ ಬೆಂಬಲಕ್ಕೆ ಬಾರದೆ ಕೈಕೊಟ್ಟಿದ್ದರು. ಅಲ್ಲದೆ ಉದಾಸಿ ಸಂಗೂರು ಶುಗರ್ಸ್‌ನ ಲೂಟಿಯಲ್ಲಿ ಪಾರ್ಟನರ್‌ನಂತೆ ಜೊತೆಗಿದ್ದ ತನ್ನ ಚೇಲಾ ಶಿವರಾಜ ಸಜ್ಜನನಿಗೆ ಟಿಕೆಟ್ ತಂದು ತನ್ನ ಓಟ್‌ಬ್ಯಾಂಕ್ ಗಟ್ಟಿಗೊಳಿಸಿಕೊಂಡ. ನೊಂದ ಬೇವಿನಮರದಗೆ ಜಿಲ್ಲಾ ಅಧ್ಯಕ್ಷನ ಪಟ್ಟ ಕಟ್ಟಿ ಕೆಲಸಕ್ಕೆ ಬಾರದಂತೆ ಮಾಡಿದ್ದ. ಈಗ ಆಗಿದ್ದು ಅದೇ. ಅನಂತ ಕುಮಾರ್, ಪ್ರಹ್ಲಾದ ಜೋಷಿಯ ಹಿಂಬಾಲಕನಾದ ಬೇವಿನಮರದ ಪಾರ್ಲಿಮೆಂಟ್ ಟಿಕೆಟ್‌ಗಾಗಿ ಪೇಜಾವರನ ಪಾದಕ್ಕೂ ಬಿದ್ದದ್ದಾಯಿತು. ಆದರೆ ಆಶೀರ್ವಾದ ಮಾತ್ರ ಸಿಗಲಿಲ್ಲ. ಜೋಷಿ ಜೊತೆ ಸೇರಿ ಮೂರು ಬಾರಿ ದೆಹಲಿ ಯಾತ್ರೆ ಮಾಡಿ ಅಡ್ವಾಣಿಯ ಕಿವಿ ಊದಿದರೂ ಪ್ರಯೋಜನವಾಗಲಿಲ್ಲ. ಕೋಲ್ಗೇಟ್ ಸದಾನಂದನಂತೂ ಉದಾಸಿಯನ್ನು ಎದುರು ಹಾಕಿಕೊಳ್ಳುವ ತಾಕತ್ತಿಲ್ಲದೆ ಕೈಚೆಲ್ಲಿದ್ದಾನೆ. ಇನ್ನು ಬೇವಿನಮರದ ಟಿಕೆಟು ಸಿಗದೆ ಜೆಡಿಎಸ್‌ನತ್ತ ಹೋಗುತ್ತಾನೆ ಎಂದು ಗೊತ್ತಾಗಿದ್ದೇ ತಡ ಬೆಳಗಾವಿಯ ಮಲಪ್ರಭಾ-ಘಟಪ್ರಭಾ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಅಧಿಕಾರೇತರ ಅಧ್ಯಕ್ಷನನ್ನಾಗಿ ಮಾಡಿ ಕೈಯಲ್ಲಿ ಚಾಕಲೇಟ್ ಕೊಟ್ಟಿದ್ದಾರೆ. ಬೇವಿನ ಮರದನ ಬೆಳವಣಿಗೆ ಸಹಿಸದ ಜಲಸಂಪನ್ಮೂಲ ಮಂತ್ರಿ, ಬಸವರಾಜ ಬೊಮ್ಮಾಯಿ ಮತ್ತೆ ಇವನನ್ನು ತನ್ನ ಅಂಡರ್‌ನಲ್ಲಿಟ್ಟುಕೊಂಡಿದ್ದಾನೆ.

ಟಿಕೆಟ್ ಪೈಪೋಟಿಯಲ್ಲಿದ್ದ ಇನ್ನೊಬ್ಬ ಪ್ರಬಲ ಎಂದರೆ ಮಾಜಿ ಶಾಸಕ ರಾಜಶೇಖರ ಸಿಂಧೂರ. ಕಳೆದ ಬಾರಿ ವಿಧಾನಸಭೆಗೆ ಆಯ್ಕೆಯಾಗಿ ಕಾಂಗ್ರೆಸ್-ಜೆಡಿಎಸ್ ಸರ್ಕಾರದಲ್ಲಿ ಕಾಂಗ್ರೆಸ್ ಪರವಿದ್ದು ನಂತರ ಬಂದ 20-20 ಸರ್ಕಾರದಲ್ಲಿ ಬಿಜೆಪಿಗೆ ಕಾಲಿಟ್ಟಿದ್ದ ಸಿಂಧೂರ ಯಡ್ಡಿಯ ಖಾಸಾ ಭಂಟ. ಕಳೆದ ಬಾರಿ ಬಸವರಾಜ ಬೊಮ್ಮಾಯಿಗಾಗಿ ಕ್ಷೇತ್ರ ಬಿಟ್ಟುಕೊಟ್ಟು "ತ್ಯಾಗಾ ಮಾಡೇನಿ.. ನನಗೆ ಪಾರ್ಲಿಮೆಂಟ್ ಟಿಕೆಟ್ ಕೊಡಿ" ಎಂದು ಅರ್ಜಿ ಹಾಕಿದ್ದ ಆದರೆ ಆತನಿಗೆ ಸಿಕ್ಕಿರುವುದೂ ಬಯಲುಸೀಮೆಯ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷಗಿರಿ ಎಂಬುದು ಉದ್ದವಾದ ಚಾಕಲೇಟ್!!

ಒಂದೆಡೆ ಸ್ವ-ಜಾತಿ ಉದಾಸಿ ವಿರುದ್ಧ ಸೆಡ್ಡು ಹೊಡೆಯಲಾಗದೆ, ಇನ್ನೊಂದೆಡೆ ಯಡ್ಡಿಯ ಮಾತು ಮೀರಲಾಗದೆ ಬ.ಪ್ರ. ಮಂಡಳಿಯ ಅಧ್ಯಕ್ಷನಾಗಲು ಒಪ್ಪಿ ರೇಸಿನಿಂದ ಹಿಂದೆ ಸರಿದಿರುವ ಸಿಂಧೂರ ಈಗ ಶಿವಕುಮಾರ ಉದಾಸಿ ಪರ ಪ್ರಚಾರಕ್ಕಾಗಿ ತಾಲೀಮು ನಡೆಸಿದ್ದಾನೆ. ಕನ್ನೂರನ ಹಿಂದೆಯೇ ಸುತ್ತಾಡಿ ಜಿಲ್ಲಾಧ್ಯಕ್ಷನಾಗಿದ್ದ ಕೆ. ಶಿವಲಿಂಗಪ್ಪ ಎಂಪಿ ಟಿಕೆಟ್‌ಗೆ ಅರ್ಜಿ ಹಾಕಿ ಉದಾಸಿ ಅಬ್ಬರಕ್ಕೆ ತಬ್ಬಿಬ್ಬಾದನೇ ಹೊರತು ಫೀಲ್ಡಿಗಿಳಿಯಲಿಲ್ಲ.

ಒಟ್ಟಾರೆಯಾಗಿ ತನ್ನ ಪುತ್ರನ ರಾಜಕೀಯ ಎಂಟ್ರಿಗೆ ಅಡ್ಡಿಯಾಗಿದ್ದವರನ್ನೆಲ್ಲಾ ಕುತಂತ್ರದಿಂದ ಸೈಡಿಗೆ ಸರಿಸುವಲ್ಲಿ ಮುದಿ ಉದಾಸಿ ಯಶಸ್ವಿಯಾಗಿದ್ದರೂ ಈಗ ಆ ಕಾರಣಕ್ಕಾಗಿಯೇ ನಿಷ್ಠಾವಂತ ಚೆಡ್ಡಿಗಳ ಘೋರ ಕೋಪಕ್ಕೆ ತುತ್ತಾಗಿದ್ದಾನೆ. ತಾನು ಗೆದ್ದೇ ಗೆಲ್ಲುತ್ತೇನೆಂಬ ಭ್ರಮೆಯಲ್ಲಿರುವ ಶಿವಕುಮಾರ ಉದಾಸಿಗೆ ಮೂಲ ಬಿಜೆಪಿಗರೇ ತಿರುಗಿಬಿದ್ದರೆ ಆಶ್ಚರ್ಯಪಡುವಂತಿಲ್ಲ.

■ ವಿನಯ್ ಹುರುಳಿಕುಪ್ಪಿ

ದೃಢ ದನಿ

ಲಂಕೇಶ್ ವಾರಪತ್ರಿಕೆ ನಾಲ್ಕು ವರ್ಷ ಪೂರೈಸಿ ಐದನೇ ವರ್ಷಕ್ಕೆ ಕಾಲಿಡುತ್ತಿರುವುದು ಸಂತಸದ ಸಂಗತಿ. ಲಂಕೇಶ್ ವಾರಪತ್ರಿಕೆ ಎಂಬುದಕ್ಕಿಂತ ಹೆಚ್ಚಾಗಿ ಅದು ಗೌರಿ ಲಂಕೇಶ್ ಪತ್ರಿಕೆ ಎಂದೇ ಸುಲಭವಾಗಿ ಗುರುತಿಸಲ್ಪಡುತ್ತಿದೆ. ಇದು ಕೂಡ ಸಂತಸದ ವಿಷಯವೇ. ಕನ್ನಡದ ಟ್ಯಾಬ್‌ಲಾಯ್ಡ್‌ಗಳಲ್ಲಿ ಮಹಿಳಾ ಸಂಪಾದಕರಿರುವ ವಿಶಿಷ್ಟ ಪತ್ರಿಕೆಯಾಗಿ, ಯಶಸ್ವಿ ಪತ್ರಿಕೆಯಾಗಿ ಅದು ಬೆಳೆಯುತ್ತಿರುವ ರೀತಿ ಆರಂಭದಲ್ಲಿ ಉಂಟಾಗಿದ್ದ ಹಲವು ಆತಂಕಗಳನ್ನು ನಿವಾರಿಸಿದೆ. ಲಂಕೇಶ್ ಬ್ರಾಂಡಿನ ಎರಡೆರಡು ವಾರಪತ್ರಿಕೆಗಳು ಮಾರುಕಟ್ಟೆಯಲ್ಲಿ ಗೊಂದಲ ಸೃಷ್ಟಿಸುವುದಿಲ್ಲವೇ ಎಂಬ ಆತಂಕವೂ ಈಗ ದೂರವಾಗಿದೆ. ಒಂದೇ ಓದುಗ ಬಳಗವನ್ನು ಪಾಲುಮಾಡಿಕೊಳ್ಳಬೇಕಾದ ಇಕ್ಕಟ್ಟಿನ ಸನ್ನಿವೇಶವನ್ನೂ ಗೌರಿ ಲಂಕೇಶ್ ಪತ್ರಿಕೆ ಯಶಸ್ವಿಯಾಗಿ ನಿಭಾಯಿಸಿದೆ. ಇದೆಲ್ಲ ವ್ಯವಹಾರದ ಮಾತಾಯಿತು.


ಇದನ್ನು ಮೀರಿ ಹೇಳಬೇಕಾದ ಮಾತೊಂದಿದೆ. ಪಿ ಲಂಕೇಶರ ವೈಚಾರಿಕ ವಾರಸುದಾರಿಕೆಯ ಜವಾಬ್ದಾರಿಯನ್ನು ಗೌರಿ ಲಂಕೇಶ್ ಪತ್ರಿಕೆ ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿದೆ. ಇದು ಎಲ್ಲದಕ್ಕಿಂತ ಹೆಚ್ಚು ಸಂತಸ ಕೊಡುವ ವಿಷಯ. ಕರ್ನಾಟಕದ ವಾತಾವರಣ ತೀವ್ರಗತಿಯಲ್ಲಿ ಬದಲಾಗುತ್ತಿದೆ. ಗಣಿ ಧಣಿಗಳು, ಧರ್ಮಪೀಠಗಳ ಸೂತ್ರಧಾರಿಗಳು ಈ ಹಿಂದೆ ಇರದಷ್ಟು ಪ್ರಮಾಣದಲ್ಲಿ ಸಾಮಾಜಿಕ ವಾತಾವರಣವನ್ನು ನಿಯಂತ್ರಿಸತೊಡಗಿದ್ದಾರೆ. ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ವ್ಯಕ್ತಿ ಸ್ವಾತಂತ್ರ್ಯ ಹಾಗೂ ವಿಚಾರ ಸ್ವಾತಂತ್ರ್ಯಗಳು ತೀವ್ರ ದಮನಕ್ಕೊಳಗಾಗುತ್ತಿವೆ.

ಮತಾಂತರದ ವಿಷಯ, ಅನ್ಯ ಧರ್ಮೀಯ ಯುವ ಪ್ರೇಮಿಗಳ ವಿಷಯ, ಆಹಾರ ಪದಾರ್ಥಗಳ ಬಳಕೆಯ ವಿಷಯವೂ ಸೇರಿದಂತೆ ಯಾವುದು ಇವತ್ತಿನ ಮುಖ್ಯ ವಿಷಯಗಳಲ್ಲವೋ ಅವೆಲ್ಲ ಅತ್ಯಂತ ಪ್ರಮುಖ ವಿಷಯಗಳೆಂಬಂತೆ ಸಮಾಜದ ನೆಮ್ಮದಿ ಕದಡುವ ಪ್ರಶ್ನೆಗಳಾಗಿ ಬಿಂಬಿತವಾಗುತ್ತಿವೆ. ಕೋಮುವಾದವನ್ನು ಬೆಳೆಸಿ ಮತ ಬ್ಯಾಂಕನ್ನು ಕ್ರೋಢೀಕರಿಸಿಕೊಳ್ಳಲು ಬಲಪಂಥೀಯ ಶಕ್ತಿಗಳು ತಾವೇ ಭಯೋತ್ಪಾದನೆಯನ್ನು ಹುಟ್ಟುಹಾಕುತ್ತಿವೆ. ವಿಧಾನಸಭೆಯ ಚುನಾವಣೆಗಳು ನಡೆಯುವುದಕ್ಕೆ ಸ್ವಲ್ಪ ದಿನಗಳ ಮೊದಲು ಹುಬ್ಬಳ್ಳಿ ಕೋರ್ಟ್ ಆವರಣದಲ್ಲಿ ಬಾಂಬ್ ಸ್ಫೋಟ ನಡೆಸಿ, ಅಲ್ಪಸಂಖ್ಯಾತ ಧರ್ಮಕ್ಕೆ ಸೇರಿದ ಸಂಘಟನೆಗಳ ಮೇಲೆ ಆ ಕೃತ್ಯದ ಆರೋಪ ಬರುವಂತೆ ಮಾಡಲಾಯಿತು. ಕಡೆಗೆ ಗೊತ್ತಾಗಿದ್ದೇನೆಂದರೆ ಆ ಬಾಂಬ್ ಸ್ಫೋಟ ನಡೆಸಿದವರು ಅಲ್ಪಸಂಖ್ಯಾತ ಧರ್ಮಕ್ಕೆ ಸೇರಿದ್ದ ಕಿಡಿಗೇಡಿಗಳಾಗಿರದೆ, ಶ್ರೀರಾಮಸೇನೆಗೆ ಸೇರಿದ ಕೇಡಿಗಳಾಗಿದ್ದಾರೆಂಬುದು.

ಜಾಗತೀಕರಣ ಉಂಟುಮಾಡಿರುವ ಆರ್ಥಿಕ ಸಾಮಾಜಿಕ ಬಿಕ್ಕಟ್ಟಿನಲ್ಲಿ ಮನುಷ್ಯರೇ ಬೇವರ್ಸಿಗಳಂತೆ ಸಾಯುವ, ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಈ ಬಗ್ಗೆ ಚಕಾರವೆತ್ತದ ಆಳುವ ವ್ಯವಸ್ಥೆ ಮುದಿಯಾದ, ಗೊಡ್ಡಾದ ದನಗಳ ರಕ್ಷಣೆಗಾಗಿ ಕೋಟ್ಯಂತರ ರೂಪಾಯಿ ಅನುದಾನ ನೀಡಿ, ಇದೇ ಅತ್ಯಂತ ಪವಿತ್ರವಾದ ಮಾನವೀಯ ಕೆಲಸ ಎಂದೂ ಸಹ ಜನರ ನಡುವೆ ಪ್ರಚಾರ ನಡೆಸುತ್ತಿದೆ.

ಸಾರ್ವಜನಿಕ ಸಂಕ್ಷೇಮಕ್ಕೆ ಸರ್ಕಾರ ಬಳಸಬಹುದಾಗಿದ್ದ ನೂರಾರು ಕೋಟಿ ರೂಪಾಯಿಗಳನ್ನು ಜಾತಿ ಮಠಗಳಿಗೆ ಒದಗಿಸಿ ಮಹತ್ತರ ಸಾಮಾಜಿಕ ಸೇವೆ ಮಾಡಿದ್ದೇವೆಂದು ಬಜೆಪಿ ಸರ್ಕಾರ ತೋರಿಸಿಕೊಳ್ಳುತ್ತಿದೆ. ಇಂತಹ ವಿಷಮ ವಾತಾವರಣವಿರುವಾಗ ಗೌರಿ ಲಂಕೇಶ್ ಪತ್ರಿಕೆ ಪ್ರಗತಿಪರ ಆಶಯಗಳು, ಜನಪರ ಕಾರ್ಯಕ್ರಮಗಳು ಹಾಗೂ ಮಾನವೀಯ ಮೌಲ್ಯಗಳ ಪರವಾಗಿ ಅತ್ಯಂತ ದೃಢವಾಗಿ ದನಿಯೆತ್ತಿದೆ. ಸ್ಪಷ್ಟವಾಗಿ, ದಿಟ್ಟವಾಗಿ ಲಂಕೇಶರ ಚಿಂತನೆಗಳ ವಾರಸುದಾರಿಕೆಯನ್ನು ನಿರ್ವಹಿಸುತ್ತಿರುವ ಕೆಲವೇ ಕೆಲವು ವಾರಪತ್ರಿಕೆಗಳ ನಡುವೆ ಗೌರಿ ಲಂಕೇಶ್ ಪತ್ರಿಕೆ ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಂಡಿದೆ.

ಕೋಮುವಾದ, ಜಾತಿವಾದ, ಕಳ್ಳಹಣ ಮತ್ತು ತೋಳ್ಬಲಗಳ ಆಧಾರದಲ್ಲಿ ಸಮಾಜವನ್ನು ದಮನಿಸುವವರನ್ನು ವಿರೋಧಿಸಲು ಟೊಂಕ ಕಟ್ಟಿರುವವರ ಹಾಗೆ ಬರೆಯುವ ಮತ್ತು ಓಡಾಡುವ ಗೌರಿ ಲಂಕೇಶ್ ಮತ್ತು ಅವರ ಸ್ನೇಹಿತರ ಕಾಳಜಿಗಳು ಮತ್ತು ಜೀವನ ಪ್ರೀತಿಗಳನ್ನೆಲ್ಲ ಪತ್ರಿಕೆ ನಿಚ್ಚಳವಾಗಿ ಬಿಂಬಿಸುತ್ತಿದೆ. ಪ್ರಜಾತಾಂತ್ರಿಕ ವಾತಾವರಣದ ಜೀವ ರಕ್ಷಣೆಗೆ ಆಕ್ಸಿಜನ್ ಸರಬರಾಜು ಮಾಡುತ್ತಿರುವ ಕೊಳವೆಗಳಲ್ಲಿ ಗೌರಿ ಲಂಕೇಶ್ ಪತ್ರಿಕೆಯೂ ಒಂದು ಮುಖ್ಯ ಆಸರ ಮೂಲವಾಗಿದೆ.



ಇಷ್ಟು ಹೇಳಿದ ಮೇಲೂ ನನ್ನಲ್ಲಿ ಕೆಲವು ಗೊಣಗಾಟಗಳು ಉಳಿದುಕೊಂಡಿವೆ. ಪತ್ರಿಕೆಯಲ್ಲಿ ಪ್ರಕಟವಾಗುವ ಎಷ್ಟೋ ಲೇಖನಗಳನ್ನು ಓದಿದಾಗ ವಿಚಾರ ಮತ್ತು ಮಾಹಿತಿಗಳ ಭಾರ ಜಾಸ್ತಿಯಾಯಿತಲ್ಲವೇ ಎನ್ನಿಸುವಂತಿರುತ್ತವೆ. ಟಿವಿ ಚಾನೆಲ್‌ಗಳ ಭರಾಟೆಯಲ್ಲಿ ವಾರಪತ್ರಿಕೆಗಳ ಉಳಿವು ಎಂಬುದು ಸಾಹಸದ ಮಾತೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಹಾಗೆ ಉಳಿದುಕೊಂಡ ಪತ್ರಿಕೆಗಳ ನಡುವೆ ಗೌರಿ ಲಂಕೇಶ್ ಪತ್ರಿಕೆಗಿರುವ ಪ್ರಸಾರ ಗಣನೀಯವಾದುದು ಎಂಬುದನ್ನೂ ಒಪ್ಪಿಕೊಳ್ಳುತ್ತೇನೆ. ಆದರೆ, ಚಳವಳಿ ಹಾಗೂ ಜನಪರ ಚಿಂತನೆಗಳಲ್ಲಿ ಒಡನಾಡುತ್ತಿರುವ ಯುವ ಜನರನ್ನು ಮಾತ್ರ ಇದು ತನ್ನ ಪ್ರಸಾರದ ವ್ಯಾಪ್ತಿಯೊಳಗೆ ಇಟ್ಟುಕೊಂಡರೆ ಸಾಲದು. ಈ ವಲಯಗಳಾಚೆ ಇರುವ ಸಾವಿರಾರು ತರುಣ ತರುಣಿಯರನ್ನು ಜನ ವಿರೋಧಿ ವಿಚಾರಗಳ ಪರಿಧಿಯೊಳಕ್ಕೆ ಬಹಳ ವೇಗವಾಗಿ ಸೆಳೆದುಕೊಳ್ಳಲಾಗುತ್ತಿದೆ. ಅಂತಹವರನ್ನು ತಲುಪಿ, ಅವರ ಮನಸ್ಸುಗಳನ್ನು ಪ್ರಭಾವಿಸುವ ಶಕ್ತಿ ಮತ್ತು ವ್ಯಾಪ್ತಿ ಗಳಿಸುವುದು ಇವತ್ತಿನ ಬಹಳ ದೊಡ್ಡ ಅಗತ್ಯ.

ಇದನ್ನು ಸಾಧಿಸಲು ಕೇವಲ ಗೌರಿ ಲಂಕೇಶ್ ಮತ್ತವರ ಸಹೋದ್ಯೋಗಿಗಳು ಮಾತ್ರ ಶ್ರಮಿಸಿದರೆ ಸಾಲುವುದಿಲ್ಲ. ಇಂತಹ ಪತ್ರಿಕೆಗಳ ಪ್ರಸಾರ ಮತ್ತು ಹಣಕಾಸು ಸಾಮರ್ಥ್ಯ ವೃದ್ಧಿಯಾಗುವಂತೆ ಮಾಡಬೇಕಾದುದು ಇವತ್ತು ದಿಕ್ಕು ತಪ್ಪದೆ ಉಳಿದುಕೊಂಡಿರುವವರೆಲ್ಲರ ಜವಾಬ್ದಾರಿ ಕೂಡ ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ.

- ಡಾ. ಬಂಜಗೆರೆ ಜಯಪ್ರಕಾಶ

ಆತಂಕ ಈಗಿಲ್ಲ

ಲಂಕೇಶರು 2000ದ ನವೆಂಬರ್‌ನಲ್ಲಿ ನಿಧನರಾದಾಗ ಪತ್ರಿಕೆ ನಿಂತೇ ಹೋಗುತ್ತೆಂಬ ಆತಂಕ ನನಗಿತ್ತು, ಆದರೆ, ಆಪತ್ಕಾಲದಲ್ಲಿ ಮಿಂಚು ನಕ್ಷತ್ರದಂತೆ ಗೌರಿ ಆ ಜವಾಬ್ದಾರಿಯನ್ನು ವಹಿಸಿಕೊಂಡಾಗ ನಿಟ್ಟುಸಿರು ಬಿಡುವಂತಾಯ್ತು. ಆದರೂ ಈ ಪತ್ರಿಕೆ ಹಿಂದಿನಷ್ಟೇ ಪ್ರಬುದ್ಧವಾಗಿ ಹೊರಬರುತ್ತಾ ಎಂದು ಮನದ ಮೂಲೆಯಲ್ಲೊಂದು ಸಣ್ಣ ಆತಂಕ ಇದ್ದೇ ಇತ್ತು. ಈಗ ಅದೆಲ್ಲಾ ನಿವಾರಣೆಯಾಗಿದೆ.

ಗೌರಿ ಲಂಕೇಶ್ ಅವರ ಸಂಪಾದಕೀಯ ಬರಹಗಳು ಆರಂಭದಲ್ಲಿ ಅಷ್ಟೊಂದು ಪ್ರಬುದ್ಧವಾಗಿರಲಿಲ್ಲ. ಬರುಬರುತ್ತಾ ಗಟ್ಟಿಗೊಳ್ಳುತ್ತಾ, ವಿಸ್ತತಗೊಳ್ಳುತ್ತಾ ಪ್ರಬುದ್ಧಗೊಂಡವು. ನಾಲ್ಕು ವರ್ಷಗಳ ಹಿಂದೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಕಾರಣದಿಂದ ಲಂಕೇಶ್ ಪತ್ರಿಕೆ ಇಬ್ಭಾಗವಾಯಿತಾದರೂ ತನ್ನ ಮೌಲ್ಯಗಳನ್ನು, ಆಶಯಗಳನ್ನು ಗೌರಿತಂಡ ಬಿಟ್ಟುಕೊಡಲಿಲ್ಲ. ಗೌರಿ ಲಂಕೇಶ್ ಪತ್ರಿಕೆ ರಂಜನೆ, ಬೋಧನೆ ಮತ್ತು ಪ್ರಚೋದನೆಯ ಪತ್ರಿಕೆಯಾಗಿ ಯಶಸ್ವಿಯಾಗಿ ಹೊರಬರುತ್ತಿದೆ. ಇಡೀ ರಾಜ್ಯ ಕೋಮುವಾದಿಗಳ ಕಪಿಮುಷ್ಟಿಯಲ್ಲಿ ನಲುಗದಂತೆ ತಡೆಯುವಲ್ಲಿ ಪತ್ರಿಕೆಯ ಪಾತ್ರ ಬಹುದೊಡ್ಡದಿದೆ. ಲಂಕೇಶ್ ಸಂಸ್ಥೆಯಿಂದ ಹೊರಬರುತ್ತಿರುವ ಗೈಡ್ ಮಾಸಪತ್ರಿಕೆ ಮತ್ತು ಕೆಲವು ಪುಸ್ತಕಗಳು ನಿಜಕ್ಕೂ ಜನಮೆಚ್ಚುಗೆ ಪಡೆಯುವಲ್ಲಿ ಯಶಸ್ವಿಯಾಗಿವೆ.

- ಕೆ.ಶೋಭಾ,
ಹರಿಹರ



5ನೇ ವರ್ಷಕ್ಕೆ

ಪತ್ರಿಕೆಯಲ್ಲ, ಚಳವಳಿಯಿದು!

ನಮ್ಮೀ 'ಲಂಕೇಶ್' ಎಷ್ಟು ಸೇಲ್ ಆಗ್ತದೋ ಎಂದು ನಾವೊಂದಿಷ್ಟು ದಿನ ಕೊರಗಿದ್ದಿದೆ. ಆದರೆ ಇದು ಒಂದು ಚಳವಳಿಯಂತೆ ಬೆಳೆಯುತ್ತಾ ತನ್ನ ಆರ್ಥಿಕ ಸದೃಢತೆಯನ್ನು ಕಾಪಾಡಿಕೊಂಡು ಬರುತ್ತಿದೆ ಎನ್ನುವುದು ಹೆಮ್ಮೆಯ ವಿಚಾರ.

ಲಂಕೇಶರು ನಿಧನರಾದಾಗ ದೂರದ ಗದಗಿನಿಂದ ನಾವೆಲ್ಲ ಓಡಿಬಂದಿದ್ದೆವು. ಮುಂದೆ ಸಾಕೇತ್‌ರವರ ಹತ್ಯೆಯಾದಾಗಲೂ ಸಹ ನಾವೂ ಓಡಿಬಂದಿದ್ದೆವು.

ಆ ವಿಷಮಸ್ಥಿತಿಯಲ್ಲೇ ಹುಟ್ಟಿಕೊಂಡ ಈ ಪತ್ರಿಕೆ ಕರ್ನಾಟಕದ ಅಲ್ಪಸಂಖ್ಯಾತರ, ದಲಿತರ, ಹಿಂದುಳಿದವರ ಧ್ವನಿಯಾಗಿ ರೂಪುಗೊಂಡು ಬಂದಿದ್ದು ಮೆಚ್ಚತಕ್ಕ ವಿಷಯ.

ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮಾಡುತ್ತಿರುವ ಜನಪರ ಚಟುವಟಿಕೆಗಳಿಗೆಲ್ಲ ಬೆಂಬಲವಾಗಿ ನಿಂತಿರುವ 'ಲಂಕೇಶ್' ಕೇವಲ ಪತ್ರಿಕೆಯಲ್ಲ; ಅದೊಂದು ಚಳವಳಿ...

'ಲಂಕೇಶ್' ತನ್ನ ಹಲವಾರು ತಪ್ಪುಗಳ ನಡುವೆಯೂ, ನಾಲ್ಕೈದು ವರ್ಷಗಳಲ್ಲಿ ಚಳವಳಿಯಾಗಿ ಬೆಳೆದಿದೆ ಎಂದರೆ ಅದಕ್ಕಿಂತ ಸಾಧನೆ ಇನ್ನೊಂದಿಲ್ಲ.


ಮಲ್ಲನಗೌಡರ್, ಗದಗ

ಹೆಮ್ಮೆಯ ಪತ್ರಿಕೆ

ಜಾಗತೀಕರಣ ಸಮಾಜದ ಎಲ್ಲಾ ಮಗ್ಗಲುಗಳನ್ನೂ ಬಾಧಿಸುತ್ತಿರುವ ಈ ದಿನಗಳಲ್ಲಿ ಸ್ವದೇಶಿ ಮತ್ತು ವಿದೇಶಿ ಬಂಡವಾಳಿಗರು ಜನಸಾಮಾನ್ಯರನ್ನು ಕಿತ್ತು ತಿನ್ನುತ್ತಿದ್ದಾರೆ. ರಾಜಕಾರಣಿಗಳು ಜಾತಿ, ಧರ್ಮ, ಜನಾಂಗಗಳಂಥ ಸೂಕ್ಷ್ಮ ವಿಚಾರಗಳನ್ನು ಪ್ರಚೋದಿಸಿ, ಜನ ದ್ವೇಷದಿಂದ ಪರಸ್ಪರ ಕಚ್ಚಾಡುವಂತೆ ಮಾಡಿ ಅಧಿಕಾರಕ್ಕೇರುತ್ತಿದ್ದಾರೆ. ಪ್ರಕೃತಿ ಸಂಪತ್ತು ದಿನೇದಿನೇ ಲೂಟಿಯಾಗುತ್ತಿದೆ. ಶೋಷಣೆ, ದಮನಗಳ ವಿರುದ್ಧ ಜನಸಾಮಾನ್ಯರ ಹೋರಾಟಗಳೂ ಭುಗಿಲೇಳುತ್ತಿವೆ. ಇಂಥ ಪರಿಸ್ಥಿತಿಯಲ್ಲಿ ಆಳುವ ಶೋಷಕರ, ಬಂಡವಾಳಶಾಹಿಗಳ ವಿರುದ್ಧವಾಗಿ, ತಾಯ್ನಾಡಿನ ಪ್ರಕೃತಿ ಸಂಪತ್ತಿನ ರಕ್ಷಣೆಗಾಗಿ, ಕೋಮು ಸಾಮರಸ್ಯಕ್ಕಾಗಿ ಜನಹೋರಾಟಗಳೊಂದಿಗೆ ನಿಲ್ಲಬೇಕಾದದ್ದು ಪತ್ರಿಕೆಗಳ ಕರ್ತವ್ಯ. ಆದರೆ, ಈ ಪತ್ರಿಕಾಧರ್ಮಕ್ಕೆ ವಿರುದ್ಧವಾಗಿ ಬಹುತೇಕ ಪತ್ರಿಕೆಗಳು ಶೋಷಕರೊಂದಿಗೆ ಶಾಮೀಲಾಗಿ ಹೋಗಿರುವುದು ನಮ್ಮ ದುರಂತ. ಇಂತಹ ಸೂಕ್ಷ್ಮ ಸನ್ನಿವೇಶದಲ್ಲಿ ಗೌರಿ ಲಂಕೇಶ್ ನೇತೃತ್ವದ ಪತ್ರಿಕೆ ಆ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ.

ಸರ್ಕಾರ, ಪತ್ರಿಕೆ ದನಿಯನ್ನು ಅಡಗಿಸುವುದಕ್ಕೆ ಪ್ರಯತ್ನಿಸುತ್ತಿದ್ದರೂ ಅದಕ್ಕೆ ಜಗ್ಗದೆ ಕೋಮುವಾದ, ಜಾಗತೀಕರಣ, ಎಸ್‌ಇಜೆಡ್ ಮುಂತಾದ ಅನಿಷ್ಟಗಳ ವಿರುದ್ಧ ನಡೆಯುತ್ತಿರುವ ಹೋರಾಟಗಳಲ್ಲಿ ಪತ್ರಿಕೆ ಒಡನಾಡಿಯಾಗಿ ಭಾಗವಹಿಸುತ್ತಿದೆ. ಇದು ನಿಜಕ್ಕೂ ಹೆಮ್ಮೆಯ ವಿಚಾರ. ಪತ್ರಿಕೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗಬೇಕಿರುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ.

- ಕಲ್ಕುಳಿ ವಿಠ್ಠಲ್ ಹೆಗಡೆ



'ಸಮರೋತ್ಸವ'ಕ್ಕೆ ಹ್ಯಾಟ್ಸಾಫ್

ವಾರ್ಷಿಕೋತ್ಸವಗಳು ಸಾಕಷ್ಟು ನಡೆಯುತ್ತಲೇ ಇರುತ್ತವೆ. ಆದರೆ ನಿಮ್ಮದು "ಸಮರೋತ್ಸವ." ಸಾಂಪ್ರದಾಯಿಕ ಸಮಾಜದ ಸರಪಳಿಗಳನ್ನು ಕಿತ್ತೊಗೆಯುತ್ತಾ, ಕೀಳುಮಟ್ಟದ ರಾಜಕಾರಣವನ್ನು ಎದುರಿಸಿ ಹೆದರಿಸುತ್ತಾ, ಮನಸ್ಸಿಗೆ ಹಮ್ಮಿಕೊಂಡ ಮೌಲ್ಯಗಳಿಗೆ ವಿರುದ್ಧವಾಗಿ ಎಂದೂ ರಾಜಿ ಮಾಡಕೊಳ್ಳದ, ಅದೇ ಕಾರಣಕ್ಕೆ ಆರ್ಥಿಕ ಏರಿಳಿತಗಳಿಗೆ ಒಳಗಾಗುತ್ತಾ ಪತ್ರಿಕೆ ನಡೆಸುತ್ತಿರುವುದು ಒಂದು ಸಮರವೇ ಅಲ್ಲವೆ?

ನಿಮ್ಮ ಸಮರೋತ್ಸಾಹಕ್ಕೆ "ಹ್ಯಾಟ್ಸಾಫ್."

ಈ ನಿಮ್ಮ ಸಮರದಿಂದ ನಮ್ಮಂತ ನೂರಾರು, ಸಾವಿರಾರು ಜನ ಬದುಕಿನಲ್ಲಿ ಚೈತನ್ಯವನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ.

ಥ್ಯಾಂಕ್ಸ್ ಫಾರ್ ದಟ್.

-ಗೋಪಿ, ರಾಜೇಶ್ವರಿ, ಬೆಂಗಳೂರು

ಮೊನ್ನೆ ತಾನೇ ಶುರುವಾದ 'ಲಂಕೇಶ್' ಆಗಲೇ ಐದನೇ ವರ್ಷಕ್ಕೆ ಕಾಲಿಟ್ಟಿತೇ, ಕಂಗ್ರಾಟ್ಸ್ ಗೌರಿ. ನಿನ್ನ ದಿಟ್ಟತನಕ್ಕೆ ಮತ್ತು ನಿನ್ನ ಟೀಮಿನ ಅವಿರತ ಶ್ರಮಕ್ಕೆ.

ಜನರ ಆಶಯ, ನೋವು ನಲಿವುಗಳ ದನಿಯಾಗಿರುವ, ಜನಪರ ಚಳವಳಿಗಳ ಬೆನ್ನೆಲುಬಾಗಿರುವ, ಲಂಕೇಶರ ಚಿಂತನೆ, ನಿಷ್ಠುರತೆ, ನಿಲುವುಗಳನ್ನು ಉಳಿಸಿಕೊಂಡಿರುವ 'ಲಂಕೇಶ್' ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಆಶಿಸುತ್ತೇನೆ.

-ಬಿ.ಟಿ. ವೆಂಕಟೇಶ್



ಗೌರಿ ಲಂಕೇಶ್ ಪತ್ರಿಕೆಗೆ ಐದು ವರ್ಷ ತುಂಬಿರುವುದು ಸಂತೋಷದ ಸಂಗತಿ. ಕಳೆದ ಐದು ವರ್ಷಗಳಲ್ಲಿ ಪತ್ರಿಕೆ ತನ್ನ ಓದುಗರಿಗೆ ನಿರ್ದಾಕ್ಷಿಣ್ಯವಾದ, ರಾಜಿರಹಿತವಾದ ರಾಜಕೀಯ ಹಾಗೂ ಸಾಮಾಜಿಕ ಸಂದೇಶಗಳನ್ನು ಕೊಡುತ್ತ ಬಂದಿದೆ. ವಿಶೇಷವಾಗಿ ಬಲಪಂಥೀಯ ರಾಜಕಾರಣ ಹಾಗೂ ಕೋಮುವಾದದ ನಿಜಸ್ವರೂಪವನ್ನು, ಅದರ ವಿಕೃತ ಹಾಗೂ ಕರಾಳ ಮುಖಗಳನ್ನು ಬಗೆಬಗೆಯಾಗಿ ನಿರೂಪಿಸುತ್ತಾ ಬಂದಿದೆ. ಪತ್ರಿಕೆ ತನ್ನೊಳಗೇ ಒಂದು ಸಾಂಸ್ಕೃತಿಕ ಹೋರಾಟದ ತೀವ್ರ ಛಲವನ್ನು ಹೊಂದಿದೆ. ನಾಡಿನ ಪ್ರಗತಿಪರ ಹೋರಾಟಗಳನ್ನು ಮುಕ್ತವಾಗಿ ಬೆಂಬಲಿಸುತ್ತಾ ಅದೇ ಕಾಲಕ್ಕೆ ಪ್ರಗತಿ ವಿರೋಧಿ ಹೋರಾಟಗಳನ್ನು ವಿರೋಧಿಸುತ್ತ ಬಂದಿದೆ. ಚುನಾವಣೆಯ ಸಮಯದಲ್ಲಿ ತನ್ನ ನಿಲುವನ್ನು ಮುಚ್ಚಿಟ್ಟುಕೊಳ್ಳದೆ ಪ್ರಕಟಿಸಿದೆ.

ಓದುಗರಿಗಾಗಿ ಪತ್ರಿಕೆ

ಕರ್ನಾಟಕದ ವಿವಿಧ ಶೋಷಿತ ಸಮುದಾಯಗಳ ಬಗ್ಗೆ ಪತ್ರಿಕೆಗೆ ಖಚಿತವಾದ ಒಲವು ಇದೆ, ನಿಲುವೂ ಇದೆ. ಅದೇ ಕಾಲಕ್ಕೆ ಶೋಷಣೆ ಮಾಡುವವರ ಬಗ್ಗೆ ತೀವ್ರವಾದ ಕೋಪವಿದೆ. ಒಂದು ಕಡೆ ಸಾಮ್ರಾಜ್ಯಶಾಹಿ ಶೋಷಣೆಯ ಹೊಸರೂಪಗಳು ಮತ್ತೊಂದು ಕಡೆ ಅದರ ಜೊತೆಯಲ್ಲಿ ಕೈಜೋಡಿಸಿ ಇಡೀ ದುಡಿವ ವರ್ಗಗಳ ಬದುಕನ್ನು ಚೆಲ್ಲಾಪಿಲ್ಲಿ ಮಾಡಿರುವ ಆಳುವ ವರ್ಗಗಳು ಇವೆ. ಇವೆರಡೂ ತಮ್ಮ ಹಿತಾಸಕ್ತಿಗೆ ಕೋಮುವಾದವನ್ನು ಬಳಸಿಕೊಂಡು ಅದನ್ನು ಫ್ಯಾಸಿಸ್ಟ್ ಶಕ್ತಿಯಾಗಿ ಮಾರ್ಪಡಿಸಿವೆ. ಇಂತಹ ಪರಿಸ್ಥಿತಿಯಲ್ಲಿ ಪತ್ರಿಕೆ ಕೋಮುವಾದವನ್ನು ಬರಿಯ ಹಿಂದೂ ಮೂಲಭೂತವಾದಿಗಳು ಮತ್ತು ಮುಸ್ಲಿಂ ಸಮುದಾಯಗಳ ಚೌಕಟ್ಟಿನಲ್ಲಿ ಮಾತ್ರ ಗ್ರಹಿಸುತ್ತ ಬಂದಿರುವಂತೆ ಕಾಣುತ್ತದೆ. ಹಾಗಾಗಿ ಪತ್ರಿಕೆಯಲ್ಲಿ ಮುಸ್ಲಿಂ ಸಮುದಾಯಗಳಿಗೆ ಸಿಕ್ಕಷ್ಟು ಒತ್ತು ಅವರಂತಹದ್ದೇ ಪರಿಸ್ಥಿತಿಯಲ್ಲಿರುವ ಅಸ್ಪೃಶ್ಯರು, ಶೋಷಿತ ಮಹಿಳೆಯರು, ದಲಿತರು, ಕೃಷಿಕೂಲಿ ಕಾರ್ಮಿಕರು, ನಿರುದ್ಯೋಗಿ ಯುವಜನರು, ಆದಿವಾಸಿ ಬುಡಕಟ್ಟು ಜನರ ಬಗ್ಗೆ ಸಿಗಲಿಲ್ಲವೇನೊ ಅನಿಸುತ್ತದೆ. ಫಲವಾಗಿ ಕೋಮುವಾದಿಗಳನ್ನೇ ಮತ್ತು ಅವರ ತಂತ್ರ ಕುತಂತ್ರಗಳನ್ನೇ ಪ್ರಧಾನವಾಗಿ ಕೇಂದ್ರೀಕರಿಸಿದುದರಿಂದ ಜಾಗತೀಕರಣ ನೀತಿಗಳಿಂದ ನಲುಗುತ್ತಿರುವ ಪರಿಸ್ಥಿತಿಯನ್ನು ಹೇಳುವುದಕ್ಕೆ ಜಾಗ ಕಡಿಮೆಯಾಯಿತು ಅನಿಸುತ್ತದೆ.

ಕೊಂಡು ಓದುವ ಓದುಗರನ್ನು ಲೆಕ್ಕಕ್ಕೆ ಇಡದೆ ಬಂಡವಾಳಶಾಹಿ ಮಾರುಕಟ್ಟೆಗೆ ಸಂಪೂರ್ಣ ಮಾರಿಕೊಂಡು, ಜಾಹೀರಾತುಗಳ ಮೇಲೇ ನಡೆಯುತ್ತಿರುವ ಪತ್ರಿಕೆಗಳನ್ನು ನೋಡಬೇಕಾದ ದುಃಸ್ಥಿತಿಯಲ್ಲಿದ್ದೇವೆ. ಅವುಗಳಲ್ಲಿ ಕೊಂಡು ಓದುವ ಓದುಗರಿಗೆ ಯಾವ ಕವಡೆ ಕಿಮ್ಮತ್ತೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಗೌರಿ ಲಂಕೇಶ್ ಓದುಗರಿಗಾಗಿಯೇ ಬರುತ್ತಿರುವುದು ಮುಖ್ಯವಾದ ಸಂಗತಿ.

-ಡಾ. ಬಿ ಎಂ ಪುಟ್ಟಯ್ಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲಂಕೇಶ್: ಜೀವಪರ ಚಿಂತನೆಯ ಗಟ್ಟಿಶಕ್ತಿ

ಸಮಕಾಲೀನ ಬದುಕು ತುಂಬ ಸಂಕೀರ್ಣ ಮತ್ತು ಸವಾಲಿನದು. ರಾಜಕೀಯವಾಗಿ ಜೀವವಿರೋಧಿ ಸವಾಲುಗಳು ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ಲಂಕೇಶ್ ನಿರ್ವಹಿಸುತ್ತಿರುವ ಜವಾಬ್ದಾರಿಯುತ ಪ್ರತಿರೋಧದ ಪಾತ್ರ ಮಹತ್ತರವಾದುದು. ಕರ್ನಾಟಕದ ಸಾಮಾಜಿಕ ಸಾಮರಸ್ಯದ ಬದುಕಿಗೆ ಇತ್ತೀಚೆಗೆ ಹೆಚ್ಚಾಗಿರುವ ಆಘಾತಕಾರಿ ಬೆಳವಣಿಗೆಗಳು ಉಂಟು ಮಾಡಿದ ಪ್ರಕ್ಷುಬ್ಧತೆ ಅಪಾಯಕಾರಿಯಾದುದು. ಈ ಸಂದರ್ಭದಲ್ಲಿ ಜೀವಪರತೆ ನಿಲುವನ್ನು ಮೈಗೂಡಿಸಿಕೊಂಡ ಪತ್ರಿಕೆ ಮಾತ್ರ ಮಾಡಬಹುದಾದ ತೀವ್ರ ಪ್ರತಿರೋಧವನ್ನು 'ಲಂಕೇಶ್' ಕೇವಲ ಪತ್ರಿಕೆಯಾಗಿ ಮಾತ್ರವಲ್ಲ, ಜನಪರ ಚಳವಳಿಯಾಗಿಯೂ ಮಹತ್ವದ ಕಾರ್ಯವನ್ನು ಮಾಡುತ್ತ ಬಂದಿದೆ.

ದಮನಿತ ಮತ್ತು ಶೋಷಿತ ಜನರ ನಿಜವಾದ ಸಂಗಾತಿಗಳು ಯಾರು ಎಂಬುದನ್ನು ಅರಿಯದಂತಹ ಸ್ಥಿತಿ ನಿರ್ಮಾಣಗೊಂಡು, ಹುಸಿ ಕಾಳಜಿಗಳಿಗೆ ಸೋತು ವಿರೋಧಿಗಳೊಂದಿಗೆ ಕೈಜೋಡಿಸುವಂತಹ ಅಪಾಯಕಾರಿ ಸನ್ನಿವೇಶಗಳಲ್ಲೆಲ್ಲ ಲಂಕೇಶ್ ಸಾಹಿತ್ಯಿಕವಾಗಿ ನೀಡಿದ ತಿಳಿವು ನಿಜ ಸ್ವಾತಂತ್ರ್ಯದ ಹಾದಿಯನ್ನು ತೋರಿದ್ದು, ದಲಿತಪರ ಸಾಹಿತ್ಯ ನಿರ್ಮಿತಿಗೆ ಒತ್ತಾಸೆಯಾಗಿ ನಿಲ್ಲುತ್ತಲೇ, ಪ್ರತಿಯೊಬ್ಬ ಲೇಖಕನ ಸಂವೇದ ಮತ್ತು ಅಭಿವ್ಯಕ್ತಿಗೆ ವೇದಿಕೆ ಕಲ್ಪಿಸುತ್ತಲೇ ಹಾದಿ ತಪ್ಪಿದಾಗ ತಿದ್ದಿ ಹೇಳುವ ಔದಾರ್ಯ ತೋರಿದ್ದು ನಿಜಕ್ಕೂ ಪ್ರಶಂಸನೀಯ.

ಇತ್ತೀಚೆಗೆ ಪತ್ರಿಕೆಗೆ ದೊರೆತಿರುವ ಸಾಂಸ್ಕೃತಿಕ ಸ್ಪರ್ಶ ಖುಷಿ ತಂದಿದೆ. ಒಂದು ಸೀಮಿತ ವರ್ಗಕ್ಕೆ ಮಾತ್ರ ದಕ್ಕಬಹುದಾಗಿದ್ದ ಪತ್ರಿಕೆಯ ಓದು ಕಥೆ, ಕವನ, ವಿಮರ್ಶೆ, ವೈಚಾರಿಕ ಲೇಖನಗಳನ್ನೊಳಗೊಂಡು ಸಮಗ್ರತೆಯನ್ನು ಪಡೆದು ಸಮೃದ್ಧವಾಗಿ ಬರುತ್ತಿರುವುದು, ಜೀವಪರ ಸಾಹಿತ್ಯದ ಗೈರನ್ನು ಇಲ್ಲವಾಗಿಸಿ ಬರಹಗಾರರಿಗೆ, ಚಿಂತಕರಿಗೆ ತಮ್ಮ ಇರುವಿಕೆಯ ವಾಸ್ತವದ ಜೊತೆಯಲ್ಲಿಯೇ ಮನುಷ್ಯತ್ವದ ಉಳಿವಿಗೆ ಜಾಗೃತ ಮನಸ್ಥಿತಿಯನ್ನು ಕ್ರಿಯಾಶೀಲವಾಗಿರುವಂತೆ ಮಾಡಿದೆ. ಪತ್ರಿಕೆಯಲ್ಲಿ ಬರುತ್ತಿರುವ ತನಿಖಾ ವರದಿಗಳು ನಿಖರ ಮತ್ತು ಸ್ಪಷ್ಟತೆಯನ್ನು ಹೊಂದಿ ಅಧಿಕೃತ ದಾಖಲೆಗಳ ಮೂಲಕ ಭ್ರಷ್ಟರ ಚರ್ವಿತ ಚರ್ವಣಗಳನ್ನು ಬಯಲಿಗೆಳೆದು ಒಂದು ವ್ಯವಸ್ಥೆ ಮಾಡಬೇಕಾಗಿದ್ದ ಜವಾಬ್ದಾರಿಯನ್ನು ಹೆಚ್ಚು ಪರಿಶ್ರಮದ ಮೂಲಕ ಮಾಡುತ್ತಿರುವ ಕಾರ್ಯ ನಿರಂತರ ಹಾಗೂ ವ್ಯಾಪಕವಾಗಿ ನಡೆಯಬೇಕಿದೆ. ಒಂದೊಂದು ಬಾರಿ ಪತ್ರಿಕೆಯ ಮುಖಪುಟದಲ್ಲಿ ರಕ್ತಸಿಕ್ತ ಮತ್ತು ಅಶ್ಲೀಲ ಚಿತ್ರಗಳು ಢಾಳಾಗಿ ಬಂದಿದ್ದರಿಂದ ಪತ್ರಿಕೆಯನ್ನು ಕೈಗೆ ತೆಗೆದುಕೊಳ್ಳಲು ಮುಜುಗರವಾಗಿದ್ದರಿಂದ ಅದನ್ನು ಹೇಳುವುದು ಅನಿವಾರ್ಯವಾಗಿದೆ. ನಾವೂ ಸಹ ಪತ್ರಿಕೆಯ ಭಾಗವಾಗಿರುವುದು ಈ ಸಂದರ್ಭದ ಹೆಮ್ಮೆ ಮತ್ತು ಖುಷಿ.

-ವೀರಣ್ಣ ಮಡಿವಾಳರ



5ನೇ ವರ್ಷಕ್ಕೆ

ಜನಹೋರಾಟಗಳ ಮಾರ್ಗದರ್ಶಿ

ರೈತ ಹೋರಾಟ, ದಲಿತ ಹೋರಾಟ, ಕನ್ನಡ ಚಳವಳಿಗಳ ಪರ್ವಕಾಲದಲ್ಲಿ ಪಿ.ಲಂಕೇಶ್ ಅವರು ಪ್ರಾರಂಭಿಸಿದ ಪತ್ರಿಕೆ ಅವರ ನಿಧನಾನಂತರವೂ ಅವರ ಆಶಯ ಮತ್ತು ಮೌಲ್ಯಗಳನ್ನು ಬಿಟ್ಟುಕೊಡದೇ ಮುನ್ನಡೆಯುತ್ತಿರುವುದು ಸಂತಸದ ವಿಚಾರ. ಪ್ರಾರಂಭದಿಂದ ಇಂದಿನತನಕ ಸಮಾಜದ ಅಂಕುಡೊಂಕುಗಳನ್ನು ಎತ್ತಿತೋರಿಸುವ, ಭ್ರಷ್ಟತೆಯ ವಿರುದ್ಧ ಜನಜಾಗೃತಿ ಮೂಡಿಸುವ ಕೆಲಸದಲ್ಲಿ ತೊಡಗಿರುವ ಪತ್ರಿಕೆ ಜನಪರ ಹೋರಾಟಗಳ ಒಡನಾಡಿಯಾಗಿ, ಸಾಮಾಜಿಕ ಚಳವಳಿಗಳ ಮಾರ್ಗದರ್ಶಿಯಾಗಿ ಹೊರಹೊಮ್ಮಿದೆ.

ವಾಸ್ತವದಲ್ಲಿ ಲಂಕೇಶರು ನಿಧನರಾದಾಗ ಮುಂದೇನು ಎಂಬ ಪ್ರಶ್ನೆ ಸಹಜವಾಗಿ ಎಲ್ಲಾ ಪ್ರಗತಿಪರರನ್ನು, ಚಳವಳಿಗಾರರನ್ನು ಕಾಡಿದ್ದು ನಿಜ. ಆದರೆ, ಗೌರಿ ಲಂಕೇಶ್ ಆ ಜವಾಬ್ದಾರಿಯನ್ನು ಚೆನ್ನಾಗಿ ನಿರ್ವಹಿಸಿದ್ದಾರೆ. ಲಂಕೇಶರ ಆಶಯ ಮತ್ತು ಮೌಲ್ಯಗಳ ಬುನಾದಿಯ ಮೇಲೆಯೇ ಭಿನ್ನವಾಗಿ ಪತ್ರಿಕೆಯನ್ನು ಹೊರತರುತ್ತಿದ್ದಾರೆ. ಗೌರಿಯವರ ಲೇಖನಗಳು ಆರಂಭದಲ್ಲಿ ಕೆಲ ಪೂರ್ವಗ್ರಹಗಳಿಂದ ಕೂಡಿದ್ದು ನಿಜವಾದರೂ ನಂತರದ ದಿನಗಳಲ್ಲಿ ಅವುಗಳನ್ನೆಲ್ಲಾ ತಿದ್ದಿಕೊಂಡು ಬಹಳ ಪ್ರಗತಿಪರ ಬುದ್ಧಿಜೀವಿಯಾಗಿ ಅವರು ಬೆಳೆದಿದ್ದಾರೆ.

ಪತ್ರಿಕೆ ನಾಲ್ಕು ವರ್ಷಗಳನ್ನು ಮುಗಿಸಿ ಐದನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶುಭಸಂದರ್ಭದಲ್ಲಿ ಇನ್ನೂ ಐದು ದಶಕಗಳು ಪತ್ರಿಕೆ ಮುಂದುವರೆಯಲಿ ಎಂದು ಆಶಿಸುತ್ತೇನೆ.

- ಶಿ.ಬೋ.ರಾಧಾಕೃಷ್ಣ
ಕನ್ನಡ ಚಳವಳಿ ಕಾರ್ಯಕರ್ತರು, ಬೆಂಗಳೂರು

ಲಂಕೇಶ್ ಆಲೋಚನೆಗಳ ಅಕ್ಷರ ಲೋಕ

ಲಂಕೇಶರ ಆಲೋಚನೆಗಳ ಮುಂದುವರಿದ ಭಾಗವಾಗಿ ಪ್ರಕಟವಾಗುತ್ತಿರುವ ಪತ್ರಿಕೆಗೆ ಲಂಕೇಶರ ಸೂಕ್ಷ್ಮಗ್ರಹಿಕೆಗಳು ಸಂಪೂರ್ಣವಾಗಿ ಅಲ್ಲದಿದ್ದರೂ ಆ ಜಾಡಿನಲ್ಲಿ ಸಾಗುವ ಪ್ರಾಮಾಣಿಕ ಪ್ರಯತ್ನವಿರುವುದು ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಪತ್ರಿಕೆಯನ್ನು ಗಮನಿಸಿದ ಪ್ರತಿಯೊಬ್ಬರಿಗೂ ಗೋಚರಿಸುತ್ತದೆ. ನಾಡಿನ ಎಲ್ಲ ಪ್ರಗತಿಪರ, ಜೀವಪರ ನಿಲುವುಗಳನ್ನೇ ಸದಾ ಎತ್ತಿ ಹಿಡಿಯುವ ಜನರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದೆ. ಲಂಕೇಶರಿಲ್ಲದ ಸಂದರ್ಭವನ್ನು ಊಹಿಸಿಕೊಳ್ಳಲೂ ಆಗದಂತಹ ಸಂದರ್ಭವೊಂದು ಉದ್ಭವಿಸಿತ್ತು, ಅಂತಹ 'ಶೂನ್ಯತೆ'ಯನ್ನು ಪತ್ರಿಕೆ ಸಮರ್ಥವಾಗಿಯೇ ತುಂಬಿದೆ. ಲಂಕೇಶರ ಕಾಲದಲ್ಲಿ ಬಾಲ ಮುದುರಿಕೊಂಡಿದ್ದ ಕೋಮುವಾದ ಇಂದು ದೈತ್ಯಶಕ್ತಿಯಾಗಿ ವಿಜೃಂಭಿಸುತ್ತಿದೆ. ನಮ್ಮನ್ನು ಯಾರೂ ಏನೂ ಮಾಡಲಾರರು ಎಂಬ ಭಂಡತನಕ್ಕಿಳಿದ ರಾಜಕಾರಣಿಗಳಿದ್ದಾರೆ. ಈ ನೆಲ-ಜಲ ಮಾರಿಕೊಂಡರೂ, ರೈತರ ಜಮೀನಿನಲ್ಲಿ ಏರ್‌ಪೋರ್ಟ್ ನಿರ್ಮಿಸಿದರೂ ಬಡರೈತರ ಅಳಲನ್ನು ಕೇಳುವವರಿಲ್ಲದ ಸ್ಥಿತಿ ನಿರ್ಮಾಣವಾಗಿದೆ. ಎಲ್ಲೆಂದರಲ್ಲಿ ಸೊಕ್ಕಿನ ಗೂಳಿಯಂತೆ ನುಗ್ಗುವ ಮುತಾಲಿಕ್ ಮತ್ತವರ ಕಪಿಸೇನೆ, ಗೊತ್ತು ಗುರಿಯಿಲ್ಲದ ಇಂತಹ ಇನ್ನೂ ಅನೇಕ ಸಂಘಟನೆಗಳಿಗೆ ಪತ್ರಿಕೆ ಸರಿಯಾಗಿಯೇ ಉತ್ತರಿಸುತ್ತಿದೆ. ಆ ಮೂಲಕ ನಮ್ಮೆಲ್ಲರ ಭಾವನೆಗಳನ್ನು ಅಭಿವ್ಯಕ್ತಿಸುತ್ತಿದೆ. ನನ್ನಂತಹ ಅನೇಕ ಲೇಖಕರಿಗೆ ನೈತಿಕ ಶಕ್ತಿಯಾಗಿದೆ.

ಸಂಪಾದಕರ 'ಕಂಡಹಾಗೆ', ಶಿವಸುಂದರರ 'ಚಾರ್ವಾಕ', ಕೇಶವಮೂರ್ತಿಯವರ 'ಅಣಕ' ಮತ್ತು ಲಂಕೇಶರನ್ನೇ ನೆನಪಿಸುವಂತೆ ಬರೆಯುತ್ತಿರುವ ಜಿ. ರಾಜಶೇಖರ ಚಿಂತನೆಗಳೆಲ್ಲ ಲಂಕೇಶ ನಮ್ಮೊಂದಿಗಿರುವುದನ್ನು ಮತ್ತೆ ಮತ್ತೆ ಸಾಬೀತು ಪಡಿಸುತ್ತವೆ.

ಪ್ರಗತಿಪರ ಅಭಿವ್ಯಕ್ತಿ ಅಂಕಣವೆಂದೇ ಹೆಸರಾಗಿದ್ದ ಪ್ರಜಾವಾಣಿಯ 'ವಾಚಕರ ವಾಣಿ' ಹಿಂದಿನಂತಿಲ್ಲದಿರುವುದು ಎಲ್ಲರಿಗೂ ತಿಳಿದ ವಿಷಯ. ಆ ಕಾರಣಕ್ಕಾಗಿಯೇ (ಟ್ಯಾಬ್ಲಾಡ್ ಆದರೂ ಸಹ) ಪ್ರಗತಿಪರ ಧ್ವನಿಗೆ ಒಂದು ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಈಗಿರುವ ಹೊಗಳಿಕೆ-ತೆಗಳಿಕೆ ಅಂಕಣವನ್ನೇ ಕೊಂಚ ಬದಲಾಯಿಸಿ ಪತ್ರಿಕೆಗೆ ಹೊಸ ರೂಪು ನೀಡಬಹುದೇನೋ. ಆ ಮೂಲಕ ಸಮಕಾಲೀನ ವರ್ತಮಾನದ ತಲ್ಲಣಗಳಿಗೆ ಸ್ಪಂದಿಸುವ ಮಾದರಿ ಹಾಗೂ ಏಕೈಕ ಪತ್ರಿಕೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಬಹುದು. ಜೊತೆಗೆ ಪ್ರಗತಿಪರರಿಗೆ ಧ್ವನಿಯಾಗಿ ಭೂಮಿಕೆ ಸೃಷ್ಟಿಸಿದಂತಾಗುತ್ತದೆ. ಕೇವಲ ಸೆಕ್ಸ್-ಕ್ರೈಂ ಮತ್ತು ಗಾಸಿಪ್‌ಗಳನ್ನು ಹೂರಣವಾಗಿಟ್ಟುಕೊಂಡ ಮತ್ತು ಹದಿಹರೆಯರ ಪ್ರೀತಿ-ಪ್ರೇಮವನ್ನು ವಸ್ತುವಾಗುಳ್ಳ ಅನೇಕ ಪತ್ರಿಕೆಗಳು ಇಂದು ಹಲವಾರು ಬುಕ್‌ಸ್ಟಾಲುಗಳಲ್ಲಿ ಲಭ್ಯವಿದೆ. ಆದರೆ ಅವೆಲ್ಲವುಗಳ ನಡುವೆಯೇ ನಮ್ಮ ಪತ್ರಿಕೆ ಭಿನ್ನವಾಗಿ ಯೋಚಿಸುತ್ತಾ ಮನುಷ್ಯವಿರೋಧಿ ನಿಲುವುಗಳನ್ನು ವಿರೋಧಿಸುತ್ತಲೇ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ದುಡಿಯುತ್ತಿರುವ, ಲಂಕೇಶರ ಆಲೋಚನೆಗಳನ್ನು ಅಕ್ಷರ ರೂಪಕ್ಕಿಳಿಸುತ್ತಿರುವ ಪತ್ರಿಕೆಯ ಹಿಂದಿನ ಎಲ್ಲ ಶಕ್ತಿಗಳಿಗೆ ನನ್ನ ಕೃತಜ್ಞತೆಗಳು.

-ಬಿ. ಶ್ರೀನಿವಾಸ, ಹಾವೇರಿ


'ಗೌರಿ ಲಂಕೇಶ್' ಒಂದು ವಿರೋಧ ಪಕ್ಷ

ಮಾತಿಲ್ಲದವರಿಗೆ ಮಾತನಾಡುವ ಶಕ್ತಿಯನ್ನು 'ಲಂಕೇಶ್ ಪತ್ರಿಕೆ'ಯ ಮೂಲಕ ತಂದುಕೊಟ್ಟ ಲಂಕೇಶರ ನಿಧನರೊಂದಿಗೆ 'ಪತ್ರಿಕೆ'ಯನ್ನು ಅತಿಶಯ ಎನ್ನುವಷ್ಟರ ಮಟ್ಟಿಗೆ ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಕನ್ನಡ ನಾಡಿನ ಸೆಕ್ಯುಲರ್ ಮನಸ್ಸುಗಳ ಬರಹಗಾರರು, ಚಿಂತಕರು, ಅಪಾರ ಓದುಗ ವಲಯ ಇದ್ದಕ್ಕಿದ್ದಂತೆ ಏಕಕಾಲಕ್ಕೆ ತಮ್ಮ ಸ್ವರಗಳ ಸದ್ದಡಗಿದಂತೆ ನೋವು ಅನುಭವಿಸಿದರು. ತನ್ನ ಅನಾರೋಗ್ಯದ ಕೊನೆಯ ದಿನಗಳಲ್ಲಿಯೂ ಲಂಕೇಶರು ತಮಗೆ ಉಳಿದಿದ್ದ ಒಂದೇ ಕಣ್ಣನ್ನು ಅರಳಿಸಿ ಹದಗೊಂಡ ದೃಷ್ಟಿಯಿಂದ ಸುತ್ತಲೆಲ್ಲೆಡೆ ನೋಡುತ್ತಾ ಹಲವಾರು ಒಳನೋಟಗಳಿಂದ ಪರಿಭಾವಿಸಿ ಬರೆಯುತ್ತಿದ್ದ ಮೊನಚು ಬರವಣಿಗೆಯ 'ಲಂಕೇಶ್ ಪತ್ರಿಕೆ'ಯೂ ಇನ್ನಿಲ್ಲದಾಗಿಬಿಡುತ್ತದೆಂಬ ಅನ್ನಿಸಿಕೆಗಳೂ ಆಗ ವ್ಯಕ್ತವಾದದ್ದುಂಟು.

ಆದರೆ ಜನರ ಆತ್ಮನಿರೀಕ್ಷೆಗಳನ್ನೇ ದ್ರವ್ಯವಾಗಿಸಿಕೊಂಡು, ಸದ್ಯದ ಕನ್ನಡ ಸಂಸ್ಕೃತಿಯ ಕಾಲಘಟ್ಟವನ್ನು, ಅದರ ದಿಕ್ಕನ್ನು ದಾಖಲಿಸುವಲ್ಲಿ ವಿಮರ್ಶಿಸುವಲ್ಲಿ ಲಂಕೇಶರು ತೋರುತ್ತಿದ್ದ ಉತ್ಸಾಹ ಮತ್ತು ನಿಷ್ಠುರತೆಗಳನ್ನು ತನ್ನೊಳಗೆ ಧಾರಣೆ ಮಾಡಿಕೊಂಡ ಗೌರಿಯವರು, ತಮ್ಮ ತಂದೆಯು ತೋರಿಸಿಕೊಟ್ಟ ಮಹಾಮಾರ್ಗದಲ್ಲಿ ಹೆಜ್ಜೆ ಹಾಕುತ್ತಾ, ಜಾಣಜಾಣೆಯರು ಒಟ್ಟಾಗಿ ಕೂತು ಆಲೋಚಿಸುವ ವೇದಿಕೆಯನ್ನಾಗಿ 'ಗೌರಿ ಲಂಕೇಶ್' ರೂಪಿಸಿ ನಾಲ್ಕು ವಸಂತಗಳನ್ನು ದಿಟ್ಟತನದಿಂದ ಪೂರೈಸಿ ಐದನೇ ವಸಂತಕ್ಕೆ ಕಾಲಿಟ್ಟಿರುವ ಗಳಿಗೆಯಲ್ಲಿ **Happy Birthday to 'Gauri Lankesh!'**

ಯಶಸ್ವಿಯಾಗಿ ನಾಲ್ಕು ವಸಂತಗಳನ್ನು ಮುಗಿಸಿ ಅಭಿನಂದನೆಗಳ ಮಹಾಪೂರವೇ ಹರಿದುಬರುತ್ತಿರುವ ಈ ಹೊತ್ತಿನಲ್ಲಿ ಪತ್ರಿಕೆಯೊಂದಿಗೆ ಹಂಚಿಕೊಳ್ಳಲು ಇಚ್ಛಿಸುವುದೇನೆಂದರೆ 'ಗೌರಿ ಲಂಕೇಶ್' ಕೋಮುವಾದದ ಪ್ರಶ್ನೆಯನ್ನು ಎದುರುಗೊಂಡು ನಿರ್ವಹಿಸುವಲ್ಲಿ ತೋರುತ್ತಿರುವ ಎದೆಗಾರಿಕೆಯಂತೂ ಕನ್ನಡ ಪತ್ರಿಕಾರಂಗದಲ್ಲಿಯೇ ಅನನ್ಯವಾದುದು. ಪತ್ರಿಕೆಯು ಈ ವಿಷಯದಲ್ಲಿ ಲಂಕೇಶರಿಗಿಂತಲೂ ಮಿಗಿಲಾದ ಧೈರ್ಯವಂತಿಕೆ ಪ್ರಕಟಿಸುತ್ತಿರುವುದು ಅಭಿನಂದನೀಯ. ಆದರೆ ಅದೇ ವೇಳೆಯಲ್ಲಿ ಕೊಳೆಗೇರಿಗಳಲ್ಲಿ, ಡೇರೆ ಬಿಡಾರಗಳಲ್ಲಿ, ಹಳ್ಳಿಗಳ ಸೆರಗಿನ ಅಂಚುಗಳಲ್ಲಿ ಅಪಮಾನಕರವಾಗಿ ಬದುಕುತ್ತಿರುವ ದಿಕ್ಕಿಲ್ಲದವರ, ನಿರ್ಗತಿಕರ, ದಲಿತರ, ಅಲೆಮಾರಿಗಳ ನರಳಾಟಗಳೂ ನಿಮಗೆ ಕೇಳಿಸುವಂತಾಗಲಿ.

ಬೇಡ ಜಂಗಮ, ಬುಡ್ಗ ಜಂಗಮ, ಮೂಲ ಜಂಗಮ ಎಂಬ ಹೆಸರುಗಳಲ್ಲಿ ಕೊಟ್ಟ ಜಾತಿಪತ್ರಗಳನ್ನು ನೀಡಿ 'ದಲಿತ ಅಲೆಮಾರಿಗಳ' ತಟ್ಟೆಯ ಅನ್ನವನ್ನು ಕದ್ದು ತಿನ್ನುತ್ತಿರುವ 'ವೀರಶೈವ-ಲಿಂಗಾಯತ ಜಂಗಮರ' ವ್ಯಕ್ತಿ ರಾಜಕೀಯ ಚುಕ್ಕಾಣಿ ಹಿಡಿದಿರುವ ಇವೊತ್ತಿನ ಸನ್ನಿವೇಶದಲ್ಲಿ, ಸಾಹಿತ್ಯ-ಸಂಸ್ಕೃತಿ-ರಾಜಕೀಯ ಕ್ಷೇತ್ರಗಳಲ್ಲಿ 'ಗೌರಿ ಲಂಕೇಶ್' ಒಂದು ವಿರೋಧ ಪಕ್ಷವೇ ಆಗಿ ತನ್ನನ್ನು ರೂಪಿಸಿಕೊಳ್ಳುವ 'ವ್ಯಕ್ತಿತ್ವ'ವನ್ನು ಧಾರಣೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಆಶಿಸುತ್ತಾ



ಮತ್ತೊಮ್ಮೆ **'Happy Birthday to Gauri Lankesh!'**

-ವಡ್ಡಗೆರೆ ನಾಗರಾಜಯ್ಯ, ಬೆಂಗಳೂರು

ಮಂಡ್ಯ: ನಟ ದರ್ಶನ್‌ಗೆ ಅಂಬಿ ಕಾಟ

ಚೆಲುವರಾಯಿಗೆ ರೇವಣ್ಣನ ಗೂಟ

■ ಪಾರ್ವತೀಶ್

ಮಂಡ್ಯ ಜಿಲ್ಲಾ ಚುನಾವಣಾ ಸುದ್ದಿಗಳು ಬಹಳ ಮಜವಾಗಿವೆ.

ನಟ, ಸಂಸದ ಅಂಬರೀಷ್ ಈ ಬಾರಿ ಮಂಡ್ಯದಿಂದ ಮತ್ತೆ ಸ್ಪರ್ಧಿಸಲು ಹಿಂಜರಿಯುತ್ತಿದ್ದಾರೆ. ಸಂಸದನಾಗಿದ್ದಾಗಲೇ ಶ್ರೀರಂಗಪಟ್ಟಣ ಅಸೆಂಬ್ಲಿಯಲ್ಲಿ ಸೋತಿರುವ ಅಂಬಿಗೆ ಈ ಸಾರಿ ಮಂಡ್ಯದ ಹೈಕಳು ಕೈಕೊಡಬಹುದೆಂಬ ಭಯ ಹುಟ್ಟಿದೆ. ಹಾಗಾಗಿ ಅಂಬಿ ಮೈಸೂರು ಕ್ಷೇತ್ರದ ಟಿಕೆಟ್‌ಗಾಗಿ ಸಿಕ್ರೇಟಾಗಿ ಪ್ರಯತ್ನ ನಡೆಸಿದ್ದಾರೆ. ಅದೇ ವೇಳೆಯಲ್ಲಿ ಕಾಂಗ್ರೆಸ್‌ನ ಇನ್ನೊಬ್ಬ ಟಿಕೆಟ್ ಆಕಾಂಕ್ಷಿ ನಾಗಮಂಗಲದ ಶಿವರಾಮೇಗೌಡರಿಗೆ ಟಿಕೆಟ್ ತಪ್ಪಿಸಬೇಕೆಂದು ಅಂಬಿ ಭಾರಿ ಲಾಬಿ ನಡೆಸುತ್ತಿದ್ದಾರೆ. ಇದಕ್ಕೆ ಅಂಬಿ ಹುಡುಕಿರುವ ಪರ್ಯಾಯ ಆಯ್ಕೆ ಯಾರು ಗೊತ್ತೆ?

ದರ್ಶನ್....!

ಕಳೆದ ಆರು ತಿಂಗಳಿಂದಲೂ ಶಿವರಾಮೇಗೌಡ ತಾವು ಮಂಡ್ಯದಿಂದ ಲೋಕಸಭೆಗೆ ಸ್ಪರ್ಧಿಸುವುದಾಗಿ ಅನೌನ್ಸ್ ಮಾಡಿಕೊಂಡೇ ಬಂದಿದ್ದರು. ಮೇಲಾಗಿ ಈ ಅಂಬಿ ಬೇರೆ ಮನಸ್ಸಿಗೆ ಬಂದಂತೆ ವರ್ತಿಸುತ್ತಾ ಕಾವೇರಿ ವಿಚಾರದಲ್ಲಿ ವಿಚಿತ್ರ ರೀತಿಯ ರಾಜೀನಾಮೆ ಕೊಟ್ಟು ಕೊನೆಗಾತ ಸಂಸದರಾಗಿ ಉಳಿದರಾ ಇಲ್ಲವಾ ಎಂಬುದೇ ಗೊತ್ತಾಗದ ರೀತಿ ಕಾಲ ಸವೆಸಿದ್ದಾರೆ. ಈಗ ಶಿವರಾಮೇಗೌಡ ಗೂಳಿಯಂತೆ ನುಗ್ಗಿ ಬರುತ್ತಿರುವುದನ್ನು ನೋಡಿ ಡಿಸ್ಟರ್ಬ್ ಆಗಿರುವ ಅಂಬಿ ಚಾಲೆಂಜಿಂಗ್ ಸ್ಟಾರ್ ದರ್ಶನ್‌ಗೆ ಪಂಪು ಹೊಡೆಯಲು ಶುರು ಮಾಡಿದ್ದಾರೆ. ತಮಾಷೆ ಏನೆಂದರೆ ಈ ದರ್ಶನ್ 'ಅಣ್ಣಾ ನನಿಗ್ಯಾಕಣ್ಣಾ ರಾಜಕೀಯ, ಈಗ ತಾನೆ ಸಿನಿಮಾದಲ್ಲಿ ಕಣ್ಣು ಬಿಡ್ತಾ ಇದೀನಿ, ನನ್ ಬಿಟ್ ಬಿಡಣ್ಣ' ಅಂದನಂತೆ. ಅದಕ್ಕೆ ಅಂಬಿ 'ಲೇಯ್ .....ಕ ಮುಚ್ಕಂಡು ನಾನೇಳಿದಂಗೆ ಕೇಳ್ಕೊ, ಟಿಕೆಟ್ ಕೊಡುಸ್ತೀನಿ, ನೀನೇ ನಿಂತ್ಕಳೊ' ಅಂದರಂತೆ. ಕೇವಲ ಪಿಚ್ಚರಿನಲ್ಲಿ ಮಾತ್ರ ಚಾಲೆಂಜ್ ಮಾಡಿಕೊಂಡು ಓಡಾಡುತ್ತಿರುವ ದರ್ಶನ್ ಈಗ ಎಲೆಕ್ಷನ್ ನೆನೆಸಿಕೊಂಡು ಗಾಬರಿಯಾಗಿ ಸಿಕ್ಕಸಿಕ್ಕ ಸಿನಿಮಾ ಪತ್ರಕರ್ತರಿಗೆ ಫೋನ್ ಮಾಡಿ 'ನನ್ ಕಾಪಾಡಿ ಸಾರ್' ಅನ್ನುತ್ತಿದ್ದಾರೆ.

ಈ ನಡುವೆ ಕಾಂಗ್ರೆಸ್ ಹೈಕಮಾಂಡ್ ಮಂಡ್ಯಾದಿಂದ ಮತ್ತೆ ಅಂಬರೀಷ್‌ಗೇ ಟಿಕೆಟ್ ಕೊಡುವ ಮಾತು ಕೇಳಿಬರುತ್ತಿದೆ. ಆದರೆ ಛಲ ಬಿಡದ ತ್ರಿವಿಕ್ರಮನಂತೆ ಶಿವರಾಮೇಗೌಡರೂ ಈಗ ದೆಹಲಿಗೆ ಹೋಗಿ ಗುಲಾಂ ನಬಿ ಅಜಾದ್ ಮೇಲೆ ಪ್ರಭಾವ ಬೀರುತ್ತಿದ್ದಾರೆ.

ಕೊನೆಗೆ ಮಂಡ್ಯಾ ಕಾಂಗ್ರೆಸ್‌ನಿಂದ ಅಂಬಿ ಅಥವಾ ಶಿವರಾಮೇಗೌಡ ಇವರಿಬ್ಬರಲ್ಲಿ ಯಾರೇ ನಿಲ್ಲಲಿ ಅವರೆದಿರು ಪೈಪೋಟಿ ನೀಡಲು ಸಮತೂಕದ ಬಿಜೆಪಿ ಅಭ್ಯರ್ಥಿ ಇಲ್ಲ. ಡಿ.ಸಿ. ತಮ್ಮಣನೆಂಬ ನುಂಗಣ್ಣ ಇಲ್ಲಿ ಬಿಜೆಪಿ ಅಭ್ಯರ್ಥಿ. ಇವನ ಹತ್ತಿರ ಕನಿಷ್ಠ ಐದುನೂರು ಕೋಟಿಯ ಕಳ್ಳತನದ ಆಸ್ತಿ ಇರುವುದು ಮಂಡ್ಯ ಜನಕ್ಕೆ ಗೊತ್ತಾಗಿದೆ. ಹಾಗಾಗಿ ಬಿಜೆಪಿ ಪಾರ್ಟಿ ವರ್ಕರುಗಳು ಮತ್ತೂ ಜನ ಸೇರಿ ಈ ಬಾರಿ ತಮ್ಮಣ್ಣನಿಂದ ಕನಿಷ್ಠ ಮೂವತ್ತು ಕೋಟಿ ಕರಗಿಸಲು ಕಾಯುತ್ತಿದ್ದಾರೆ.










ಇದೆಲ್ಲಕ್ಕಿಂತ ಮಜವಾಗಿರುವುದು ಮಂಡ್ಯ ಜೆಡಿಎಸ್ ಕ್ಯಾಂಡಿಡೇಟ್ ವಿಚಾರ. ಚೆಲುವರಾಯಸ್ವಾಮಿ ಇಲ್ಲಿನ ದಳ ಅಭ್ಯರ್ಥಿ ಎಂಬ ಮಾತು ಮೊದಲಿನಿಂದಲೂ ಇದೆ. ಈಗಾಗಲೇ ನಾಗಮಂಗಲ ಅಸೆಂಬ್ಲಿಯಿಂದ ಸೋತಿದ್ದರೂ ಈತನ ಬಳಿ ಸಾಕಷ್ಟು ಸಂಪನ್ಮೂಲ ಇದೆ. ಜೊತೆಗೆ ಮಂಡ್ಯ ಜಿಲ್ಲೆಯಲ್ಲಿ ಈಗಾಗಲೇ ದಳದ ಐವರು ಶಾಸಕರೂ ಗೆದ್ದು ಬಂದಿದ್ದಾರೆ. ದಳ ಗ್ಯಾರಂಟಿಯಾಗಿ ಗೆಲ್ಲಬಹುದಾದ ಈ ಕ್ಷೇತ್ರದ ಬಗ್ಗೆ ಈಗ ಗೌಡರ ಸುಪುತ್ರ ರೇವಣ್ಣ ತಲೆ ಹಾಕಿದ್ದಾರೆ.

ಈಗೊಂದು ವಾರದ ಹಿಂದೆ ಗೌಡರ ಮನೆಯಲ್ಲಿ ಕಿರಿಯ ಸೊಸೆ ಭವಾನಿ ರಾಜಕೀಯದ ಬಗ್ಗೆ ವಿಪರೀತ ಮಾತಾಡಿದ್ದರ ಪರಿಣಾಮ ಇದು. ತನ್ನ ಕಣ್ಣೆದಿರೇ ವಾರಗಿತ್ತಿ ಅನಿತಾ ಮಧುಗಿರಿ ಶಾಸಕಿಯಾಗಿ ಗೆದ್ದು ಬಂದಿರುವುದನ್ನು ನೋಡಿಯಾದ ಮೇಲೆ ಭವಾನಮ್ಮನವರಿಗೆ ರಾಜಕೀಯದ ಆಸೆ ಬಂದಿದೆ. ಆ ಪ್ರಕಾರವಾಗಿ ಅವರ ಲೆಕ್ಕಾಚಾರಗಳು ಹೀಗಿವೆ.

ಒಂದೊ ಹಾಲಿ ಕೆ.ಆರ್. ನಗರದ ಜೆಡಿಎಸ್ ಶಾಸಕ ಸಾ.ರಾ. ಮಹೇಶ್ ಮಂಡ್ಯದಿಂದ ಲೋಕಸಭೆಗೆ ಸ್ಪರ್ಧಿಸುವುದು ಅಲ್ಲಿಂದ ಗೆದ್ದಾದ ಮೇಲೆ ಶಾಸಕಗಿರಿಗೆ ರಾಜೀನಾಮೆ ಕೊಟ್ಟು ಮತ್ತೆ ಅಲ್ಲಿಂದ ಭವಾನಿ ಅಸೆಂಬ್ಲಿಗೆ ನಿಂತು ಗೆದ್ದು ಶಾಸಕಿಯಾಗುವುದು.

ಸದ್ಯಕ್ಕೆ ಈ ಪ್ರಪೋಸಲ್ಲಿನ ಬಗ್ಗೆ ಸಾ.ರಾ. ಮಹೇಶ್‌ಗೆ ಸಮ್ಮತಿ ಇರುವಂತೆ ಕಾಣುತ್ತಿಲ್ಲ. ಹಾಗಾಗಿ ಆತ 'ಬೇಕಂದ್ರೆ ಈಗಲೇ ರಾಜೀನಾಮೆ ಕೊಟ್ಟು ಭವಾನಿಯವರಿಗೆ ಅಸೆಂಬ್ಲಿ ಸೀಟ್ ಬಿಟ್ಟುಕೊಡ್ತೀನಿ, ಆದರೆ ಪಾರ್ಲಿಮೆಂಟ್‌ಗೆ ನಿಲ್ಲಲ್ಲ' ಅನ್ನುತ್ತಿದ್ದಾರೆ. ಮಹೇಶ್ ಇಂಗಿತ ಏನೆಂದರೆ ಭವಾನಿಯವರು ಬೇಕಿದ್ದರೆ ಮೈಸೂರು ಕ್ಷೇತ್ರದಿಂದ ಲೋಕಸಭೆಗೆ ನಿಲ್ಲಲಿ ಎಂದು. ಇಲ್ಲಿನ ಒಳರಾಜಕೀಯ ಏನೆಂದರೆ ರೇವಣ್ಣನಿಗೆ ಚೆಲುವರಾಯ ಸ್ವಾಮಿಯನ್ನು ತುಳಿದು ಮೂಲೆಗುಂಪು ಮಾಡಬೇಕಿದೆ. ಹೇಗೂ ಮಂಡ್ಯದಿಂದ ದಳ ಗೆಲ್ಲುವ ಛಾನ್ಸ್ ಇದೆಯಾದ್ದರಿಂದ ಆ ಅವಕಾಶವನ್ನು ಚೆಲುವರಾಯಸ್ವಾಮಿಗೇಕೆ ಕೊಡಿಸಬೇಕು ಎಂಬ ತಕರಾರು ರೇವಣ್ಣನದು.

ಒಟ್ಟಿನಲ್ಲಿ ಮಂಡ್ಯ ಸಂಸತ್ ರಾಜಕೀಯ ವಿಚಿತ್ರ ಹಗ್ಗ ಜಗ್ಗಾಟ ಕಾಣುತ್ತಿದೆ. ನಟ ದರ್ಶನ್ ಅಂಬರೀಷ್ ಕಣ್ಣಿಗೆ ಬೀಳದಂತೆ ತಲೆ ತಪ್ಪಿಸಿಕೊಂಡಿದ್ದಾನೆ. ■



ನಟಿಯನ್ನು 'ಕೊಂದ' ಉದಯವಾಣಿ!



ಈ ಟಿವಿಯಲ್ಲಿ ಪ್ರಸಾರವಾಗುತ್ತಿರುವ ಮೆಗಾ ಧಾರಾವಾಹಿ 'ಗುಪ್ತಗಾಮಿನಿ'ಯ ಪ್ರಮುಖ ಪಾತ್ರಧಾರಿಯನ್ನು 'ಉದಯವಾಣಿ' ಪತ್ರಿಕೆ ಶುಕ್ರವಾರ ನಿರ್ದಾಕ್ಷಿಣ್ಯವಾಗಿ 'ಕೊಂದು' ಇಡೀ ಕಿರುತೆರೆ ಲೋಕ ಬೆಚ್ಚಿ ಬೀಳುವಂತೆ ಮಾಡಿದೆ.

ಹೌದು, ಶುಕ್ರವಾರದಂದು 'ಉದಯವಾಣಿ'ಯ ಬೆಂಗಳೂರು ಆವೃತ್ತಿಯ ಮುಖಪುಟದಲ್ಲಿ 'ಗುಪ್ತಗಾಮಿನಿ ಖ್ಯಾತಿಯ ನಟಿ ಭಾವನಾ ಇನ್ನಿಲ್ಲ' ಎಂಬ ಸುದ್ದಿ ಪ್ರಕಟಗೊಂಡಿದೆ, ಜೊತೆಗೆ ಭಾವನಾ ಪಾತ್ರಧಾರಿ ಸುಷ್ಮಾ ಕೆ.ರಾವ್ ಅವರ ಫೋಟೋ ಕೂಡ ಪ್ರಕಟಗೊಂಡಿದೆ. ಕಿರುತೆರೆ ನಟಿಯೊಬ್ಬಳ ಸಾವಿನ ಸುದ್ದಿಯಂತೆಯೇ ಈ ಸುದ್ದಿಯನ್ನು ಪ್ರಕಟಿಸಲಾಗಿದೆ. ಓದುಗರು ಪಾಪ ನಿಜವಾಗಿಯೂ ನಟಿ ಮೃತಪಟ್ಟಳೆಂದು ತಿಳಿದುಕೊಂಡು, ಕನ್‌ಫರ್ಮ್ ಮಾಡಿಕೊಳ್ಳಲು ಉದಯವಾಣಿ ಪತ್ರಿಕೆಗೆ ಫೋನ್ ಮಾಡಿದರೆ 'ಆಕೆ ನಿಜವಾಗಿಯೂ ಸತ್ತಿಲ್ಲ, ಸೀರಿಯಲ್‌ನಲ್ಲಿ ಸತ್ತಿದ್ದಾಳೆ' ಎಂಬ ಉತ್ತರ ಸಿಕ್ಕಿದೆ. ಜನರ ದಿಕ್ಕು ತಪ್ಪಿಸುವ ಪತ್ರಿಕೆಯ ಈ ತಂತ್ರಕ್ಕೆ ಓದುಗರು ಉಗಿದು ಉಪ್ಪಿನ ಕಾಯಿ ಹಾಕಿದ್ದಾರೆ!

ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಹೀಗಿದೆ:

"ಗುಪ್ತಗಾಮಿನಿಯ ತಾಯಿಮನೆಯ ಭಾವನಾ ಇನ್ನಿಲ್ಲ. ತೀವ್ರ ಅಸ್ವಸ್ಥಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರ ತಂಡ ಸತತ 3 ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನಡೆಸಿತು. ಆದರೆ ಶಸ್ತ್ರಚಿಕಿತ್ಸೆ ನಡುವೆಯೇ ಅವರು ಕೊನೆಯುಸಿರೆಳೆದರು ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ತಮ್ಮ ಪತಿ ತೇಜಸ್ವಿ ಅಕಾಲ ಮರಣಕ್ಕೀಡಾದಾಗ ಭಾವನಾ ಎದೆಗುಂದಿರಲಿಲ್ಲ, ತೇಜಸ್ವಿ ಕಂಡ ಕನಸುಗಳನ್ನು ನನಸಾಗಿಸುವ ಪ್ರಯತ್ನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ತಾಯಿಮನೆ ಎಂಬ ಆಶ್ರಮವನ್ನು ಕಟ್ಟಿ ಮುದುಡಿದ ಬದುಕುಗಳನ್ನು ಅರಳಿಸಿದರು. ನಾನಾ ತರದ ಸಮಸ್ಯೆಗಳನ್ನು ಹೊತ್ತು ಬರುವ ಮಹಿಳೆಯರಿಗೆ ತಾಯಿಮನೆ ಆಶ್ರಯ ನೀಡಿ ಸ್ವಂತ ಬದುಕನ್ನು ಕಟ್ಟಿಕೊಡುತ್ತಿತ್ತು, ಭಾವನಾ ಅವರಿಲ್ಲದ ತಾಯಿಮನೆಯನ್ನು ಊಹಿಸುವುದು ಕಷ್ಟ.

ಪುತ್ರ, ಅಜ್ಜಿ, ಸೋದರ, ಇಬ್ಬರು ಸಹೋದರಿ, ಅಪಾರ ಬಂಧು ಬಳಗ ಮತ್ತು ಅಭಿಮಾನಿಗಳನ್ನು ಭಾವನಾ ಅಗಲಿದ್ದಾರೆ. ಶುಕ್ರವಾರ ಸಂಜೆ 6.30ಕ್ಕೆ ಈ ಟಿವಿಯಲ್ಲಿ ಪ್ರಸಾರವಾಗುವ 'ಗುಪ್ತಗಾಮಿನಿ'ಯಲ್ಲಿ ವಿಶ್ವವ್ಯಾಪಿಯಾಗಿರುವ ವೀಕ್ಷಕರೆಲ್ಲರ ಪ್ರೀತಿಗೆ ಪಾತ್ರಳಾಗಿದ್ದ ಭಾವನಾರಿಗೆ ಭಾಷ್ಪಾಂಜಲಿ ಅರ್ಪಿಸಲಿದ್ದಾರೆ."

ಹೀಗೆ ಇದೊಂದು ಜಾಹೀರಾತು ಎಂಬ ಸುಳಿವನ್ನೂ ಒಂಚೂರು ನೀಡದೇ ಸುದ್ದಿ ಪ್ರಕಟಿಸಿದ ಉದಯವಾಣಿ ಅದ್ಯಾವ ಪತ್ರಿಕಾ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಿದೆಯೋ ಗೊತ್ತಿಲ್ಲ. ಸುದ್ದಿ ಓದಿ ಬೆಚ್ಚಿಬಿದ್ದ ಕಿರುತೆರೆ ಲೋಕ ಮಾತ್ರ ಪತ್ರಿಕೆಯ ಈ ಹೀನ ಪ್ರಚಾರ ತಂತ್ರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ.

ಬೆಚ್ಚಿ ಬಿದ್ದ ಬಂಧು -ಬಳಗ

'ಗುಪ್ತಗಾಮಿನಿ'ಯ ಭಾವನಾ ಪಾತ್ರದಲ್ಲಿ ಅಭಿನಯಿಸುತ್ತಿರುವ ನಟಿ ಹೆಸರು ಸುಷ್ಮಾ ಕೆ.ರಾವ್. ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನವಳಾದ ಈಕೆ ಈ ಧಾರಾವಾಹಿಯಿಂದಲೇ ಹೆಸರು ಮಾಡಿದಳು. ಆದರೆ ಬೇಕಾಬಿಟ್ಟಿಯಾಗಿ ಬಂದ ಅವಕಾಶಗಳನ್ನೆಲ್ಲಾ ಬಾಚಿಕೊಳ್ಳದೆ, 'ಗುಪ್ತಗಾಮಿನಿ'ಯ ಪಾತ್ರದಲ್ಲಿಯೇ ಮುಳುಗಿಹೋದಳು.

ಆಕೆಗೂ ಹೇಳದೆ ಮಣಿಪಾಲ್ ಗ್ರೂಪ್‌ನವರು ಈ ರೀತಿಯಾಗಿ ಸುದ್ದಿ ಪ್ರಕಟಿಸಿ, ಸ್ವತಃ ಆಕೆಯೇ ಬೆಚ್ಚಿಬೀಳುವಂತೆ ಮಾಡಿದ್ದಾರೆ. ಸುಷ್ಮಾಗೆ ಏನಾಯಿತೆಂದು ಹೆದರಿದ ಬಂಧು-ಬಳಗ, ಪರಿಚಯಸ್ಥರು ಶುಕ್ರವಾರ ಇಡೀ ದಿನ ಆಕೆಯ ಮನೆಗೆ ಫೋನ್ ಮಾಡಿ ವಿಚಾರಿಸಿದ್ದೇ ವಿಚಾರಿಸಿದ್ದು. ಇನ್ನು ಸುಷ್ಮಾಳ ಹುಟ್ಟೂರು ಕೊಪ್ಪದಲ್ಲಿ ಕೂಡ ಈ 'ಸುದ್ದಿ' ಕೇಳಿ ಶೋಕದ ವಾತಾವರಣ ನಿರ್ಮಾಣವಾಗಿತ್ತಂತೆ. ಹೀಗೆಲ್ಲಾ ಏಕೆ ಯಡವಟ್ಟು ಮಾಡಿದಿರಿ ಎಂದು ನಟಿಯ ಮನೆಯವರು ಮಣಿಪಾಲ್ ಗ್ರೂಪ್‌ನ ಅಧಿಕಾರಿಗಳನ್ನು ಕೇಳಿದರೆ, ಭಾನುವಾರ ಸ್ಪಷ್ಟೀಕರಣ ನೀಡುತ್ತೇವೆ ಎಂಬ ಹಾರಿಕೆಯ ಉತ್ತರ ನೀಡಿ ಸಾಗಹಾಕಿದ್ದಾರೆ.

'ಗುಪ್ತಗಾಮಿನಿ'ಗೆ ಪ್ರಚಾರ ನೀಡುವ ಉದ್ದೇಶದಿಂದ ಮಣಿಪಾಲ್ ಗ್ರೂಪ್ ಇಷ್ಟೊಂದು ಕೀಳು ಮಟ್ಟಕ್ಕಿಳಿಯುತ್ತದೆ ಎಂದು ನಾವಂದುಕೊಂಡಿರಲಿಲ್ಲ ಎಂದು ಕಿರುತೆರೆಯ ನಟ-ನಟಿಯರು ಹೇಳುತ್ತಿದ್ದಾರೆ. ಇನ್ನು ಉದಯವಾಣಿಯಲ್ಲಿ ನಿಜವಾದ ಮರಣದ ಸುದ್ದಿ ಪ್ರಕಟವಾದರೂ ಯಾರೂ ನಂಬದ ಸ್ಥಿತಿಯನ್ನು ಪತ್ರಿಕೆಯೇ ಈಗ ಸೃಷ್ಟಿಸಿಕೊಂಡಿದೆ. ■

...ನಂತ್ ಸೋಲಿಸಲು ಐದು ಕೋಟಿ
...ಯಡ್ಡಿಗೆ ಸನ್‌ಸ್ಟ್ರೋಕ್ ವ್ಯಾಧಿ

ದೇವರ ಮೇಲೆ ಪ್ರಮಾಣ ಮಾಡಿ ಹೇಳ್ತೀನಿ, ... ಇನ್ನಾವತ್ತಿಗೂ ನನ್ನ ಮಗ ರಾಜಕೀಯಕ್ಕೆ ...ಲ್ಲ. ಚುನಾವಣೆಗೆ ನಿಲ್ಲೋದು ಇಲ್ಲ. ನಾನು ...ಮ ಮಾಡಿದ್ದೇ ಸಾಕು ಇನ್ನು ನನ್ನ ಮಗ ಎಲೆಕ್ಷನ್ನಿಗೆ ... ಮಾಡಬೇಕಾಗಿದ್ದು ಏನೇನೂ ಇಲ್ಲ. ...ತ್ತೂ ಕುಟುಂಬ ರಾಜಕಾರಣ ಮಾಡೋ...

...ಗೆ ಕೇವಲ ನಾಲ್ಕು ದಿನಗಳ ಹಿಂದೆ ...ಗ್ಗದ ಸಭೆಯೊಂದರಲ್ಲಿ ಮುಖ್ಯಮಂತ್ರಿ ...ಹೇಳಿದ ಇದೇ ಮಾತನ್ನೀಗ ಉದಯ ...ವೇಪದೇ ಬಿತ್ತರಿಸುತ್ತಿದೆ. ನಾಲ್ಕು ದಿನಗಳ ... ತಾನೇ ಆಡಿದ ಮಾತನ್ನು ಯಡ್ಡಿ ...ನ್ನಾನೆಂದಲ್ಲ. ಚೆನ್ನಾಗೇ ನೆನಪಿದೆ. ತನಗೆ ...ಮಂತ್ರಿಗಿರಿ ತಪ್ಪಿಸಿದ ದೇವೇಗೌಡರ ವಿರುದ್ಧ ...ತಲ್ಲಿ ಅಪ್ಪಮಕ್ಕಳ ಪಕ್ಷವೆಂದು ಬಾಯಿ ... ಅಧಿಕಾರಕ್ಕೆ ಬಂದ ಯಡಿಯೂರಪ್ಪ ತಾನು ... ದೇವೇಗೌಡ-ಕುಮಾರಸ್ವಾಮಿ ವಿರುದ್ಧ ಏನೆಲ್ಲಾ ...ದನೆಂಬುದು ಇವತ್ತಿಗೂ ನೆನಪಿದೆ. ಬಂಗಾರಪ್ಪನವರ ... ಕೂಡ ತಾನು ಪದೇಪದೇ ಇಂಥದ್ದೇ ಟೀಕೆ ...ನ್ನೂ ಯಡ್ಡಿಗೆ ಗೊತ್ತಿದೆ.

...ವರೆ ಈಗ ತಾನ್ಯಾವತ್ತೂ ಕುಟುಂಬ ರಾಜಕಾರಣ ...ವಿರೋಧಿಸಿಲ್ಲ, ಕುಟುಂಬ ರಾಜಕಾರಣಕ್ಕೆ ...ರೋಧವೇ ಇಲ್ಲ ಎನ್ನುತ್ತಿರುವ ಮುಖ್ಯ...ಗೆ ಜನ ತನ್ನ ಬಗ್ಗೆ ಏನೆಂದುಕೊಂಡಾರು ...ಕನಿಷ್ಠ ಪ್ರಜ್ಞೆಯೂ ಇದ್ದಂತಿಲ್ಲ. "ರಾಘವೇಂದ್ರ ...ಮಗ ಅನ್ನೋ ಕಾರಣಕ್ಕೇನೂ ಪಕ್ಷ ...ಗ್ಗದಿಂದ ಟಿಕೆಟ್ ಕೊಡುತ್ತಿಲ್ಲ. ಆತನ ...ರ್ಯವನ್ನು ನೋಡಿ ಗೆಲ್ಲುವ ಮಾನದಂಡದ ... ಪಕ್ಷ ಟಿಕೆಟ್ ಕೊಟ್ಟಿದೆ. ರಾಘವೇಂದ್ರ ...ಯ ಸಕ್ರಿಯ ಕಾರ್ಯಕರ್ತ. ಯಾರೇ ಆಗಲಿ ...ತ ಸಾಮರ್ಥ್ಯದ ಮೇಲೆ ಟಿಕೆಟ್ ಪಡೆದರೆ ...ದೆ? ಕಳೆದ ಚುನಾವಣೆಯಲ್ಲಿ ಶಿಕಾರಿಪುರ ... ನಾನು ಗೆಲ್ಲೋದಕ್ಕೆ ಕಾರಣವಾಗಿದ್ದೇ ನನ್ನ ಮಗ ...ವೇಂದ್ರ. ಇದನ್ನೆಲ್ಲ ಪರಿಗಣಿಸಿಯೇ ಶಿವಮೊಗ್ಗ ... ಶಾಸಕರು, ಮಂತ್ರಿಗಳು ಮತ್ತು ಜಿಲ್ಲಾ ಘಟಕಗಳೆಲ್ಲ ...ರಲಿನಿಂದ ರಾಘವೇಂದ್ರನಿಗೆ ಟಿಕೆಟ್ ಕೊಡುವಂತೆ ...ಮಿಸಿದ ಕಾರಣಕ್ಕೇ ಪಕ್ಷ ಟಿಕೆಟ್ ಕೊಟ್ಟಿದೆಯೇ ...ತು ಖಂಡಿವಾಗ್ಲೂ ನನ್ನ ಮಗ ಅನ್ನೋ ಕಾರಣಕ್ಕಲ್ಲ" ...ೀಗೆ ಮಾರ್ಚ್ ಆರರಂದು ಪತ್ರಿಕಾಗೋಷ್ಠಿ ಕರೆದು ...ಮಗನಿಗೆ ಟಿಕೆಟ್ ಕೊಟ್ಟಿದ್ದನ್ನು ಸಮರ್ಥಿಸಿಕೊಂಡ ...ಗೂ ಕೇವಲ ನಾಲ್ಕು ದಿನ ಹಿಂದಷ್ಟೇ ದೇವರ ಮೇಲೆ ಪ್ರಮಾಣ ಮಾಡಿ ತನ್ನ ಮಗ ಚುನಾವಣೆಗೆ ನಿಲ್ಲೋಲ್ಲ ಎಂದ ಯಡ್ಡಿಗೂ ಎಂಥ ವ್ಯತ್ಯಾಸ?




ಮುಖ್ಯಮಂತ್ರಿ ಆವತ್ತು ಆ ತರಹದ ಡೈಲಾಗ್ ಹೊಡೆದಿದ್ದಕ್ಕೂ ಕಾರಣವಿದೆ. ಕೆಲ ದಿನಗಳ ಹಿಂದಷ್ಟೇ ಯಡಿಯೂರಪ್ಪನವರ ಪತ್ನಿ ಮೈತ್ರಾದೇವಿಯವರ ನಿಗೂಢ ಸಾವಿನ ಕುರಿತಂತೆ ಪುನರ್ ತನಿಖೆ ಮಾಡುವಂತೆ ಹೈಕೋರ್ಟ್ ತೀರ್ಪಿತ್ತಿತ್ತು. ಕೇಸು ಹಾಕಿದ್ದು ಶಿವಮೊಗ್ಗದ ವಕೀಲ ಶೇಷಾದ್ರಿ ಆದರೂ ಅದನ್ನೆ ಉಪಯೋಗಿಸಿಕೊಂಡು ತನ್ನ ಕಡುವೈರಿ ಅನಂತಕುಮಾರ್, ಈಶ್ವರಪ್ಪ ಜಗದೀಶ್ ಶೆಟ್ಟರ್, ಶಂಕರಮೂರ್ತಿ, ಯತ್ನಾಳ್, ಅಪ್ಪು ಪಟ್ಟಣಶೆಟ್ಟಿ ಇತ್ಯಾದಿಗಳೆಲ್ಲ ಸೇರಿಕೊಂಡು ತನ್ನ ವಿನಾಶಕ್ಕಾಗಿ ಪ್ರಯತ್ನಿಸುತ್ತಾರೆ ಎಂಬುದು ಯಡ್ಡಿಗೂ ಗೊತ್ತು. ಅದಕ್ಕೆ ಅವರೆಲ್ಲರನ್ನೂ ತಣಿಸಲಿಕ್ಕಾಗಿ ಯಡ್ಡಿ ತನ್ನ ಮಗ ಖಂಡಿತ ರಾಜಕೀಯಕ್ಕೆ ಬರೋಲ್ಲ ಎಂದು ಆಣೆ ಪ್ರಮಾಣ ಮಾಡಿದ್ದು.

ತಮಾಷೆಯೆಂದರೆ ಹೀಗೆ ಮಾಧ್ಯಮಗಳ ಮುಂದೆ ಡೈಲಾಗ್ ಹೊಡೆಯುವಾಗಲೇ ಯಡ್ಡಿಯ ಮತ್ತೊಂದು ಕೈಯಲ್ಲಿ ಮಗನಿಗೆ ಶಿವಮೊಗ್ಗದ ಎಂಪಿ ಟಿಕೆಟ್ಟಿಗೆಂದು ಶಿಫಾರಸ್ಸು ಪತ್ರವಿತ್ತು. ತಾತ್ಕಾಲಿಕವಾಗಿ ತನ್ನ ವಿರೋಧಿಗಳನ್ನು ಯಾಮಾರಿಸಿ ಮಗನಿಗೆ ಟಿಕೆಟ್ ಗಿಟ್ಟಿಸುವ ಯಡ್ಡಿಯ ತಂತ್ರದ ಪುರುಷಾರ್ಥವಾದರೂ ಏನಿತ್ತೋ?



ರಾಘವೇಂದ್ರನ ಸಂಘಟನಾ ಸಾಮರ್ಥ್ಯ ಮತ್ತು ಗೆಲ್ಲುವ ತಾಕತ್ತನ್ನು ಕಂಡೇ ಪಕ್ಷ ಆತನಿಗೆ ಟಿಕೆಟ್ ಕೊಟ್ಟಿದೆಯೆನ್ನುವ ಯಡಿಯೂರಪ್ಪನವರ ಮಾತನ್ನೇ ಪರಿಶೀಲಿಸಿ ಹೊರಟರೆ; ರಾಘವೇಂದ್ರನಿಗೆ ಯಡ್ಡಿಯ ಮಗನೆಂಬ ಯೋಗ್ಯತೆ ಬಿಟ್ಟು ಇನ್ನಾವ ಅರ್ಹತೆಯಿದೆ? ವಿದ್ಯಾರ್ಥಿ ದೆಸೆಯಿಂದಲೇ ಹೋರಾಟ ಸಂಘಟನೆಯಲ್ಲಿದ್ದವನಲ್ಲ. ನೆಟ್ಟಗೆ ಭಾಷಣ ಕೂಡ ಗೊತ್ತಿಲ್ಲ. ಅಪ್ಪ ಗಳಿಸಿದ ಹಡಬೆ ದುಡ್ಡು ಹಂಚುವುದು ಮತ್ತು ಜನಕ್ಕೆ ಹೆಂಡ ಕುಡಿಸುವುದು ಬಿಟ್ಟರೆ ರಾಘವೇಂದ್ರನಿಗೆ ಗೊತ್ತಿರುವುದು ಬೋಗಸ್ ಬಿಲ್ ಜಡಿದು ಸರ್ಕಾರಿ ಬೊಕ್ಕಸಕ್ಕೆ ಕನ್ನ ಹಾಕುವುದು ಮಾತ್ರ. ಮಿಕ್ಕಂತೆ ಅಪ್ಪನ ನರ್ಸಿಂಗ್ ಕಾಲೇಜುಗಳ ಹುಡುಗಿಯರನ್ನು ಪೀಡಿಸುವುದು ಈತನ ಮತ್ತೊಂದು ಸಾಧನೆ.


ಯಡಿಯೂರಪ್ಪನ ಮಗನಲ್ಲದೇ ಹೋಗಿದ್ದರೆ ರಾಘವೇಂದ್ರನನ್ನು ಯಾರು ತಾನೇ ಮೂಸುತ್ತಿದ್ದರು? ಜನಕ್ಕೆ ದುಡ್ಡು ಹಂಚುವುದಾಗಲಿ, ಹೆಂಡ ಕುಡಿಸುವುದಾಗಲಿ ಯಾವ ಕಷ್ಟ? ಅದು ಅಪ್ಪ ದುಡಿದ ಪಾಪದ ದುಡ್ಡೇ ಹೊರತು ರಾಘವೇಂದ್ರ ಮೈ ಬಗ್ಗಿಸಿ ದುಡಿದದ್ದೇನಲ್ಲ. ಯಾವತ್ತೂ ಶಿಕಾರಿಪುರದಿಂದಾಚೆ ರಾಜಕೀಯ ಮಾಡಿದವನಲ್ಲ.



ಇವತ್ತಲ್ಲ ನಾಳೆ ಪತ್ನಿ ಮೈತ್ರಾದೇವಿಯದು ಸಾವಲ್ಲ ಬರ್ಬರ ಹತ್ಯೆಯೆಂದು ಸಾಬೀತಾಗಿಬಿಟ್ಟರೆ ತನ್ನ ಬದಲು ಮಗ ರಾಘವೇಂದ್ರನಾದರೂ ನೆರವಿಗಿರಲೆಂಬ ದೂರದೃಷ್ಟಿ ಯಡ್ಡಿಯದು. ಇದೆಲ್ಲಕ್ಕೂ ಮೊದಲೇ ರಾಘವೇಂದ್ರನನ್ನು ಶಿಕಾರಿಪುರದ ಪುರಸಭಾ ಸದಸ್ಯನನ್ನಾಗಿ ಮಾಡಿದ್ದಷ್ಟೇ ಅಲ್ಲ ಅದರ ಅಧ್ಯಕ್ಷನನ್ನಾಗಿಸಿದ್ದು ಕೂಡ ಇದೇ ಉದ್ದೇಶದಿಂದ.

ಇದರ ಹೊರತಾಗಿ ಯಾವುದೇ ತತ್ವ ಸಿದ್ಧಾಂತ, ಪ್ರತಿಭೆ, ವಿಚಾರ ಯಾವುದೂ ಗೊತ್ತಿಲ್ಲದ ರಾಘವೇಂದ್ರ ರೂಪದಲ್ಲಷ್ಟೇ ಮನುಷ್ಯನಾದರೂ ಪ್ರವೃತ್ತಿಯಲ್ಲಿ ಅಕ್ಷರಶಃ ವನ್ಯಮೃಗ!

ಕುಮಾರಸ್ವಾಮಿ ಸರ್ಕಾರದಲ್ಲಿ ಶಿಕಾರಿಪುರಕ್ಕೆಂದು ನಾನೂರು ಕೋಟಿಯ ಪ್ಯಾಕೇಜ್ ಪೂರ್ತಿ ಕಳಪೆ ಕಾಮಗಾರಿಕೆಯಲ್ಲಿ ಮುಂಡಾಮೋಚಿದ ಇದೇ ರಾಘವೇಂದ್ರ ಅದರ ವಿರುದ್ಧ ಪ್ರತಿಭಟಿಸಿದರೆಂಬ ಒಂದೇ ಕಾರಣಕ್ಕೆ ಕಾಂಗ್ರೆಸ್ ನಾಯಕಿ ವಿಜಯಲಕ್ಷ್ಮಿಯವರ ಮೇಲೆ ಕೈ ಮಾಡಿದ. ರಾಘವೇಂದ್ರನ ಗೂಂಡಾಗಿರಿಯ ವಿರುದ್ಧ ರಾಜ್ಯಾದ್ಯಂತ ಮಹಿಳಾ ಸಂಘಟನೆಗಳು ಪ್ರತಿಭಟಿಸಿದವು. ಹಾಗೆ ನೋಡಿದರೆ ಶಿವಮೊಗ್ಗ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಅಭ್ಯರ್ಥಿಯಾಗುವವರ ದೊಡ್ಡ ಹಿಂಡೇ ಇತ್ತು. ಈ ಪೈಕಿ ಮುಂಚೂಣಿಯಲ್ಲಿದ್ದದ್ದು ಆಯನೂರು ಮಂಜುನಾಥ್. ಮಧ್ಯೆ ಒಮ್ಮೆ ಪಕ್ಷ ಬಿಟ್ಟಿದ್ದು ಬಿಟ್ಟರೆ ಆಯನೂರು ಯೋಗ್ಯತೆಯಲ್ಲಿ ರಾಘವೇಂದ್ರನಿಗಿಂತ ನೂರು ಪಟ್ಟು ವಾಸಿ. ಅದು ಬಿಟ್ಟರೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಭಾನುಪ್ರಕಾಶ್ ಜನ್ಮತಃ ಪಕ್ಷಕ್ಕಾಗಿ ಜೀವ ತೇದವರು.



ಇಂಥ ಹಿರಿಯರನ್ನೆಲ್ಲ ಧಿಕ್ಕರಿಸಿ ಮಗನನ್ನು ಸಂಸದನನ್ನಾಗಿ ಮಾಡಲು ಯಡ್ಡಿ ಪಟ್ಟ ಪಾಡುಗಳಾದರೂ ಎಂಥದ್ದು?

ಮೊದಲು ಶಿಕಾರಿಪುರ ತಾಲ್ಲೂಕು ಬಿಜೆಪಿ ಘಟಕದಿಂದ ರಾಘವೇಂದ್ರನನ್ನೇ ಅವಿರೋಧವಾಗಿ ಆಯ್ಕೆ ಮಾಡುವಂತೆ ಫರ್ಮಾನು ಹೊರಡಿಸಿದ್ದಾರೆ. ಅಂತರ ಶಿವಮೊಗ್ಗ ಜಿಲ್ಲಾ ಬಿಜೆಪಿ ಘಟಕ ಕೂಡ ರಾಘವೇಂದ್ರನ ಪರವಾಗಿ ಸರ್ವಾನುಮತದ ನಿರ್ಣಯ ಕೈಗೊಳ್ಳುವಂತೆ ಒತ್ತಡ ಹಾಕಿದ್ದಾರೆ. ವಿಧಿಯಿಲ್ಲದೇ ಒಲ್ಲೊಂದ ಜಿಲ್ಲಾ ಬಿಜೆಪಿ ಅಧ್ಯಕ್ಷ ಭಾನುಪ್ರಕಾಶ್ ಒಳಗೊಂದೊಳಗೇ ಪಕ್ಷದ ವರಿಷ್ಠ ರಾಜನಾಥ್‌ಸಿಂಗ್‌ಗೆ ಪತ್ರ ಬರೆದರು. ರಾಜ್ಯ ಬಿಜೆಪಿ ಘಟಕ ಕೂಡ ರಾಘವೇಂದ್ರನೊಬ್ಬನನ್ನೇ ಅವಿರೋಧವಾಗಿ ಸೂಚಿಸುವಂತೆ ಚಲಾವಣೆ ಮಾಡಿದ ಯಡ್ಡಿಗೆ ಇದ್ದ ಭೀತಿಯೆಂದರೆ ಅದು ತನ್ನ ಕಡುವೈರಿ ಅನಂತ್‌ಕುಮಾರ್ ಮಾತ್ರ. ಯಡ್ಡಿ ಮಗನೊಬ್ಬನನ್ನೇ ಶಿವಮೊಗ್ಗದ ಏಕೈಕ ಬಿಜೆಪಿ ಅಭ್ಯರ್ಥಿಯೆಂದು ಬಿಂಬಿಸುವ ರಾಜ್ಯಮಟ್ಟದ ಸಭೆಗೆ ಅನಂತ್‌ಕುಮಾರ್ ಹಾಜರಾಗಲೇ ಇಲ್ಲ. ಅನಂತರದ ಇನ್ನೊಂದೆರಡು ಅಭ್ಯರ್ಥಿ ಆಯ್ಕೆ ಸಭೆಗಳಿಗೂ ಅನಂತ್ ಕಾಲಿಟ್ಟಲ್ಲ. ಇದಕ್ಕೆ ಪೂರಕವೆಂಬಂತೆ ಶಿವಮೊಗ್ಗದ ಬಿಜೆಪಿಯಲ್ಲಿ ಅಸಹನೆ ಭುಗಿಲೆದ್ದಿದೆ.

ಇದರ ನೇತೃತ್ವ ವಹಿಸಿರುವ ಆಯನೂರು ಮಂಜುನಾಥ್ ಶತಗತಾಯ ಯಡ್ಡಿ ಮಗನ ಸೋಲಿಗೆ ಟೊಂಕ ಕಟ್ಟಿ ನಿಂತಿದ್ದಾರೆ. ಇದಕ್ಕೆ ಇಂಬುಕೊಟ್ಟಂತೆ ಯಡ್ಡಿ ಮಗನ ವಿರುದ್ಧ ಕತ್ತಿ ಮಸೆಯುತ್ತಿರುವ ಶಿವಮೊಗ್ಗ ಜಿಲ್ಲಾ ಬಿಜೆಪಿ ಅಧ್ಯಕ್ಷ ಭಾನುಪ್ರಕಾಶ್ ಯಡ್ಡಿ ಪುತ್ರ ವ್ಯಾಮೋಹದ ವಿರುದ್ಧ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್‌ಗೆ ರಹಸ್ಯ ಪತ್ರ ಬರೆದಿದ್ದಾರೆ. ಬಿಜೆಪಿಯ ಪಕ್ಷ ಸಂಘಟನೆಗೆಂದೇ ಇರುವ 'ಧ್ಯೇಯ ಕಮಲ' ಎಂಬ ಪತ್ರಿಕೆಯ ಸಂಪಾದಕರೂ ಆದ ಭಾನುಪ್ರಕಾಶ್ ಸದ್ಯ ಬಿಜೆಪಿಯೊಳಗಿನ ಯಡ್ಡಿ ಮಗನ ನಿಗೂಢ ಶತ್ರು. ಇವರ ಜೊತೆ ಶಿವಮೊಗ್ಗ ನಗರ ಬಿಜೆಪಿ ಅಧ್ಯಕ್ಷ ಜ್ಞಾನೇಶ್ ಕೂಡ ಯಡ್ಡಿ ಮಗನ ಸೋಲಿಗೆ ಪಣತೊಟ್ಟಿದ್ದಾರೆ. ಹೇಳಿಕೇಳಿ ಈ ಜ್ಞಾನೇಶ್ ಜಾತಿಯಲ್ಲಿ ಕುರುಬ ಮತ್ತು ಈಶ್ವರಪ್ಪನವರ ಕಟ್ಟಾ ಅನುಯಾಯಿ.

ತನ್ನ ಮಗನನ್ನು ಸೋಲಿಸಿ ತನಗೆ ಮುಖಭಂಗವನ್ನುಂಟುಮಾಡುವ ಷಡ್ಯಂತ್ರದ ಹಿಂದಿರುವುದು ಕೇವಲ ಈಶ್ವರಪ್ಪನಷ್ಟೇ ಅಲ್ಲ, ತನ್ನ ಕಡುವೈರಿ ಅನಂತ್‌ಕುಮಾರ್ ಅದರ ಮುಖ್ಯ ಸೂತ್ರಧಾರನೆಂಬ ವಾಸನೆ ಯಡ್ಡಿ ಮೂಗಿಗೆ ಬಡಿದಿದೆ. ಕಳೆದ ಎರಡು ವಾರಗಳಿಂದ ಯಡ್ಡಿ ಸಂಪುಟದ ಒಂದು ಡಜನ್ ಮಂತ್ರಿಗಳ ಫೋನನ್ನು ಇಲಾಖೆ ಕದ್ದಾಲಿಸುತ್ತಿದೆ. ತನ್ನ ವಿರುದ್ಧ ಯಾವ್ಯಾವ ಪತ್ರಿಕೆಗಳಿಗೆ ಯಾರ್‍ಯಾರು ಏನೆಲ್ಲಾ ಸುದ್ದಿ ಕೊಡುತ್ತಾರೆಂಬುದರಿಂದ ಹಿಡಿದು ಶಿವಮೊಗ್ಗದ ಪುಡಿಪುಡಿ ಬಿಜೆಪಿ ನಾಯಕರೆಲ್ಲರ ಫೋನುಗಳನ್ನೂ ಪೊಲೀಸರು ಕದ್ದಾಲಿಸುತ್ತಿದ್ದಾರೆಂದರೆ ಯಡ್ಡಿ ಪುತ್ರ ವ್ಯಾಮೋಹದ ಮುಂದೆ ದೇವೇಗೌಡ, ಬಂಗಾರಪ್ಪ ಯಾವ ಲೆಕ್ಕ?

ಮಗನನ್ನು ಗೆಲ್ಲಿಸಿ ಲೋಕಸಭೆಗೆ ಕಳಿಸಲು ಮುಖ್ಯಮಂತ್ರಿ ಯಡ್ಡಿ ಎತ್ತಿಟ್ಟ ಬಜೆಟ್ಟೆಷ್ಟು ಗೊತ್ತೆ?

ಕನಿಷ್ಠ ಇಪ್ಪತ್ತೈದು ಕೋಟಿ!

ಯಾರದೋ ದುಡ್ಡು ಯಡ್ಡಿ ಪುತ್ರನ ಜಾತ್ರೆ!!

■ ರಾ. ಸೋಮನಾಥ್

ಸೋಲಿನ ಕುದುರೆ • ಸೋಮಣ್ಣ



ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಯಾವುದೇ ಕಾರಣಕ್ಕೂ ...ನಂತ್‌ಕುಮಾರ್ ಗೆಲ್ಲದಂತೆ ಬಲೆಹಾಕಲು ಯಡ್ಡಿಗೆ ಸರ್ಪಾಸ್ತ್ರದಂತೆ ಸಿಕ್ಕವನು ...ಜಯನಗರದ 'ವೀರಪುತ್ರ' ಮತ್ತು ಗೋವಿಂದರಾಜನಗರದ ಎಮ್ಮೆಲ್ಲೇ ಸೋಮಣ್ಣ.

ದೇಹ ಕಾಂಗ್ರೆಸ್ಸಿನಲ್ಲಿದ್ದರೂ ಮಾನಸಿಕವಾಗಿ ಚೆಡ್ಡಿ ತೊಟ್ಟ ಸೋಮಣ್ಣ ಸದ್ಯ ...ಡ್ಡಿ ಬಳಗದ ಪರಮಾಪ್ತ, ಸಿದ್ಧಗಂಗೆಯ ಸ್ವಾಮಿಗಳೇ ನಿಂತು ಯಡ್ಡಿಯ ಜೊತೆ ...ೋಮಣ್ಣನನ್ನು ಗಂಟು ಹಾಕಿದ್ದಾರೆ. ಮೊನ್ನೆ ತುಮಕೂರಿನ ಕಾಂಗ್ರೆಸ್ ಸಂಸದ ...ಎಸ್. ಬಸವರಾಜುರನ್ನು ಬಿಜೆಪಿಗೆ ತರುವಲ್ಲೂ ಸೋಮಣ್ಣನ ಕೈ ಚಳಕವೇ ...ಸ ಮಾಡಿದೆ. ಸೋಮಣ್ಣನಂತೆ ವಿಜಯನಗರದ ಮತ್ತೊಬ್ಬ ಕಾಂಗ್ರೆಸ್ ಶಾಸಕ ...ಬಿಟ್ ಕೃಷ್ಣಪ್ಪ ಕೂಡ ಯಡ್ಡಿಯ ಹಂಗಿನಲ್ಲೇ ಇದ್ದಾರೆ. ಕಳೆದ ವಿಧಾನಸಭಾ ...ನಾವಣೆಯಲ್ಲಿ ಸೋಮಣ್ಣನ ವಿರುದ್ಧ ಬಿಜೆಪಿಯ ಅಶ್ವತ್ಥನಾರಾಯಣನಂಥ ಬಲಾಢ್ಯನಿಗೆ ಟಿಕೆಟ್ ತಪ್ಪಿಸಿ ...ವೇಂದ್ರನಂಥ ಡಮ್ಮಿಗೆ ಬಿಜೆಪಿ ಟಿಕೆಟ್ ಕೊಡಿಸಿ ಉಪಕರಿಸಿದಂತೆ, ಕೃಷ್ಣಪ್ಪನವರ ವಿರುದ್ಧ ಪ್ರಮೀಳಾ ನೇಸರ್ಗಿಗೆ ...ಕೆಟ್ ಕೊಡಿಸಿ ನೆರವಾಗಿದ್ದು ಕೂಡ ಯಡ್ಡಿಯೇ. ಹೀಗಾಗಿ ಬೆಂಗಳೂರು ದಕ್ಷಿಣದ ಎಂಟು ವಿಧಾನಸಭಾ ...ತ್ರಗಳ ಪೈಕಿ ವಿಜಯನಗರ ಮತ್ತು ಗೋವಿಂದರಾಜನಗರದ ಕಾಂಗ್ರೆಸ್ ಶಾಸಕರಿಬ್ಬರೂ ಯಡ್ಡಿಯ ಆಜ್ಞಾನುವರ್ತಿಗಳೆ.

ಮಿಕ್ಕಂತೆ ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ ಮತ್ತು ಬಿಟಿಎಂ ಲೇಔಟಿನ ಬಿಜೆಪಿ ನಾಯಕ ಪ್ರಸಾದ್ ...ಡ್ಡಿಯಂಥ ಗೆಲಗಳಿಬ್ಬರೂ ಗಣಿರೆಡ್ಡಿಗಳ ಛೇಲಾಗಳು ಮತ್ತು ಮಾನಸಿಕವಾಗಿ ಯಡ್ಡಿಗೆ ನಿಯತ್ತಿನವರೇ. ...ವರಿಬ್ಬರೂ ಅನಂತ್ ವಿರುದ್ಧ ತಟಸ್ಥರಾದರೆ ಮುಗಿದೇಹೋಯಿತು. ಎಲ್ಲಕ್ಕೂ ಮಿಗಿಲಾಗಿ ವಿಜಯನಗರದ ...ೀರಪುತ್ರ' ಸೋಮಣ್ಣ ಒಬ್ಬನೇ ಮನಸ್ಸು ಮಾಡಿದನೆಂದರೆ ಅನಂತ್‌ಕುಮಾರ್ ಗೆಲ್ಲುವುದು ಸಾಧ್ಯವೇ ಇಲ್ಲ.

ಅದರೆ ಸೋಮಣ್ಣ ಯಡ್ಡಿಯಷ್ಟೇ ಅನಂತ್‌ಗೂ ಪರಮಾಪ್ತ, ಅದನ್ನು ಧ್ವಂಸ ಗೊಳಿಸಲೆಂದೇ ಯಡ್ಡಿ ...ೋಮಣ್ಣನಿಗೆ ಐದು ಕೋಟಿಯ ಆಮಿಷವೊಡ್ಡಿದ್ದಾರಂತೆ. ಕಾಂಗ್ರೆಸ್ಸಿನಲ್ಲಿದ್ದರೂ ಲೋಕಸಭಾ ಚುನಾವಣೆಯಲ್ಲಿ ...ನಂತ್ ಗೆಲುವಿಗೆ ಶ್ರಮಿಸುತ್ತಲೇ ಬಂದ ಸೋಮಣ್ಣ ಈ ಬಾರಿ ಖಂಡಿತ ಎಸ್.ಎಂ. ಕೃಷ್ಣರನ್ನು ಗೆಲ್ಲಿಸುತ್ತಾನೆ ... [illegible] ಕಾಂಗ್ರೆಸ್ ಪರ ಪ್ರಚಾರ ನಡೆಸುತ್ತಾನೆ. ಅನಂತ್ ಸೋಲಿಸಲೆಂದು ಯಡ್ಡಿ ಐದು ... [illegible] ಎಂದು ... ಈ ಪೈಕಿ ... ಸೋಮಣ್ಣನ [illegible]

ಅನಂತ್ ಸೋಲಿಗೆ ಸದ್ಯ ಸೋಮಣ್ಣನೇ ಸೋಲಿನ ಕುದುರೆ! ■

ಅನಂತ್ ಸೋಲಿಗೆ ಯಡ್ಡಿಯ ಖೆಡ್ಡಾ

ಆ ಮನುಷ್ಯ ನನ್ನ ಮಗನನ್ನು ಸೋಲಿಸೋಕ್ಕೆ ಈ ಮಟ್ಟದ ಕಾರಸ್ತಾನ ನಡೆಸೋದಾದ್ರೆ ಅದ್ಹೆಂಗೆ ಆತ ಗೆಲ್ತಾನೋ ನೋಡೇಬಿಡ್ತೀನಿ....!

ಇದು ಯಡ್ಡಿ ಬಾಯಿಂದ ಮೊನ್ನೆ ರಾತ್ರಿಯಷ್ಟೇ ಹೊರಬಿದ್ದ ಅಣಿಮುತ್ತು. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಅನಂತ್‌ಕುಮಾರ್ ವಿರುದ್ಧ ಕಾಂಗ್ರೆಸ್ ಅಧಿಪತಿ ಎಸ್.ಎಂ. ಕೃಷ್ಣ ನಿಲ್ಲುವುದು ಶತಸ್ಸಿದ್ಧ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣದ ಎಂಟೂ ಕ್ಷೇತ್ರಗಳ ಒಟ್ಟೂ ಮತಗಳನ್ನು ಲೆಕ್ಕಹಾಕಿದರೆ ಕಾಂಗ್ರೆಸ್‌ಗಿಂತ ಕೇವಲ ಇಪ್ಪತ್ತು ಸಾವಿರದಷ್ಟು ಹೆಚ್ಚಿಗೆ ಮತಗಳಷ್ಟೇ ಬಿಜೆಪಿಗೆ ಬಂದಿದೆ.

ಪ್ರತಿಬಾರಿ ಕನಿಷ್ಠ ಐವತ್ತು ಸಾವಿರ ಮತಗಳಷ್ಟು ಲೀಡ್ ಗಳಿಸುತ್ತಿದ್ದ ಬಿಜೆಪಿಯ ಮತಶಕ್ತಿ ಮೊದಲೇ ಕ್ಷೀಣಿಸಿದೆ. ಅಂಥಾದ್ದರಲ್ಲಿ ತನ್ನದೇ ಬಿಜೆಪಿಯ ಒಂದಿಬ್ಬರು ಎಮ್ಮೆಲ್ಲೆಗಳು ದೋಖಾ ಕೊಟ್ಟರೂ ಅನಂತ್ ಗೆಲ್ಲುವುದು ಕಷ್ಟ. ತನ್ನ ಮಗನನ್ನು ಮಣ್ಣು ಮುಕ್ಕಿಸಲು ಕತ್ತಿ ಮಸೆಯುತ್ತಿರುವ ಅನಂತ್‌ಕುಮಾರ್‌ರನ್ನು ಏನಾದರೂ ಮಾಡಿ ಸೋಲಿಸಿಯೇ ತೀರಲು ಯಡ್ಡಿ ತಲೆ ಕೆಡಿಸಿಕೊಂಡಿದ್ದಾರೆ.

ಬೆಂಗಳೂರು ದಕ್ಷಿಣದ ವ್ಯಾಪ್ತಿಗೊಳಪಡುವ ಬೊಮ್ಮನಹಳ್ಳಿಯ ಶಾಸಕ ಸತೀಶ್ ರೆಡ್ಡಿ ಮತ್ತು ಬಿಟಿಎಂ ಲೇಔಟಿಗೆ ಬಿಜೆಪಿ ಅಭ್ಯರ್ಥಿಯಾಗಿದ್ದ ಪ್ರಸಾದ್ ರೆಡ್ಡಿ ಇಬ್ಬರನ್ನೂ ಕರೆಸಿಕೊಂಡು, ಯಡ್ಡಿ ಮೊದಲ ಸುತ್ತಿನ ಬತ್ತಿ ಇಟ್ಟಾಗಿದೆ. 'ಅವನನ್ನ ಗೆಲ್ಲಿಸೋಕ್ಕೆ ಜಾಸ್ತಿ ತಲೆ ಕೆಡಿಸ್ಕೋ ಬ್ಯಾಡ್ರಯ್ಯಾ...!' ಎಂಬ ಯಡ್ಡಿ ಮಾತಿಗೆ ಏನೆಲ್ಲಾ ಅರ್ಥಗಳಿವೆಯೊ?

ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯ ಮತ್ತು ಜಯನಗರದ ಶಾಸಕ ವಿಜಯ್‌ಕುಮಾರ್ ಇಬ್ಬರಿಗೂ ಅನಂತ್ ಗೆಲ್ಲಿಸಲು ರಿಸ್ಕ್ ತಗೋಬೇಡಿ ಎಂದು ಯಡ್ಡಿ ಕಿವಿ ಹಿಂಡಿದರೆನ್ನಲಾಗಿದೆ. ಮೂಲತಃ ಅನಂತ್ [illegible] ವಿಜಯ್‌ಕುಮಾರ್ ಮತ್ತು ರವಿಸುಬ್ರಹ್ಮಣ್ಯ ಇಬ್ಬರೂ ಯಡ್ಡಿ ಹೇಳಿದ್ದನ್ನೇ ಯಥವತ್ತಾಗಿ ಅನಂತ್ ಕಿವಿಗೆ ಮುಟ್ಟಿಸಿದ್ದಾರೆ. ಅಲ್ಲಿಗೆ ತನ್ನನ್ನು ಶತಗತಾಯ ಯಡ್ಡಿ ಸೋಲಿಸಿಯೇ ತೀರುತ್ತಾರೆಂಬುದು ಅನಂತ್‌ಗೆ ಗ್ಯಾರಂಟಿಯಾಗಿದೆ. ಯಾವುದೇ ಪಕ್ಷದಲ್ಲಿದ್ದರೂ ಆವತ್ತಿನಿಂದ ತನ್ನನ್ನು ಬೆಂಬಲಿಸಿಕೊಂಡೇ ಬರುತ್ತಿದ್ದ [illegible] 'ವೀರಪುತ್ರ' ಸೋಮಣ್ಣ ಕೂಡ ಈ ಬಾರಿ ತನಗೆ ಕೈಕೊಡುತ್ತಾನೆಂಬುದು ಅನಂತ್‌ಗೆ ಖಾತರಿಯಾಗಿದೆ. ಏಕೆಂದರೆ ಸೋಮಣ್ಣ ಜಾತಿಯ [illegible] ಆಪ್ತಬಂಧು. ಎಷ್ಟೇ ವಿಶ್ವಾಸವಿದ್ದರೂ ಜಾತಿ [illegible]

[illegible] ■



ಕೆ.ಆರ್.ಪೇಟೆ ಪೊಲೀಸ್ ಸ್ಟೋರಿ

ಒಂದು ಕೊಲೆ, ಮತ್ತೊಂದು ಲಾಕಪ್ ಡೆತ್!

ಮರಳು ಮಾಫಿಯಾದ ಹಗಲು ದರೋಡೆ ಮಂಡ್ಯ ಜಿಲ್ಲೆಯ ಕಾವೇರಿ ನದಿ ತೀರದಲ್ಲಿ ಮಾತ್ರವಲ್ಲದೆ ಹೇಮಾವತಿ ಮುಂತಾದ ನದಿಗಳ ಪಾತ್ರದ ತುಂಬೆಲ್ಲಾ ನಡೆಯುತ್ತಿರುವುದು ಗುಟ್ಟಾಗೇನು ಉಳಿದಿಲ್ಲ. ಅಧಿಕಾರಿಗಳು, ರಾಜಕಾರಣಿಗಳು, ಅವರ ಸಂಬಂಧಿಕರು ಎಲ್ಲರೂ ಒಗ್ಗೂಡಿ ನಡೆಸುತ್ತಿರುವ ದರೋಡೆಯಿದು. ಕೆ.ಆರ್.ಪೇಟೆಯ ಹೇಮಾವತಿ ತೀರದಲ್ಲಿ ಮೊನ್ನೆ ಕೂಲಿ ಕಾರ್ಮಿಕನೊಬ್ಬ 'ಕಾಣೆ'ಯಾಗುವ ತನಕ ಈ ಭಾಗದಲ್ಲಿ ಗುಪ್ತಗಾಮಿನಿಯಂತೆ ನಡೆಯುತ್ತಿದ್ದ ಮರಳು ದರೋಡೆ ಹೊರಗಿನ ಪ್ರಪಂಚಕ್ಕೆ ಗೊತ್ತಾಗಿರಲಿಲ್ಲ, ಈಗ ಕಾಣೆಯಾದ ಕಾರ್ಮಿಕನ ಕೊಲೆಯಾಗುವುದರೊಂದಿಗೆ, ಈ ಕೊಲೆಯನ್ನು ವಿಚಾರಣೆ ಮಾಡಲು ಹೋಗಿ ಪೊಲೀಸರು ಮತ್ತೊಂದು ಲಾಕಪ್ ಡೆತ್ ಮಾಡುವುದರೊಂದಿಗೆ ಮರಳು ಮಾಫಿಯಾದ ಭೀಕರ ದೃಶ್ಯಗಳು ಹೊರಬೀಳಲಾರಂಭಿಸಿವೆ.


ಭಾಸ್ಕರನ ಕೊಲೆ?

ಶ್ರೀರಂಗಪಟ್ಟಣದ ಹರಿಹರಪುರದ ತಿಮ್ಮೇಗೌಡ ಹುಟ್ಟಾ ಮರಳು ದಂಧೆಕೋರ. ಈತನ ದಂಧೆಗಳೆಲ್ಲವನ್ನೂ ನಿಭಾಯಿಸುತ್ತಿದ್ದವನು ಮಗ ಧನಂಜಯ ಕುಮಾರ್. ಧನಂಜಯನಿಗೆ ಈಗ್ಗೆ ಎರಡು ವರ್ಷಗಳ ಹಿಂದೆ ಪಾಂಡವಪುರ ತಾಲೂಕಿನ ಚಿನಕುರಳಿ ಸಮೀಪದ ತಿರುಮಲಪುರದ ಹುಡುಗಿಯ ಜೊತೆ ಮದುವೆಯಾಗಿತ್ತು. ಈ ಲಿಂಕಿನ ಮೇಲೆ ತಿರುಮಲಪುರದ ಹಲವಾರು ಕೂಲಿ ಕಾರ್ಮಿಕರ ಸಂಪರ್ಕ ಪಡೆದ ಧನಂಜಯ ತನ್ನ ಮರಳಿನ ಜಾಡು ಇದ್ದ ಕೆ.ಆರ್.ಪೇಟೆಯ ಅಕ್ಕಿಹೆಬ್ಬಾಳುವಿನ ಹತ್ತಿರ ಹೇಮಾವತಿ ನದಿ ಒಡಲನ್ನು ಬಗೆದು ಮರಳುದಂಧೆ ನಡೆಸುತ್ತಿದ್ದ. ಆತನ ಈ ದಂಧೆಯಲ್ಲಿ ಕೂಲಿ ಮಾಡುತ್ತಿದ್ದವರು ತಿರುಮಲಾಪುರದ ಇಂದ್ರೇಶ, ಭಾಸ್ಕರ, ಕರೀಗೌಡ ಮತ್ತು ರಮೇಶ.

ಆದರೆ ಇತ್ತೀಚೆಗೆ ಭಾಸ್ಕರ ಎಂಬ ಮರಳು ಕಾರ್ಮಿಕ ಮನೆಗೆ ವಾಪಸ್ ಬರಲಿಲ್ಲ, ಸಹಜವಾಗೇ ಭಾಸ್ಕರನ ಮನೆಯವರು ಆತನ ಸಹ ಕಾರ್ಮಿಕರನ್ನು ವಿಚಾರಿಸಿದರೆ ಅವರು ಒಬ್ಬೊಬ್ಬರು ಒಂದೊಂದು ಉತ್ತರ ಕೊಟ್ಟಿದ್ದಾರೆ. ಇದು ಭಾಸ್ಕರನ ಮನೆಯವರಿಗೆ ಭಯ, ಆತಂಕ ಹುಟ್ಟಿಸಿದೆ. ಮಾಲೀಕ-ತಿಮ್ಮೇಗೌಡ, ಧನಂಜಯ, ಕಾರ್ಮಿಕರಾದ ಕರೀಗೌಡ, ರಮೇಶ, ಇಂದ್ರೇಶ ಎಲ್ಲರನ್ನೂ ಸೇರಿಸಿ ಕೆ.ಆರ್.ಪೇಟೆ ಗ್ರಾಮಾಂತರ ಠಾಣೆಗೆ ಭಾಸ್ಕರನ ತಂದೆ ತಾಯಿಗಳು ದೂರು ನೀಡಿದ್ದಾರೆ. ಪೊಲೀಸರು ಮಾಮೂಲಿಯಂತೆ 'ಎಲ್ಲೋ ಹೋಗಿರಬಹುದು; ಬರುತ್ತಾನೆ ಮನೆಗೆ ಹೋಗಿ' ಎಂದು ಕೈತೊಳೆದುಕೊಂಡಿದ್ದಾರೆ.

ಇಷ್ಟಕ್ಕೆ ಸುಮ್ಮನಾಗದ ಭಾಸ್ಕರ್ ತಂದೆತಾಯಿಗಳು ಕೆ.ಆರ್.ಪೇಟೆ ಪೊಲೀಸ್ ಠಾಣೆಯ ಮುಂದೆ ಊರಿನ ಗ್ರಾಮಸ್ಥರೊಡಗೂಡಿ ಫೆಬ್ರವರಿ 17ರಂದು ಧರಣಿ ನಡೆಸಿ, ಮುತ್ತಿಗೆ ಹಾಕಿ ತನ್ನ ಮಗನನ್ನು ಹುಡುಕಿ ಕೊಡಲು ಆಗ್ರಹಿಸಿದ್ದಾರೆ. ಬುದ್ಧಿವಂತ ಧನಂಜಯ, ತಮ್ಮ ಜೊತೆ ಬಂದಿದ್ದ ಭಾಸ್ಕರ್ ಕಾಣೆಯಾಗಿದ್ದಾನೆಂದು ಇದೇ ಠಾಣೆಯಲ್ಲಿ ದೂರು ದಾಖಲಿಸಿ ಎಡವಟ್ಟು ಮಾಡಿಕೊಂಡಿದ್ದಾನೆ.

ಇದು ಪತ್ರಿಕೆಗಳಲ್ಲಿ ಸುದ್ದಿಯಾಗಿ ಪೊಲೀಸರ ಮೇಲೆ ಹಿರಿಯ ಅಧಿಕಾರಿಗಳಿಂದ ಒತ್ತಡ ಶುರುವಾಗಿದ್ದೇ ತಡ ಬಿಸಿ ರಕ್ತದ ಹುಡುಗನಾಗಿರುವ ಎಡಬಿಡಂಗಿ ಪಿಎಸ್ಐ ನಾಗೇಶ್, ತಿಮ್ಮೇಗೌಡನ ಮಗ ಧನಂಜಯ, ಕಾರ್ಮಿಕರಾದ ಇಂದ್ರೇಶ, ರಮೇಶ, ಕರಿಗೌಡರನ್ನು ಎತ್ತಾಕ್ಕಿಕೊಂಡು ಬಂದು ರುಬ್ಬಿದ್ದಾನೆ. ಬರಿಮೈ ಮೇಲೆ ಲಾಠಿ ಏಟು ಬೀಳುತ್ತಿದ್ದಂತೆಯೇ ಟ್ರ್ಯಾಕ್ಟರ್ ಚಾಲಕ ರಮೇಶ್ ನಿಧಾನವಾಗಿ ನಿಜಸಂಗತಿಯನ್ನು ಬಾಯಿ ಬಿಟ್ಟಿದ್ದಾನೆ. ರಾತ್ರಿ ಹೊತ್ತು ಮರಳು ತುಂಬುವಾಗ ಭಾಸ್ಕರ್ ಸತ್ತಿದ್ದು ನಿಜ. ಅದನ್ನು ಮುಚ್ಚಿ ಹಾಕಲು ಮತ್ತು ಪರಿಹಾರ ಕೊಡುವುದರಿಂದ ಬಚಾವಾಗಲು ಧನಂಜಯ ಕುಮಾರ್ ಅಕ್ಕಿಹೆಬ್ಬಾಳಿನಲ್ಲಿ ಭಾಸ್ಕರನನ್ನು ಹೂತುಹಾಕಿದ್ದಾರೆಂದು ಬಾಯಿ ಬಿಟ್ಟ.



ಅದನ್ನು ನಂಬಿದ ಎಸ್ಐ ನಾಗೇಶ್ ಸ್ಥಳ ಮಹಜರ್ ನಡೆಸಲು ಈ ಆರೋಪಿಗಳನ್ನು ಕರೆದುಕೊಂಡು ಹೋದರೆ ಅಲ್ಲಿ ಭಾಸ್ಕರನ ದೇಹ ನಾಪತ್ತೆ! ಒಂದು ಕಡೆ ಮೃತನ ಮನೆಯವರ ರೋದನ, ಇನ್ನೊಂದು ಕಡೆ ಮೇಲಧಿಕಾರಿಗಳ ಒತ್ತಡ, ಮತ್ತೊಂದು ಕಡೆ ಇವರು ಬೇರೆ ಬಾಯಿಬಿಡುತ್ತಿಲ್ಲ. ಪಿತ್ತ ನೆತ್ತಿಗೇರಿದ್ದೇ ತಡ ಅವರನ್ನೆಲ್ಲಾ ಮತ್ತೆ ಅಕ್ಕಿಹೆಬ್ಬಾಳು ಹೊರಠಾಣೆಗೆ ಎಳೆದೊಯ್ದ ನಾಗೇಶ್ ಅನ್ನ ನೀರು ನೀಡದೆ ರಾತ್ರಿ ಪೂರಾ ವರ್ಕ್ ಮಾಡಿದ್ದಾನೆ. ಪರಿಣಾಮ: ಬೆಳಗಾಗುವ ಹೊತ್ತಿಗೆ ಧನಂಜಯ ಹೆಣವಾದ. ಪೇಚಿಗೆ ಸಿಕ್ಕಿಕೊಂಡ ನಾಗೇಶ್, ಧನಂಜಯ ಹೆಣವನ್ನು ಅಕ್ಕಿಹೆಬ್ಬಾಳು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆಗೆದುಕೊಂಡು ಹೋಗಿ ಪೋಸ್ಟ್‌ಮಾರ್ಟಮ್ ರೂಂನಲ್ಲಿ ಅದೇ ನಡೆದ ರಸ್ತೆ ಅಪಘಾತದಲ್ಲಿ ಮಡಿದವರ ಮಧ್ಯೆ ಧನಂಜಯ ಕುಮಾರ್‌ನ ಶವವನ್ನು ಇಟ್ಟು ಅಪಘಾತದಲ್ಲಿ ಸತ್ತ ಎಂದು ಬಿಂಬಿಸಲು ಪ್ರಯ...

ಪೊಲೀಸರೇ ಪರಾರಿ

ತಿರುಮಲಾಪುರದ ಭಾಸ್ಕರನ ಕೊಲೆ ಪ್ರಕರಣ... ಆರೋಪಿ ಧನಂಜಯ ಕುಮಾರನನ್ನು ಯಾವಾಗ ಯಮನ ಪಾದಕ್ಕೆ ಸೇರಿಸಿಬಿಟ್ಟರೋ ಅವಾಗಿನಿಂದ... ಪೊಲೀಸರಿಗೆ ಗ್ರಹಚಾರ ಶುರುವಾಗಿದೆ. ಲಾಕಪ್... ಸುದ್ದಿ ಹಬ್ಬುತ್ತಿದ್ದಂತೆ ಕೆ.ಆರ್.ಪೇಟೆಯಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಇದರಿಂದ ಎಚ್ಚೆತ್ತುಕೊಂಡ ನೂತನ ಎಸ್.ಪಿ. ಕೌಶಲೇಂದ್ರ ಕುಮಾರ್, ಮೈಸೂರು ವಿಭಾಗದ ಐ.ಜಿ.ಗಾಂವ... ಮೂಲಕ ಪಿಎಸ್ಐ ನಾಗೇಶ್, ಮುಖ್ಯ ಪೇದೆ ಬಸವಣ್ಣಯ್ಯ ಮತ್ತು ಪೇದೆಗಳಾದ ಗೋವಿಂದಯ್ಯ... ಕುಮಾರ್, ನಾಗೇಗೌಡ, ಜೀಪ್ ಡ್ರೈವರ್ ರವಿಯನ್ನು ಅಮಾನತ್ತುಗೊಳಿಸಿದ್ದಲ್ಲದೇ ಸಿಓಡಿ ತನಿಖೆಗೂ ಆದೇಶಿಸಿದರು. ಈ ಪೊಲೀಸರ ಮೇ... ಐ.ಪಿ.ಸಿ. 302 ಕೊಲೆ ಆರೋಪದ ಕೇಸನ್ನೂ ಹಾಕಲಾಗಿದೆ. ಇಷ್ಟು ದಿನ ಆರೋಪಿಗಳು ನಾಪತ್ತೆಯಾದರೆ ಅವರನ್ನು ಪತ್ತೆ ಹಚ್ಚಿ ಎಳೆದುತರುತ್ತಿದ್ದ ಪೊಲೀಸರೇ ಈಗ ನಾಪತ್ತೆಯಾಗಿದ್ದಾರೆ.

ಒಂದೆಡೆ ಟ್ರ್ಯಾಕ್ಟರ್ ಡ್ರೈವರ್ ರಮೇಶನ ಪ್ರಕಾರ ಭಾಸ್ಕರ್ ತೀರಿಕೊಂಡಿದ್ದಾನಾದರೂ ಇದುವರೆಗೂ ಆತನ ದೇಹ ಸಿಕ್ಕಿಲ್ಲ. ಇನ್ನೊಂದೆಡೆ ಭಾಸ್ಕರನ ಬಗ್ಗೆ ತಿಳಿಯಲು ಹೋಗಿ ಮುಖ್ಯ ಆರೋಪಿ ಧನಂಜಯನನ್ನೇ ಪೊಲೀಸರು ಯಮನ ಪಾದಕ್ಕೆ ಸೇರಿಸಿದ್ದಾರೆ. ಮತ್ತೊಂದೆಡೆ ಧನಂಜಯನನ್ನು ಕೊಂದ ಆರೋಪಿ ಎಸ್ಸೈ ನಾಗೇಶ್ ಸಸ್ಪೆಂಡ್ ಆಗಿ ಈಗ ತಲೆಮರೆಸಿಕೊಂಡಿದ್ದಾನೆ.

ಇದೀಗ ತಾನೇ ಬಂದಿರುವ ನೂತನ ಎಸ್ಪಿ ಕೌಶಲೇಂದ್ರ ಕುಮಾರ್ ಇಡೀ ಪ್ರಕರಣವನ್ನು ಭೇದಿಸಬೇ...

ಇದು ಕೆ.ಆರ್.ಪೇಟೆಯ ಪೊಲೀಸ್ ಸ್ಟೋರಿ.

■ ಲಕ್ಷ್ಮಣ್ ಚೀರನಹ...



ಮಂಡ್ಯ: ಮೃತ್ಯುಕೂಪವಾದ ಮೆಡಿಕಲ್ ಕಾಲೇಜು!

ಜೀವಗಳನ್ನು ಉಳಿಸಬೇಕಿದ್ದ ಮಂಡ್ಯ ಮೆಡಿಕಲ್ ಕಾಲೇಜು (ಮಿಮ್ಸ್) ಜೀವ ತೆಗೆಯುವ ಮೃತ್ಯುಕೂಪವಾಗಿ ಹೊರಹೊಮ್ಮಿದೆ. ಜಿಲ್ಲಾ ಆಸ್ಪತ್ರೆಗೆ ಮೆಡಿಕಲ್ ಕಾಲೇಜು ನೀಡಿದಾಗ ರೋಗಿಗಳಿಗೆ ಉತ್ತಮ ಔಷಧಿ, ಉತ್ತಮ ವೈದ್ಯರ ಸೇವೆ ದೊರೆಯುತ್ತದೆಂದು ಜನ ಆಶೆ ಇಟ್ಟುಕೊಂಡಿದ್ದರು. ಆದರೆ ವಿದ್ಯಾರ್ಥಿಗಳಿಗೆ ಪಾಠ ಹೇಳಿ ವೈದ್ಯರನ್ನಾಗಿ ತಯಾರು ಮಾಡಬೇಕಾಗಿದ್ದ ಅಸೋಸಿಯೇಟ್ ಪ್ರೊಫೆಸರ್ ಡಾ.ಉಪೇಂದ್ರಕುಮಾರ್‌ರಂಥವರು ಅದೇನು ಜೀವ ಉಳಿಸುವ ಪಾಠ ಹೇಳಿಕೊಡುತ್ತಿದ್ದಾರೋ ಅಥವಾ ಲಂಚ ತೆಗೆದುಕೊಂಡು ಜೀವ ತೆಗೆಯುವ ಪಾಠ ಹೇಳಿಕೊಡುತ್ತಿದ್ದಾರೋ ಗೊತ್ತಿಲ್ಲ, ಅಂತೂ ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಹೆಣಗಳ ಮೇಲೆ ಹೆಣಗಳು ಉರುಳುತ್ತಿವೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಮೊನ್ನೆ ರೋಗಿಯ ಕಡೆಯಿಂದ 25,000 ಲಂಚ ಕಿತ್ತುಕೊಂಡಿದ್ದೂ ಅಲ್ಲದೇ ಒಂದು ಚಿಕ್ಕ ರೋಗಕ್ಕೆ ಸರಿಯಾದ ಚಿಕಿತ್ಸೆ ನೀಡದೆ ರೋಗಿಯ ಜೀವವನ್ನೂ ಕಿತ್ತುಕೊಂಡಿದ್ದಾರೆ.

ಜನರ ಪ್ರಾಣಕ್ಕಿಲ್ಲಿ ಬೆಲೆ ಇಲ್ಲ

ಹೌದು, ಈ ಮಾತು ಮಿಮ್ಸ್‌ನಲ್ಲಿ ಅಕ್ಷರಶಃ ಸತ್ಯ, ಬೆರಳೆಣಿಕೆಯಷ್ಟು ಕೆಲವು ಪ್ರಾಮಾಣಿಕ ವೈದ್ಯರನ್ನು ಬಿಟ್ಟರೆ ಇಡೀ ಮಿಮ್ಸ್‌ನಲ್ಲಿ ರೋಗಿಗಳನ್ನು ಸದಾ ಹಣಕ್ಕಾಗಿ ಪೀಡಿಸುವ ಡಾಕ್ಟರ್‌ಗಳೇ ತುಂಬಿಕೊಂಡಿದ್ದಾರೆ. ಹಿಂದೆ ಜಿಲ್ಲಾಸ್ಪತ್ರೆ ಅಂತ ಮಾತ್ರ ಇದ್ದಾಗ ಕೇವಲ 25 ಜನ ಡಾಕ್ಟರುಗಳಿದ್ದಾಗಲೇ ಚೆನ್ನಾಗಿತ್ತು, ವೈದ್ಯರು ಮಾನ, ಮರ್ಯಾದೆಗೆ ಅಂಜಿ ಕೆಲಸ ಮಾಡುತ್ತಿದ್ದರು. ಆದರೆ ಅದಕ್ಕೆ ಮೆಡಿಕಲ್ ಕಾಲೇಜು ಆದಮೇಲೆ ಸಂಬಳ ಹೆಚ್ಚಾಯಿತು. ಹಾಗೆಯೇ ನಿರ್ಲಕ್ಷ್ಯತೆಯೂ ಹೆಚ್ಚಾಗುತ್ತಲೇ ಹೋಯಿತು. ಹಾಗಾಗಿಯೇ ಈ ಡಾ.ಉಪೇಂದ್ರಕುಮಾರ್‌ರಂತಹ ವೈದ್ಯ ವೃತ್ತಿಯ ವ್ಯಾಪಾರಗಾರ, ಬಡಜನರ ಪೀಡಕರಂತಿರುವ ವೈದ್ಯರುಗಳ ದೆಸೆಯಿಂದ ಅದೆಷ್ಟೋ ಸಣ್ಣಪುಟ್ಟ ರೋಗಿಗಳು ಸಾಲುಸಾಲಾಗಿ ಶಿವನ ಪಾದ ಸೇರಿಕೊಂಡಿದ್ದಾರೆ.

ಮೊನ್ನೆ ನಡೆದ ಒಂದು ಪ್ರಕರಣವನ್ನೇ ನೋಡಿ. ಪಾಂಡವಪುರ ತಾಲೂಕಿನ ಲಕ್ಷ್ಮೀಸಾಗರದ ಲಕ್ಕೇಗೌಡ ಎಂಬ ರೈತ ಜನವರಿ 28ರಂದು ಹರ್ನಿಯಾ ಮತ್ತು ಪ್ರಾಸ್ಟೇಟ್ ಗ್ರಂಥಿಯ ಕಾಯಿಲೆಗೆ ಸಂಬಂಧಿಸಿದಂತೆ ಆಸ್ಪತ್ರೆಗೆ ದಾಖಲಾಗಿದ್ದ. ರೋಗಿಯನ್ನು ನೋಡಿದ ಮಿಮ್ಸ್‌ನ ಅಸೋಸಿಯೇಟ್ ಪ್ರೊಫೆಸರ್ ಡಾ.ಉಪೇಂದ್ರಕುಮಾರ್ ಆಪರೇಷನ್‌ಗೆ 15 ಸಾವಿರ ಲಂಚ ಪಡೆದು ಫೆಬ್ರವರಿ 6ರಂದು TURP ಎಂಬ ಆಪರೇಷನ್ ಮಾಡಿ ಬೆಂಗಳೂರಿಗೆ ಹೊರಟುಬಿಟ್ಟಿದ್ದಾರೆ. ಆದರೆ ಆಪರೇಷನ್ ವಿಫಲವಾಗಿದೆ. ಅದನ್ನು ಸರಿಪಡಿಸಲು ಮತ್ತೆ 5 ಸಾವಿರ ಲಂಚ ಪಡೆದು, ಫೆಬ್ರವರಿ 9ರಂದು ಮತ್ತೆ ಆಪರೇಷನ್ ಮಾಡಿ ಬೆಂಗಳೂರಿಗೆ ಹೊರಟಿದ್ದಾರೆ. ಅದಾದ ನಂತರ ರೋಗಿಯನ್ನು 5 ದಿನಗಳು ಕಳೆದರೂ ನೋಡಿಲ್ಲ, ನಂತರ ಸೋಂಕು ಶುರುವಾಗಿ ಅದು ಇಡೀ ದೇಹಕ್ಕೆಲ್ಲಾ ನಂಜಾಗಿ ಪರಿವರ್ತಿತವಾಗಿದೆ.



ತಾಯಿಯ

ಸರ್ಜರಿ ವಿಭಾಗದ ಡಾ.ಗೋಪಾಲಕೃಷ್ಣ ಎಂಬ ಮತ್ತೊಬ್ಬ ವೈದ್ಯ ಮಹಾಶಯರು ಉಪೇಂದ್ರಕುಮಾರ್‌ಗೆ ಏಜೆಂಟ್ ಆಗಿ ಲಂಚ ಪಡೆದು ಒಪ್ಪಿಸಿದ್ದಾಗಿ ಹೇಳಲಾಗುತ್ತಿದೆ. ಆತನೂ ರೋಗಿಯನ್ನು ಜವಾಬ್ದಾರಿಯಿಂದ ನೋಡಿಕೊಂಡಿಲ್ಲ, ರೋಗಿಗೆ ತೀವ್ರ ತರಹದ ಯಾತನೆ ಶುರುವಾಗಿದೆ. ಈ ಬಗ್ಗೆ ಉಪೇಂದ್ರಕುಮಾರ್‌ಗೆ ಫೋನ್ ಮಾಡಿ ತಿಳಿಸಿದಾಗಲೂ ಗಮನಹರಿಸಿಲ್ಲ, ತನಗೆ ಬರಬೇಕಿದ್ದ ಲಂಚ ಬಂದಾಯಿತು, ರೋಗಿ ಬದುಕಿದ್ದರೇನು ಸತ್ತರೇನು ಎಂಬ ಉಡಾಫೆ



ಇವನದ್ದು. ಇಷ್ಟರಲ್ಲಿ ಲಕ್ಕೇಗೌಡರಿಗೆ ಕಿಡ್ನಿ ಫೈಲ್ಯೂ... ಆಗಿದೆ. ರೋಗಿ ಅಳಿವು-ಉಳಿವುಗಳ ನಡ... ಹೋರಾಡುತ್ತಿದ್ದಾಗ ಅವರನ್ನು ಬೆಂಗಳೂರಿನ ವಿಕ್ಟೋರಿ... ಆವರಣದಲ್ಲಿರುವ ನೆಫ್ರೋ ಯೂರಾಲಜಿ ಆಸ್ಪತ್ರೆಗೆ ತ... ಉಪೇಂದ್ರಕುಮಾರ್ ಹೇಳಿದ್ದಾನೆ. ಹಾಗೆಯೇ ಮಾಡಲಾ... ವಾಸ್ತವದಲ್ಲಿ ರೋಗಿಗೆ ಆಪರೇಷನ್ ಮಾಡಿದ್ದ... ಓಪನ್ ಆಗಿಬಿಟ್ಟಿದೆ. ಅದೇ ರಾತ್ರಿಯೇ ... ಗೌಡರು ಅಸುನೀಗಿದ್ದಾರೆ. ಇದು ... ಉಪೇಂದ್ರಕುಮಾರ್ ಮತ್ತು ಡಾ.ಗೋಪಾಲ... ಕೃಷ್ಣ ಅವರು ಮಾಡಿದ ಕೊಲೆ ಅ... ಇನ್ನೇನೆನ್ನಬೇಕು?

ಈ ಉಪೇಂದ್ರಕುಮಾರ್ ಹಿ... ಮಂಡ್ಯದ ಅಸಿಸ್ಟೆಂಟ್ ಕಮೀಷನರ್ ... ರವರ ತಾತನಿಗೂ ಆಪರೇಷನ್ ಮಾಡಿದ್ದ... ಜಿಲ್ಲಾ ಪಂಚಾಯ್ತಿ ಸದಸ್ಯೆ ಸುನಿ... ರಾಮೇಗೌಡರ ತಾಯಿಗೂ ಆಪರೇ... ಮಾಡಿದ್ದರು. ಅವೆರಡೂ ವಿಫಲ... ಅವರನ್ನೆಲ್ಲಾ ನಂತರ ಬೇರೆ ಆಸ್ಪ... ಕರೆದುಕೊಂಡು ಹೋಗಿ ಚಿಕಿತ್ಸೆ ಕೊ... ಬದುಕಿಸಿಕೊಂಡರು. ಇಲ್ಲೇ ಉಳಿದಿ... ಅವರಿಗೂ ಲಕ್ಕೇಗೌಡರಿಗಾದ ಗತಿ... ಆಗಿರುತ್ತಿತ್ತು, ಈಗ ಸುನೀತಾ ರಾಮೇಗೌ... ವಿಚಾರದಲ್ಲಿ ಉಪೇಂದ್ರಕುಮಾರ್ ವ...

▶▶


ಪೇಜಾವರ ಶ್ರೀಗಳ ವೋಟ್‌ಬ್ಯಾಂಕ್ ರಾಜಕೀಯ

ಪೇಜಾವರ ಶ್ರೀಗಳ ನೇತೃತ್ವದಲ್ಲಿ ಇದೇ ಮಾರ್ಚ್ ...ಂದು ಮಂಗಳೂರಿನಲ್ಲಿ ಮತ್ತೊಮ್ಮೆ ಹಿಂದೂ ...ಜೋತ್ಸವ ನಡೆಯಲಿದೆ. ಬಾಬಾಬುಡನ್‌ಗಿರಿಯಲ್ಲಿ ...ಮಾಹವನಗಳ ಹಾಗೆ ಈ ಹಿಂದೂ ಸಮಾಜೋತ್ಸ ... ಸಂಘ ಪರಿವಾರ ತನ್ನ ರಾಜಕೀಯ ಉದ್ದೇಶಗಳಿ...ಷರ ಇತ್ತೀಚೆಗೆ ಚಾಲ್ತಿಗೆ ತಂದಿರುವ ಆಚರಣೆ. ...4-5 ವರ್ಷಗಳಲ್ಲಿ ಎಲ್ಲಿಯೂ ಈ ಉತ್ಸವ ನಡೆದಿಲ್ಲ.

"ಚುನಾವಣೆಗಳು ಹತ್ತಿರ ಬಂದಿರುವುದರಿಂದ ...ಶಪೂರ್ವಕವಾಗಿ ಈ ಸಮಾಜೋತ್ಸವವನ್ನು ...ೀಜಿಸಲಾಗಿದೆ" ಎಂದು ಸ್ವತಃ ಪೇಜಾವರ ಶ್ರೀಗಳೇ ...ಳೂರಿನಲ್ಲಿ ಈ ಪ್ರಯುಕ್ತ ಕರೆಯಲಾಗಿದ್ದ ಪತ್ರಿಕಾ ...ಷ್ಠಿಯಲ್ಲಿ ತಿಳಿಸಿದ್ದಾರೆ. ತಮ್ಮ ಉದ್ದೇಶ ಹಿಂದೂ ...ಟ್ ಬ್ಯಾಂಕ್ ನಿರ್ಮಿಸುವುದು ಎಂದೂ ಅವರು ...ಚ್ಚುಮರೆಯಿಲ್ಲದೆ ಬಹಿರಂಗಪಡಿಸಿದ್ದಾರೆ. ಈ ದಿಸೆಯಲ್ಲಿ ...ೀಯ ಪಕ್ಷಗಳಿಗೆ ಸೂಕ್ತಮಾರ್ಗದರ್ಶನ ಮಾಡುವುದು ...ಮಾವೇಶದ ಉದ್ದೇಶವಂತೆ. ಪೇಜಾವರ ಶ್ರೀಗಳು, ... ಎಲ್ಲ ರಾಜಕೀಯ ಪಕ್ಷಗಳನ್ನೂ ಮಂಗಳೂರಿನ ...ೂ ಸಮಾಜೋತ್ಸವಕ್ಕೆ ಆಹ್ವಾನಿಸುವುದಾಗಿ ಹೇಳಿದ್ದಾರೆ.

... ಬರೇ ಬಾಯಿ ಉಪಚಾರದ ಮಾತು. ಬಜೆಪಿ ...ತುಪಡಿಸಿ ಇತರ ಯಾವ ರಾಜಕೀಯ ಪಕ್ಷವೂ ...ಹಿಂದೂ ಸಮಾಜೋತ್ಸವದಲ್ಲಿ ಅಧಿಕೃತವಾಗಿ ...ವಹಿಸುವುದಿಲ್ಲ ಎಂದು ಅವರಿಗೆ ಗೊತ್ತಿದೆ. ಪೇಜಾವರ ...ು ಕಟ್ಟಲು ಹೊರಟಿರುವ ಹಿಂದೂ ವೋಟ್‌ಬ್ಯಾಂಕ್ ...ಗೆ ಮಾತ್ರ ಈ ಯುವಕೆಚ್ಚಲು ಎಂಬ ಸತ್ಯ ...ಪಿಯೇತರ ರಾಜಕೀಯ ಪಕ್ಷಗಳಿಗೂ ಗೊತ್ತಿದೆ. ...ನ ಮಾಧ್ವಮಠವೊಂದರ ಯತಿ ಎನ್ನುವ ನೆಲೆಯಲ್ಲಿ ...ವರ ಶ್ರೀಗಳಿಗೆ ಈ ಸಮಾಜದಲ್ಲಿ ವಿಶೇಷವಾದ ...ವವಿದೆ. ಹೀಗಿರುತ್ತ ಬರಲಿರುವ ಲೋಕಸಭಾ ಚುನಾ... ಸಂಬಂಧಿಸಿದಂತೆ ಅವರು ಜನರನ್ನು ಪ್ರಭಾವ...ಿಸಲು ಯತ್ನಿಸುವುದು ಸರಿಯೆ ಎಂಬ ಪ್ರಶ್ನೆಯನ್ನು ...ರ್ವಣಾ ಆಯೋಗ ಪರಿಶೀಲಿಸಬೇಕಾಗಿದೆ. ಕಳೆದ ...ನಸಭಾ ಚುನಾವಣೆಗಳ ಸಂದರ್ಭದಲ್ಲಿ, ರಾಜಕೀ...ತರ ಸಂಘಟನೆಯಾಗಿರುವ ಕೋಮು ಸೌಹಾರ್ದ ...ಕೆಗೆ, ಪೋಸ್ಟರುಗಳನ್ನು ಅಂಟಿಸಲು ಕೂಡ ಚುನಾವಣಾ ...ೀಗ ಅನುಮತಿ ನೀಡಿರಲಿಲ್ಲ. ಆದರೆ ಈಗ ಬದಲಾದ ...ತಿಯಲ್ಲಿ ಸಂಘ ಪರಿವಾರಕ್ಕೆ ಎಲ್ಲ ನೀತಿ ನಿಯಮ...ದಲೂ ಸಂಪೂರ್ಣ ವಿನಾಯಿತಿ ಇರುವುದರಿಂದ ...ಗಳೂರಿನ ಹಿಂದೂ ಸಮಾಜೋತ್ಸವ ನಿರ್ವಿಘ್ನ...ಯೇ ನಡೆಯಬಹುದು.

...ಪೇಜಾವರ ಶ್ರೀಗಳ ಪ್ರಕಾರ ಹಿಂದೂ ವೋಟ್‌ಬ್ಯಾಂಕ್



ನಿರ್ಮಾಣದ ಜೊತೆಗೆ ಈ ಹಿಂದೂ ಸಮಾಜೋತ್ಸವದ ಕೆಲವು ಪ್ರಮುಖ ಆಗ್ರಹಗಳು ಹೀಗಿವೆ:

1. ರಾಮಜನ್ಮಭೂಮಿಯಲ್ಲಿ ಮಂದಿರ ನಿರ್ಮಾಣ
2. ಗಂಗಾಮಾತೆ, ಗೋಮಾತೆ ಮತ್ತು ರಾಮಸೇತುವಿನ ರಕ್ಷಣೆ
3. ಸಮಾನ ನಾಗರಿಕ ಸಂಹಿತೆಯ ಜಾರಿ
4. ಮತಾಂತರ ನಿಷೇಧ ಕಾನೂನು
5. ಭಯೋತ್ಪಾದನೆ ನಿರ್ಮೂಲನ
6. ವಿದೇಶೀಯರ ಅಕ್ರಮ ಪ್ರವೇಶಕ್ಕೆ ನಿರ್ಬಂಧ
7. ಹಿಂದೂ ಸಂಸ್ಕೃತಿಯ ಮೇಲೆ ಮಾಧ್ಯಮಗಳ ಮುಖಾಂತರ ಹಾಗೂ ವಿವಿಧ ರೀತಿ ನಡೆಯುತ್ತಿರುವ ಪಾಶ್ಚಾತ್ಯ ಸಂಸ್ಕೃತಿ ಆಕ್ರಮಣಕ್ಕೆ ನಿರ್ಬಂಧ.
8. ಶಿಕ್ಷಣದಲ್ಲಿ ಹಿಂದೂ ಸಂಸ್ಕೃತಿಯ ಅಳವಡಿಕೆ.

ತಮ್ಮ ಈ ಆಗ್ರಹಗಳ ಮುಖಾಂತರ ಪೇಜಾವರ ಶ್ರೀಗಳು ನಮ್ಮ ಮುಂದೆ ಬಗೆಬಗೆಯ ಅಕ್ರಮಣಗಳಿಗೆ ಒಳಗಾಗಿರುವ ಭಾರತದ ಒಂದು ಚಿತ್ರವನ್ನು ಇಟ್ಟಿದ್ದಾರೆ. ಈ ಆಕ್ರಮಣ ಕೇವಲ ವಿದೇಶಿ ಮನುಷ್ಯರಿಂದ ಮಾತ್ರ ನಡೆಯುತ್ತಿರುವುದು ಅಲ್ಲ; ವಿದೇಶಿ ವಿಚಾರಗಳೂ ಆದರಲ್ಲಿ ಪಾಲುಗೊಂಡಿವೆ. ಪೇಜಾವರ ಶ್ರೀಗಳ ಪ್ರಕಾರ ಭಯೋತ್ಪಾದಕರು (ಮುಸ್ಲಿಮರು ಎಂದು ಓದಿಕೊಳ್ಳಿ), ಬಾಂಗ್ಲಾ ದೇಶೀಯ ನುಸುಳುಗಾರರು (ಇವರನ್ನೂ ಮುಸ್ಲಿಮರು ಎಂದು ಓದಿಕೊಳ್ಳಿ), ಮತ್ತು ಮತಾಂತರಿಗಳ (ಕ್ರೈಸ್ತರು ಎಂದು ಓದಿಕೊಳ್ಳಿ), ಜೊತೆಗೆ ಪಾಶ್ಚಿಮಾತ್ಯ ಸಂಸ್ಕೃತಿ ಕೂಡ ಭಾರತವನ್ನು ಭಯಭೀತಗೊಳಿಸಿದೆ. ಆದರೆ ಸೂಕ್ಷ್ಮವಾಗಿ ನೋಡಿದರೆ, ಪೇಜಾವರ ಶ್ರೀಗಳ ಈ ವಿಶ್ಲೇಷಣೆ "ಮುಸ್ಲಿಮರು, ಕ್ರೈಸ್ತರು ಮತ್ತು ಕಮ್ಯುನಿಸ್ಟರು ದೇಶದ ವೈರಿಗಳು" ಎಂಬ ಆರ್‌ಎಸ್‌ಎಸ್‌ನ ಮಾಜಿ ಸರಸಂಘ ಚಾಲಕ ಗೋಳ್ವಾಲ್ಕರ್‌ರ ಹೇಳಿಕೆಯದ್ದೇ ನವೀಕೃತ ರೂಪ. ಪೇಜಾವರ ಶ್ರೀಗಳಿಗೆ ಎತ್ತ ಮುಖ ತಿರುಗಿಸಿದರೂ ಭಯೋತ್ಪಾದಕರು ಮತ್ತು ಮತಾಂತರಿಗಳೇ ಕಾಣಿಸುತ್ತಾರೆ. ಈ ನಾಡಿನ ಹಸಿದವರನ್ನು, ನಿರುದ್ಯೋಗಿಗಳನ್ನು, ದಲಿತರನ್ನು ಯಾಕೆ ಅವರು ಒಮ್ಮೆಯಾದರೂ ಕಣ್ಣೆತ್ತಿ ನೋಡಬಾರದು? ಇವರಲ್ಲೂ ಬಹುಪಾಲು ಜನ ಹಿಂದೂಗಳೇ ಹೊರತು "ಅನ್ಯಮತೀಯ"ರಲ್ಲ. ಹಿಂದೂ ಸಮಾಜೋತ್ಸವದ ಆಗ್ರಹಗಳ ಪಟ್ಟಿಯಲ್ಲಿ ಈ ಬಡ ಹಿಂದೂಗಳ ಪ್ರಸ್ತಾಪವೇ ಇಲ್ಲ! ಭೂಮಿಯ ಹಂಚಿಕೆ, ಸಂಪತ್ತು ಮತ್ತು ಅವಕಾಶಗಳ ಹಂಚಿಕೆ, ಸಮಾನತೆ–ಪೇಜಾವರ ಶ್ರೀಗಳ ಪ್ರಕಾರ ಇದು ಯಾವುದೂ ಹಿಂದೂಗಳ ಕಾಳಜಿಯಲ್ಲ.

ಪೇಜಾವರ ಶ್ರೀಗಳು ಪಾಶ್ಚಿಮಾತ್ಯ ಸಂಸ್ಕೃತಿಯ ಆಕ್ರಮಣ ಎಂದು ಕರೆದಿರುವ ಸಾಂಸ್ಕೃತಿಕ ಪ್ರಕ್ರಿಯೆ ಒಂದು ಆಕ್ರಮಣವೋ ಅಥವಾ ನಾವೇ ಅದನ್ನು ಕೈಯಾರೆ ಸ್ವಾಗತಿಸಿ ಬರಮಾಡಿಕೊಂಡದ್ದೋ ಎಂಬುದು ಚರ್ಚಾಸ್ಪದವಾದ ವಿಷಯ. ಅದು ಆಕ್ರಮಣವೆಂದೇ ಭಾವಿಸಿದರೂ ಪಾಶ್ಚಿಮಾತ್ಯ ಸಂಸ್ಕೃತಿಯ ಬಗ್ಗೆ ಇಷ್ಟು ಆತಂಕಿತರಾಗಿರುವ ಪೇಜಾವರ ಶ್ರೀಗಳಿಗೆ ಅಮೆರಿಕದ ಸಾಮ್ರಾಜ್ಯಶಾಹಿಗಳ ಆಕ್ರಮಣ ಒಂದು ಸಮಸ್ಯೆಯೇ ಅಲ್ಲ!

ಪೇಜಾವರ ಶ್ರೀಗಳು ಬೆಂಬಲಿಸುತ್ತಿರುವ ಬಜೆಪಿಗೂ ಅಮೆರಿಕದ ಸಾಮ್ರಾಜ್ಯಶಾಹಿ ಯಾವತ್ತೂ ಒಂದು ಸಮಸ್ಯೆಯಾಗಿ ಕಂಡಿರಲಿಲ್ಲ. ಅಷ್ಟು ಮಾತ್ರವಲ್ಲ, ಬಜೆಪಿ ಮತ್ತು ಅದರ ಹಿಂದಿನ ಅವತಾರವಾಗಿದ್ದ ಜನಸಂಘಕ್ಕೆ ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿಗಳ ವಿರುದ್ಧ ನಡೆದ ಹೋರಾಟಗಳಲ್ಲಿ ಭಾಗವಹಿಸಿದ ದಾಖಲೆಯೇ ಇಲ್ಲ. ಲಾಗಾಯ್ತಿನಿಂದಲೂ ಬಜೆಪಿ, ಅಮೆರಿಕ, ಪಶ್ಚಿಮ ಯುರೋಪ್ ಮತ್ತು ಇಸ್ರೇಲ್‌ಗಳ ಬಾಲಬಡುಕ ಪಕ್ಷ. ಅಮೆರಿಕದ ಜೊತೆ ರಕ್ಷಣಾ ಒಪ್ಪಂದವನ್ನು ಪ್ರತಿಪಾದಿಸಿದ ಭಾರತದ ಏಕೈಕ ಪಕ್ಷವೆಂದರೆ ಬಜೆಪಿ. ಹಾಗೆಯೇ ಪಾಶ್ಚಿಮಾತ್ಯ ಬಂಡವಾಳವನ್ನು ದೇಶದ ಒಳಗೆ ಬರಮಾಡಿಕೊಂಡ ಚರಿತ್ರೆ ಸಹ ಬಜೆಪಿಗೆ ಇದೆ. ಬಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಮತ್ತು ಕಾಂಗ್ರೆಸ್ ನೇತೃತ್ವದ ಹಾಲಿ ಯುಪಿಎ ಸರ್ಕಾರಗಳು ಅನುಸರಿಸಿದ ಈ ಬಾಲಬಡುಕ ಆರ್ಥಿಕ ಧೋರಣೆಯಿಂದಾಗಿ ದೇಶದಲ್ಲಿ ಲಕ್ಷಾಂತರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; ನೇಕಾರರು ನಿರುದ್ಯೋಗಿಗಳಾಗಿದ್ದಾರೆ; ದೇಶಾದ್ಯಂತ ಸಣ್ಣ ಕೈಗಾರಿಕೆಗಳು ದಿವಾಳಿ ಎದ್ದಿದೆ. ಶಿಕ್ಷಣ, ಆರೋಗ್ಯ, ವಸತಿ ಮುಂತಾದ ಮೂಲಭೂತ ಸೌಲಭ್ಯಗಳ ಲಭ್ಯತೆಯಲ್ಲಿ ಭಾರತ, ಆಫ್ರಿಕದ ಬಡದೇಶಗಳಿಗಿಂತಲೂ ನಿಕೃಷ್ಟ ಸ್ಥಿತಿಯಲ್ಲಿದೆ. ಆದರೆ ಪೇಜಾವರ ಶ್ರೀಗಳು ಮಾತ್ರ ಪಾಶ್ಚಿಮಾತ್ಯ ಬಂಡವಾಳದ ಈ ತೊತ್ತಳ ತುಳಿತವನ್ನು ಕಡೆಗಣಿಸಿ, "ಪಾಶ್ಚಿಮಾತ್ಯ ಸಂಸ್ಕೃತಿಯ ಆಕ್ರಮಣ"ವೆಂಬ ಬೆದರುಬೊಂಬೆಯ ಕುರಿತು ಜನರಿಗೆ ಎಚ್ಚರಿಕೆ ಕೊಡುತ್ತಿದ್ದಾರೆ!

ಪೇಜಾವರ ಶ್ರೀಗಳು ಚುನಾವಣೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಮಂಗಳೂರಿನ ಹಿಂದೂ ಸಮಾಜೋತ್ಸವವನ್ನು ನಡೆಸುತ್ತಿರುವುದಾಗಿ ಹೇಳಿದ್ದಾರೆ. ಆದರೆ ಸಮಾಜದಲ್ಲಿ ಹಿಂದೂಗಳು ಮತ್ತು ಅವರ ಎದುರಾಳಿಗಳಾಗಿ ಮುಸ್ಲಿಮರು, ಕ್ರೈಸ್ತರು ಮತ್ತಿತರರು ಎಂಬ ಧ್ರುವೀಕರಣ ಚುನಾವಣೆಯ ನಂತರವೂ ಮುಂದುವರಿಯುತ್ತದೆ. ಪ್ರಜೆಗಳನ್ನು ಧರ್ಮದ ನೆಲೆಯಲ್ಲಿ ಬೇರ್ಪಡಿಸಿ ಆ ಮೂಲಕ ಒಂದು ಫ್ಯಾಸಿಸ್ಟ್ ಪ್ರಭುತ್ವವನ್ನು–ಗಮನಿಸಿ ಕೇವಲ ಸರ್ಕಾರವಲ್ಲ–ಸ್ಥಾಪಿಸುವ ಈ ಪ್ರಯತ್ನವನ್ನು ಸಂಘ ಪರಿವಾರ ಕಳೆದ ಹಲವು ದಶಕಗಳಿಂದ ನಡೆಸಿಕೊಂಡು ಬಂದಿದೆ. ಮಂಗಳೂರಿನ ಸಮಾಜೋತ್ಸವ, ಸಂಘ ಪರಿವಾರದ ಈ ದೀರ್ಘಕಾಲೀನ ಕಾರ್ಯಕ್ರಮದ ಭಾಗವಾಗಿ ನಡೆಯುತ್ತಿದೆ. ಚುನಾವಣೆ ಅದಕ್ಕೆ ಒಂದು ನೆಪ ... ಈ ದೇಸಿ ಫ್ಯಾಸಿಸಂ ಎಷ್ಟು ಅಮಾನುಷವಾಗಬಲ್ಲದು ಎಂಬುದನ್ನು ನಾವು ಬಜೆಪಿಯ ರಾಮಜನ್ಮಭೂಮಿ ಚಳ...ವಳಿ, ಬಾಬರಿ ಮಸೀದಿ ಧ್ವಂಸ, ಮುಂ... ಆ ಸಂದರ್ಭದಲ್ಲಿ ನಡೆದ ಗಲಭೆಗಳು, ಗುಜರಾತ್ ನರಮೇಧ ಮತ್ತು ಇತ್ತೀಚೆಗೆ ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ನಡೆದ ದಾಳಿಗಳಲ್ಲಿ ಕಂಡಿದ್ದೇವೆ. ಸಂಘ ಪರಿವಾರ ಈಗ ಕರ್ನಾಟಕವನ್ನು ತನ್ನ ಒಂದು ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿದೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಈ ಎರಡು ಘಟನೆಗಳನ್ನು ನೋಡಿ. ರಾಜ್ಯದ ಬಜೆಪಿ ಸರ್ಕಾರ ಇತ್ತೀಚೆಗೆ ಅಪಾರ ಹಣ ವೆಚ್ಚ ಮಾಡಿ, ವಿದ್ಯಾರ್ಥಿಗಳನ್ನು ಒತ್ತಾಯದಲ್ಲಿ ಬಳಸಿಕೊಂಡು ಭಯೋತ್ಪಾದನೆಯ ವಿರುದ್ಧ ಅಭಿಯಾನವೊಂದನ್ನು ನಡೆಸಿತು. ರಾಜ್ಯದ ಪ್ರತಿಯೊಬ್ಬ ಪ್ರಜೆಯೂ, ಮತ್ತೊಬ್ಬ ಪ್ರಜೆಯನ್ನು ಸಂದೇಹದಿಂದ ನೋಡಬೇಕು ಎಂದು ಎಚ್ಚರಿಕೆ ಕೊಡುವುದರ ಹೊರತಾಗಿ ಈ ಅಭಿಯಾನಕ್ಕೆ ಬೇರೆ ಯಾವ ಘನಂದಾರಿ ಉದ್ದೇಶವಿತ್ತು? ಇದು ಪ್ರತಿಯೊಬ್ಬ ಪ್ರಜೆಯನ್ನೂ ಒಬ್ಬ "ವಿಜಿಲ್ಯಾಂಟೆ" (Vigilante)ಯನ್ನಾಗಿ ಪರಿವರ್ತಿಸುವ ಫ್ಯಾಸಿಸ್ಟ್ ಕಾರ್ಯಕ್ರಮವಲ್ಲದೆ ಮತ್ತೇನೂ ಅಲ್ಲ. ವಿಜಿಲ್ಯಾಂಟೆ ಎಂದರೆ ಕಲ್ಪಿತ ಶತ್ರುಗಳ ವಿರುದ್ಧ ಸರ್ಕಾರದ ಕಾನೂನುಬದ್ಧ ಸಂಸ್ಥೆಗಳ ಬದಲಾಗಿ ತಾವೇ ಕ್ರಮ ತೆಗೆದುಕೊಳ್ಳುವ ಪುಂಡು ಸಂಘಟನೆಗಳು. ನೈತಿಕ ಪೊಲೀಸರ ಹಾಗೆ ಈ ವಿಜಿಲ್ಯಾಂಟೆಗಳೂ ಫ್ಯಾಸಿಸಂನ ಕಾಲಾಳುಗಳು; ಉದಾ: ಇಟಲಿಯಲ್ಲಿ ಮುಸ್ಸೋಲಿನಿಯ ಬ್ಲ್ಯಾಕ್ ಶರ್ಟ್ಸ್, ಭಾರತದಲ್ಲಿ ಸಂಘ ಪರಿವಾರದ ಚೆಡ್ಡಿಗಳು. ರಾಜ್ಯ ಸರ್ಕಾರ ಭಯೋತ್ಪಾದನೆಯ ವಿರುದ್ಧ ಅಭಿಯಾನದ ತನ್ನ ಕಾರ್ಯಕ್ರಮದ ಮುಖಾಂತರ ಈಗ ಆರ್‌ಎಸ್‌ಎಸ್ ಸಿದ್ಧಾಂತವನ್ನು ಸರ್ಕಾರದ ಧೋರಣೆಯನ್ನಾಗಿ ಮಾರ್ಪಡಿಸಿದೆ. ಉದಾಹರಣೆಗೆ ಈ ಅಭಿಯಾನದ ಅಂಗವಾಗಿ ಮಂಗಳೂರಿನ ಯೂನಿವರ್ಸಿಟಿ ಕಾಲೇಜಿನಲ್ಲಿ ನಡೆದ ಒಂದು ಪ್ರದರ್ಶನದಲ್ಲಿ ಭಯೋತ್ಪಾದಕರನ್ನು ಚಿತ್ರಿಸಿದ್ದು ಹೇಗೆ ಗೊತ್ತೆ? ಸ್ಟೇಜ್ ಮೇಲೆ ಮೂವರು ಬುರ್ಖಾಧಾರಿಗಳನ್ನು ತರುವುದರ ಮುಖಾಂತರ! ಅದಕ್ಕೆ ಮೊದಲೇ ಆ ಕಾಲೇಜಿನಲ್ಲಿ ಬುರ್ಖಾ ಧರಿಸಿ ಬರುತ್ತಿದ್ದ ಮುಸ್ಲಿಮ್ ವಿದ್ಯಾರ್ಥಿನಿಯರಿಗೆ ತಮ್ಮ ಬುರ್ಖಾ ತೆಗೆಯುವಂತೆ ಎಬಿವಿಪಿ ಸಂಘಟನೆಗೆ ಸೇರಿದ ವಿದ್ಯಾರ್ಥಿಗಳು ಒತ್ತಾಯಪಡಿಸಿದ್ದರು. ಮಂಗಳೂರಿನ ಪಬ್ ದಾಳಿ ಖಂಡಿಸಿದ ಕಾಲೇಜಿನ ಉಪನ್ಯಾಸಕ ಪಟ್ಟಾಭಿರಾಮ ಸೋಮಯಾಜಿಯವರಿಗೆ ನಿರಂತರವಾಗಿ ಮಾನಸಿಕ ಹಿಂಸೆ ನೀಡುತ್ತಿರುವವರೂ ಇದೇ ಎಬಿವಿಪಿ ವಿದ್ಯಾರ್ಥಿಗಳು. ಎಲ್ಲವೂ ಭಯೋತ್ಪಾದನೆಯ ವಿರುದ್ಧ ಪ್ರತಿಭಟನೆಗಳು!

ಬುರ್ಖಾ, ಭಯೋತ್ಪಾದನೆಯ ಡ್ರೆಸ್ ಆಗಿರುವುದು ಮಂಗಳೂರಿನ ಯೂನಿವರ್ಸಿಟಿ ಕಾಲೇಜಿನಲ್ಲಿ ಮಾತ್ರವಲ್ಲ. ಮಂಗಳೂರಿನಿಂದ ಸುಮಾರು ನೂರು ಕಿ.ಮೀ. ದೂರದಲ್ಲಿರುವ ಸುಳ್ಯ ತಾಲ್ಲೂಕಿನ ಒಂದು ಸಣ್ಣ ಊರು ಪಂಜದಲ್ಲೂ ಬುರ್ಖಾ ಧರಿಸಿ ಕಾಲೇಜಿಗೆ ಬರುವ ವಿದ್ಯಾರ್ಥಿನಿಯರು ಈಗ "ಶಂಕಿತ ಭಯೋತ್ಪಾದಕರು!" ಅಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಯೇ ಎಬಿವಿಪಿಯ ಒತ್ತಾಯಕ್ಕೆ ತಲೆಬಾಗಿ ಮುಸ್ಲಿಮ್ ವಿದ್ಯಾರ್ಥಿನಿಯರು ಬುರ್ಖಾ ಧರಿಸಿ ತರಗತಿಗಳಿಗೆ ಹಾಜರಾಗದಂತೆ ಆಜ್ಞೆ ಹೊರಡಿಸಿತು. ನಂತರ ಎಬಿವಿಪಿ, ಕಾಲೇಜಿನ ಆವರಣದ ಒಳಗೆ ಸಹ ಯಾರೂ ಬುರ್ಖಾ ಧರಿಸಿ ಬರತಕ್ಕದ್ದಲ್ಲ ಎಂಬ ಬೇಡಿಕೆಯನ್ನು ಮುಂದೆ ಇಟ್ಟಿತು. ಕಾಲೇಜಿನ ಆಡಳಿತ ಅದಕ್ಕೂ ಸೈ ಎಂದಿತು. ಇತ್ತೀಚೆಗೆ ಎಬಿವಿಪಿ ಹಾಗೂ ಅದರ ಜೊತೆ ಕೈಜೋಡಿಸಿದ ಹಿಂದೂ ಜಾಗರಣ ವೇದಿಕೆ ಊರಿನಲ್ಲಿ ಯಾವ ಮುಸ್ಲಿಮ್ ಮಹಿಳೆಯೂ ಬುರ್ಖಾ ಧರಿಸುವುದನ್ನು ತಾವು ಸಹಿಸುವುದಿಲ್ಲ ಎಂದು ಘೋಷಿಸಿವೆ! ಪಂಜದ ಮುಸ್ಲಿಮ್ ಮಹಿಳೆಯರಿಗೆ, ಮಂಗಳೂರಿನ ಮುಸ್ಲಿಮ್ ವಿದ್ಯಾರ್ಥಿನಿಯರಿಗೆ ಇವತ್ತು ಸಂಘ ಪರಿವಾರ ಮಾಡಿರುವ ಅವಮಾನ ಕೇವಲ ಅವರಿಗೆ ಮಾತ್ರವಲ್ಲ, ಅದು ನಮಗೆಲ್ಲರಿಗೂ ಮಾಡಿದ ಅವಮಾನ. ಹೀಗೆ ಭಾವಿಸದೆ ಇದ್ದರೆ ನಾವು ಮನುಷ್ಯರಾಗಿ ಉಳಿಯುವುದಿಲ್ಲ. ಮುಸ್ಲಿಮರಾಗಿ ಹುಟ್ಟುವುದೇ ಒಂದು ಅಪರಾಧ ಎಂಬ ಫ್ಯಾಸಿಸ್ಟ್ ನೀತಿಯನ್ನು ಸಂಘ ಪರಿವಾರ ಕರ್ನಾಟಕದಲ್ಲಿ ಈಗ ಜಾರಿಗೆ ತರುತ್ತಿದೆ. ಅದಕ್ಕೆ ಸರ್ಕಾರದ ಬೆಂಬಲವೂ ಇದೆ. ಒಂದು ಸಮುದಾಯವನ್ನು ಅದರಲ್ಲೂ ಆ ಸಮುದಾಯದ ಹೆಂಗಸರನ್ನು ಹೀಗೆ ಹೀನಾಯವಾಗಿ ಕಾಣುವುದರಿಂದ ನಾವು ನಮ್ಮನ್ನೇ ಹೀನಾಯಗೊಳಿಸುತ್ತೇವೆ; ಜೊತೆಗೆ ಮನುಷ್ಯತ್ವದ ಕಲ್ಪನೆಯನ್ನು ಸಹ ಹೀನಾಯಗೊಳಿಸುತ್ತೇವೆ. ಕರ್ನಾಟಕದಲ್ಲಿ ಈಗ ಮಹಿಳೆಯರನ್ನು ಅವಮಾನಿಸುವುದು ತಪ್ಪು; ಅಸಹಾಯಕರಿಗೆ ಗುಂಪು ಕಟ್ಟಿಕೊಂಡು ಹೋಗಿ ಹೊಡೆಯುವುದು ತಪ್ಪು ಎಂದು ಧೈರ್ಯ ವಹಿಸಿ ಹೇಳಬೇಕಾದ ಪರಿಸ್ಥಿತಿ ಇದೆ. ಭಾರತಕ್ಕೆ ಇಂತಹ ಹೀನಾಯಸ್ಥಿತಿ ಬರಬಾರದು. ಮಂಗಳೂರಿನಲ್ಲಿ ಪೇಜಾವರ ಶ್ರೀಗಳ ನೇತೃತ್ವದಲ್ಲಿ ನಡೆಯಲಿರುವ ಹಿಂದೂ ಸಮಾಜೋತ್ಸವ ಈ ಹೀನಾಯಸ್ಥಿತಿಯನ್ನೇ ದೇಶ ರಕ್ಷಣೆ ಹಾಗೂ ಧರ್ಮ ರಕ್ಷಣೆ ಎಂದು ಚಿತ್ರಿಸಲು ಆಯೋಜಿಸಲಾಗಿರುವ ಒಂದು ಫ್ಯಾಸಿಸ್ಟ್ ಕಾರ್ಯಕ್ರಮ. ರಾಜಕೀಯಕ್ಕೆ ಇಂತಹ ಹೀನಾಯ ಸ್ಥಿತಿ ಬರಬಾರದು.

■ ಜೆ. ರಾಜಶೇಖರ



ಹೆಚ್ಚು ಬಡ ಮತ್ತು ಮಧ್ಯಮ ವರ್ಗದ ರೋಗಿಗಳು ಬರುತ್ತಾರೆ. ಇಲ್ಲಿಯ ಪಾಖಂಡಿ ನರ್ಸ್‌ಗಳಿಂದ ಹಿಡಿದು ಆಪರೇಷನ್ ಮಾಡುವ ಸರ್ಜನ್‌ಗಳವರೆಗೂ ಲಂಚದ ಕ್ಯಾನ್ಸರ್ ಹತ್ತಿಕೊಂಡಿದೆ. ಇದರ ಮೊದಲ ನಿರ್ದೇಶಕರಾದ ಚಿದಾನಂದ ಅಧ್ವಾನ ಎಬ್ಬಿಸಿ, ಇಲ್ಲಿಂದ ಶಿವಮೊಗ್ಗಕ್ಕೆ ಟ್ರಾನ್ಸ್‌ಫರ್ ಆಗಿ ಈಗ ಪೊಲೀಸರಿಂದ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದಾನೆ. ಈಗಿನ ನಿರ್ದೇಶಕ ರಾಜೀವ್ ಶೆಟ್ಟಿಯವರು ಬಾಯಿ ಹೊಲಸು ಮಾಡಿಕೊಳ್ಳಬಾರದೆಂದು ಯಾರ ಮೇಲೂ ಕ್ರಮ ಕೈಗೊಳ್ಳುತ್ತಿಲ್ಲ. ಹಾಗಾಗಿ ಇಲ್ಲಿನ ವೈದ್ಯರುಗಳ ಮೇಲೆ ಅವರಿಗೆ ನಿಯಂತ್ರಣವೇ ಇಲ್ಲ.

...ಗಿದೆ. ಸರಿಯಾಗಿ ಕೇಸು ನಡೆದರೆ ಈತ ಕಂಬಿ ...ಎಣಿಸುವುದು ಗ್ಯಾರಂಟಿಯಾಗಿದೆ.

...ಉಪೇಂದ್ರಕುಮಾರ್ ಹೆಸರಿಗೆ ಮಿಮ್ಸ್‌ನಲ್ಲಿ ...ಸೋಸಿಯೇಟ್ ಪ್ರೊಫೆಸರ್; ಇಲ್ಲಿನ ಸರ್ಜರಿ ವಿಭಾಗದ ...ಯೂನಿಟ್‌ನ ಮುಖ್ಯಸ್ಥ. ಈತ ಪಡೆಯುವ ಸಂಬಳ ...ಗೆ 60,000. ತಿಂಗಳಿಗೆ ಒಂದು ದಿನವೂ ಇಲ್ಲಿನ ...ೀಯ ವಿದ್ಯಾರ್ಥಿಗಳಿಗೆ ಪಾಠ ಹೇಳಿದ ಉದಾಹರಣೆ ... ತಪ್ಪಿಸ್ಕೊ ಬಂದ ದಿನ ಬಂದುಹೋಗು... ಹಾಜರಾತಿ ಪುಸ್ತಕದಲ್ಲಿ ಮಾತ್ರ ...ನವೂ ಹಾಜರಾದಂತೆ ಸಹಿ ಹಾಕಿ...ಳ ಪಡೆಯುತ್ತಾನೆ. ಖಾಸಗಿ ಪ್ರಾಕ್ಟೀಸ್ ...ಡುವುದಿಲ್ಲ ಎಂದು ಹೇಳಿ ಅದಕ್ಕೂ ...ಪಡೆಯುವ ಈತ ಕೆಲಸದ ... ...ಪ್ರಾಕ್ಟೀಸ್ ಮಾಡುತ್ತಾನೆ. ... ...ಗೆ ಬಂದು ಹೋಗು... ... ... ಲಂಚ ಪಡೆದ ... ...

ಕೊಲೆಗಡುಕರ ರಕ್ಷಕರು

ಡಾ.ಉಪೇಂದ್ರ ಮತ್ತು ಡಾ.ಗೋಪಾಲಕೃಷ್ಣರೆಂಬ ಧನದಾಹಿಗಳು ತಮ್ಮ ಬೇಜವಾಬ್ದಾರಿತನದಿಂದ ರೋಗಿ ಸತ್ತಿರುವುದು ನಿಜ ಎಂದು ರಕ್ಷಣಾ ವೇದಿಕೆ, ಕರ್ನಾಟಕ ಜನಪರ ವೇದಿಕೆ, ಸಿಪಿಎಂ, ರೈತಸಂಘ ಮುಖಂಡರೆದುರು ಅವರುಗಳೇ ಒಪ್ಪಿಕೊಂಡಿದ್ದಾರೆ. ಹಾಗಾಗಿ ಡಾ.ಉಪೇಂದ್ರರನ್ನು ಕೂಡಲೇ ಅಮಾನತುಪಡಿಸಿ, ವೈದ್ಯರ ನಿರ್ಲಕ್ಷ್ಯದಿಂದ ಸಾವಿಗೀಡಾದ ರೋಗಿಯ ಕುಟುಂಬದವರಿಗೆ ಪರಿಹಾರ ನೀಡಬೇಕೆಂದು ಎಲ್ಲರೂ ಆಗ್ರಹಿಸಿದರು. ಆದರೆ ಅದಕ್ಕೆ ಒಪ್ಪಿಕೊಂಡ ನಿರ್ದೇಶಕ ರಾಜೀವ್ ಶೆಟ್ಟಿ ದೆಲ್ಲಿಗೆ ಹೋಗಿದ್ದಾರೆ; ಡಿಎಸ್ ರಾಮಲಿಂಗೇಗೌಡ ಕೂಡ ಈ ಕೊಲೆಗಡುಕ ವೈದ್ಯರನ್ನು ರಕ್ಷಿಸುವಂತೆ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದಾರೆ.

ಇಂತಹ ದುಷ್ಟ ವೈದ್ಯರನ್ನು ರಕ್ಷಿಸಿದ್ದು ಏತಕ್ಕಾಗಿ? ರೋಗಿಯ ಜೀವಕ್ಕಿಂತ ಹಣವೇ ಮುಖ್ಯವೆ? ಇನ್ನೂ ಎಷ್ಟು ಜನ ರೋಗಿಗಳು ಈ ರಾಕ್ಷಸ ವೈದ್ಯರಿಗೆ ಬಲಿಯಾಗಬೇಕು?



ರಾಜೀವ್ ಶೆಟ್ಟಿ



ರಾಮಲಿಂಗೇಗೌಡ

...ಹೊಂದುವ ಅಧ್ವಾನದ ಸಂತೆ

... ಮೆಡಿಕಲ್ ಕಾಲೇಜ್ ಮತ್ತು ... ...

■ ಲಕ್ಷ್ಮಣ್ ಚೀರನಹಳ್ಳಿ

ಪೊರೆ ಕಳಚದಿದ್ದರೆ ಉಳಕೊಂಬುವುದು ಸಾಧ್ಯವಿಲ್ಲ

ಸುಳ್ಯದ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಕೊನೆಯ ವರ್ಷದಲ್ಲಿದ್ದಾಗ (1997ರಲ್ಲಿ) ನಾನು ಮತ್ತು ನನ್ನ ಸ್ನೇಹಿತ ಸಂತೋಷ್ ನಾಗಮ್ಮನವರ ಲಂಕೇಶ್ ಪತ್ರಿಕೆ ಕಚೇರಿಗೆ ಹೋಗಿದ್ದೆವು. ಅವರ ತಂದೆಗೆ ರವೀಂದ್ರ ರೇಷ್ಮೆಯವರಿಗಿದ್ದ ಪರಿಚಯವನ್ನು ಹಿಡಿದು ಫೋನ್ ಮಾಡಿಕೊಂಡು ಅಲ್ಲಿಗೆ ಹೋಗಿದ್ದು. ನಮ್ಮ ಕಡೆಯ ಪರೀಕ್ಷೆಗಳು ನಡೆಯುತ್ತಿದ್ದ ಆ ಸಮಯದಲ್ಲಿ ಪ್ರಾಕ್ಟಿಕಲ್ ಮತ್ತು ವೈವಾ ಪರೀಕ್ಷೆಗಳಲ್ಲಿ ಪಾಸಾಗಬೇಕೆಂದರೆ ದುಡ್ಡು ನೀಡುವುದು ಕಡ್ಡಾಯ ಎಂದಾಗಿತ್ತು. ಯಾವುದೇ ಕಾರಣಕ್ಕೂ ಹಣ ಕೊಡಬಾರದೆಂದು ನಿರ್ಧರಿಸಿದ್ದ ನಾವು ಈ ವಿಚಾರ 'ಪತ್ರಿಕೆ'ಯಲ್ಲಿ ಬಂದರೆ ಚೆನ್ನಾಗಿರುತ್ತದೆ ಎಂದು ಭಾವಿಸಿದ್ದೆವು. ಅಲ್ಲಿಗೆ ಹಿಂದೆ 5 ವರ್ಷಗಳ ಕಾಲ ನಾನು, 10 ವರ್ಷಗಳ ಕಾಲ ಸಂತೋಷ್ ಲಂಕೇಶ್ ಪತ್ರಿಕೆಯನ್ನು ಒಂದೂ ಸಂಚಿಕೆ ಬಿಡದೆ ಓದಿದ್ದೆವು. ಅವರ ಮನೆಯಲ್ಲಿ ಪತ್ರಿಕೆ ಶುರುವಾದಾಗಿನಿಂದ ಅಂದಿನವರೆಗೂ ಬಂದ ಎಲ್ಲಾ ಸಂಚಿಕೆಗಳೂ ಇವೆಯೆಂದು ಅವನು ಹೇಳುತ್ತಿದ್ದ. ಆಗ ಮಂಗಳವಾರ ಪತ್ರಿಕೆ ಬರುತ್ತಿತ್ತು. ನಾನು ಯಾವತ್ತೂ ಬುಧವಾರದ ತನಕ ಕಾದವನಲ್ಲ.



5ನೇ ವರ್ಷಕ್ಕೆ

ಅಷ್ಟರ ಮಟ್ಟಿಗೆ ಲಂಕೇಶ್ ನಮ್ಮನ್ನು ಪ್ರಭಾವಿಸಿದ್ದರು. ಲಂಕೇಶರು ಪ್ರತಿಪಾದಿಸುತ್ತಿದ್ದ ಹಲವು ವಿಚಾರಗಳು ಇಂದು ನನಗೆ ಒಪ್ಪಿಗೆಯಿಲ್ಲ. ಇವತ್ತು ಸಾಮಾಜಿಕ ಚಳವಳಿಯಲ್ಲಿ ಪೂರ್ಣಾವಧಿ ತೊಡಗಿಸಿಕೊಂಡಿರುವ ನಾನು ಅಲ್ಲಿಂದ ದಾಟ ದೂರಕ್ಕೆ ಬಂದು ನಿಂತಿದ್ದೇನೆ. ಆದರೆ ಇಲ್ಲಿಯವರೆಗೆ ಬಂದು ನಿಲ್ಲುವ ಮುನ್ನ ನನ್ನನ್ನು ಅಲ್ಲಿಯವರೆಗೆ ತಂದು ನಿಲ್ಲಿಸಿದ್ದು ಮಾತ್ರ ಲಂಕೇಶರೇ. ಹಳ್ಳಿಯೊಂದರಿಂದ ಬೆಂಗಳೂರಿಗೆ ಬಂದು, ಬೆಂಗಳೂರೊಳಗೆ ಒಂದಾಗದೆ, ಒಂದು ರೀತಿಯ ಅನಾಥಪ್ರಜ್ಞೆಯಿಂದ ಕಾಲೇಜು ಓದುತ್ತಿದ್ದವನಿಗೆ ಲಂಕೇಶ್ ಪತ್ರಿಕೆ ಸಿಕ್ಕಿತು. 98ರಲ್ಲಿ ಲಂಕೇಶರಿಗಿಂತ ಭಿನ್ನವಾದ ಸಂಘಟನೆಯ ಸಂಪರ್ಕ ಸಿಗುವವರೆಗೆ ನನ್ನ ಬಹುಪಾಲು ಸಾಮಾಜಿಕ, ರಾಜಕೀಯ ನಿಲುವುಗಳು ರೂಪುಗೊಂಡಿದ್ದು ಪತ್ರಿಕೆಯಿಂದಲೇ. ಎಷ್ಟರಮಟ್ಟಿ ಗೆಂದರೆ ಪತ್ರಿಕೆ ಓದುವ ಮುನ್ನ ಯಾವುದಾದರೊಂದು ವಿಷಯದ ಬಗ್ಗೆ ನಮಗೆ ಇನ್ನಾವುದಾದರೂ ನಿಲುವಿದ್ದರೂ, ಓದಿದ ಮರುದಿನ ನಮ್ಮ ನಿಲುವು ಮರೆತು ಹೋಗುತ್ತಿತ್ತು.

ಈ ರೀತಿಯಾಗಿ ಲಂಕೇಶರನ್ನು, ಪತ್ರಿಕೆಯನ್ನು ಓದುತ್ತಿದ್ದ ಸಂದರ್ಭದಲ್ಲೇ ಅವರು ಬರೆದ ಮಾತೇ ಈ ಲೇಖನದ ಶೀರ್ಷಿಕೆ. ಆಗಾಗ ತನ್ನ ಪತ್ರಿಕೆ (ಬಹುಶಃ ತಾನೂ?) ಪೊರೆ ಕಳಚುತ್ತದೆ. ಈ ರೀತಿ ಪೊರೆ ಕಳಚದಿದ್ದರೆ ಅದು ಸಮಕಾಲೀನವಾಗಿ ಉಳಿದುಕೊಳ್ಳುವುದಿಲ್ಲ, ಪಳೆಯುಳಿಕೆಯಂತೆ ಮಾತ್ರ ಉಳಿದು ಬಿಡುತ್ತದೆ ಎಂಬ ಅರ್ಥದಲ್ಲಿ ಅವರೊಮ್ಮೆ ಬರೆದಿದ್ದರು. ಇಂದು ಯೋಚಿಸಿದರೆ, ಲಂಕೇಶರು ತಮ್ಮ ಜೀವಿತಾವಧಿಯಲ್ಲಿ ಹಲವು ಸಂದರ್ಭಗಳಲ್ಲಿ ಪೊರೆ ಕಳಚಿದರು. ಲಂಕೇಶ್ ಪತ್ರಿಕೆಯೂ ಅವರು ಪೊರೆ ಕಳಚಿದುದರ ಭಾಗವಾಗಿಯೇ ಹುಟ್ಟಿಕೊಂಡಿದ್ದು, 'ಕಲ್ಲು ಕರಗುವ ಸಮಯ' ಪೊರೆ ಕಳಚುವುದರ ಭಾಗವಾಗಿಯೇ ಹುಟ್ಟಿಕೊಂಡಿದ್ದು ಎಂದೆನಿಸುತ್ತದೆ. ಆದರೆ ಹಳೆಯ ಪೊರೆಗಳನ್ನು ಕಳಚಿಕೊಳ್ಳುತ್ತಿದ್ದ ಜೊತೆ ಜೊತೆಗೇ ಲಂಕೇಶರು ಬೇರೆ ಪೊರೆಗಳಲ್ಲಿ ಆವೃತರಾಗುತ್ತಿದ್ದರು. ತಮಗೇ ವಿಶಿಷ್ಟವಾದ ವಿಕ್ಷಿಪ್ತ ಪೊರೆಯಲ್ಲಿ ನಿರಂತರವಾಗಿ ಇದ್ದೇ ಇದ್ದರು.

ಅವತ್ತು ರೇಷ್ಮೆಯವರ ಜೊತೆ ಪತ್ರಿಕೆಯ ಕಚೇರಿಯಲ್ಲಿ ಮಾತನಾಡಿದ ನಂತರ ನಾವು ಸ್ವಲ್ಪ ಹೊತ್ತು ಅಲ್ಲೇ ಇದ್ದೆವು. ರೇಷ್ಮೆ ಅಂದಿನ ಕಂಪ್ಯೂಟರ್ ರೂಂ ಒಳಗೆ ಹೋದರು (ಇವತ್ತು ಈಶ ಅವರು ಕೂರುವ ಚೇಂಬರ್). ನಾವು ಮೆಟ್ಟಿಲ ಪಕ್ಕದಲ್ಲಿ ನಿಂತು ನಮ್ಮ ಕತ್ತನ್ನು ಎಷ್ಟು ಸಾಧ್ಯವೋ ಅಷ್ಟು ಉದ್ದ ಮಾಡಿ ಸಂಪಾದಕರ ಚೇಂಬರ್ ಒಳಗೆ ಇಣಿಕಿ ಹಾಕಿದೆವು. ಇದ್ದಕ್ಕಿದ್ದಂತೆ ರೇಷ್ಮೆ ಒಳಗಿನಿಂದ ಬಂದು, 'ಯಾಕೆ? ಏನು ಸಮಾಚಾರ?' ಅಂದರು. ನಾವು ಗಾಬರಿ ಬಿದ್ದು 'ಏನಿಲ್ಲಾ ಬಾಸ್‌ನ ಮುಖ ಒಮ್ಮೆ ನೋಡೋಣ ಅಂತ ಅಷ್ಟೆ' ಅಂದೆವು. ಮಾತಾಡುತ್ತೀರಾ ಅಂತ ಅವರು ಕೇಳಲಿಲ್ಲ, ಅವರು ಕೇಳಿದ್ದರೂ ನಾವು ಮಾತನಾಡುವ ಧೈರ್ಯ ಮಾಡುತ್ತಿರಲಿಲ್ಲ, ಏಕೆಂದರೆ ಮುಂದಿನ ವಾರದ ಸಂಚಿಕೆಯಲ್ಲಿ 'ಇಬ್ಬರು ಅವಿವೇಕಿ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ನನ್ನ ಆಫೀಸಿಗೆ ಬಂದಿದ್ದರು' ಎಂದು ಅವರು ಬರೆದುಬಿಟ್ಟಾರೆಂಬ ಹೆದರಿಕೆಯಿತ್ತು. ಈ ವಿಕ್ಷಿಪ್ತ ಪೊರೆಯನ್ನು ಲಂಕೇಶರು ಕೊನೆಯವರೆಗೂ ಕಳಚಲಿಲ್ಲ.

ನಮ್ಮ ಸಂದರ್ಭದಲ್ಲಿ ವ್ಯಕ್ತಿ/ಸಂಘಟನೆಯೊಂದರ ಮಹತ್ವವನ್ನು ಅಳೆಯುವ ಲಿಟ್ಮಸ್ ಮಾನದಂಡವಾಗಿರುವುದು ಒಂದು ಪ್ರಮುಖ ಅಂಶವಿದೆ. ಕೋಮುವಾದ ಮತ್ತು ಜಾಗತೀಕರಣದ ಕುರಿತು ಅವರ ನಿಲುವು ಮತ್ತು ನಡೆ ಏನಾಗಿದೆ ಎಂಬುದೇ ಆ ಲಿಟ್ಮಸ್ ಮಾನದಂಡ. ವಿಪರ್ಯಾಸದ ಸಂಗತಿ ಏನೆಂದರೆ ಲಂಕೇಶರದ್ದು ಕೋಮುವಾದದ ಕುರಿತು ಸ್ಪಷ್ಟ ಖಚಿತ ಪ್ರಗತಿಪರ ನಿಲುವು. ಆದರೆ ಜಾಗತೀಕರಣದ ಕುರಿತು ಒಂದು ಎಡಬಡಂಗಿ ನಿಲುವು. ಟೀನಾ ಎಂದು ಕರೆಯಲ್ಪಡುವ (There Is No Alternative) ಒಂದು ರೀತಿಯ ಪ್ರತಿಗಾಮಿ ನಿಲುವು. ಈ ಪೊರೆಯನ್ನು ಲಂಕೇಶರು ಕಳಚಲಿಲ್ಲ.



ಗೌರಿ ಲಂಕೇಶ್ ಮತ್ತು ಗೌರಿ 'ಲಂಕೇಶ್' ಪತ್ರಿಕೆ ಇಂತಹ ಪೊರೆಗಳನ್ನು ಕಳಚುವುದರಲ್ಲಿ ಯಶಸ್ವಿಯಾದರು. ಅದು ಶುರುವಾದಾಗ ಅದನ್ನು 'ಲಂಕೇಶ್ ಮರುಹುಟ್ಟು' ಎಂದು ಕರೆದುಕೊಂಡರು. ನಿಜವಾದ ಅರ್ಥದಲ್ಲಿ ಅದು ಮರುಹುಟ್ಟೇ ಆಗಿತ್ತು. ಕಳೆದ ನಾಲ್ಕು ವರ್ಷಗಳ ಈ ಕಾಲಘಟ್ಟ ಕೋಮುವಾದಿ ಫ್ಯಾಸಿಸ್ಟರು ದೈತ್ಯಾಕಾರವಾಗಿ ಬೆಳೆದುನಿಂತು ವಿಧಾನಸೌಧಕ್ಕೇ ಲಗ್ಗೆ ಹಾಕಿದರು. ಇದರ ವಿರುದ್ಧ ನಡೆದ ಕೋಮು ಸೌಹಾರ್ದ ಚಳುವಳಿಯಲ್ಲಿ ಗೌರಿ ಮತ್ತು 'ಲಂಕೇಶ್'ಗೆ ಒಂದು ಮಹತ್ವದ ಸ್ಥಾನವಿದೆ. ಕೆ.ರಾಮದಾಸ್ ಅವರು 'ಪತ್ರಿಕೆ'ಯ ಕಾರ್ಯಕ್ರಮದಲ್ಲಿ ಹೇಳಿದಂತೆ ಕೋಮುವಾದಿಗಳ ವಿರುದ್ಧದ ಹೋರಾಟದಲ್ಲಿ ಲಂಕೇಶರನ್ನೂ ಮೀರಿಸಿ ಗೌರಿ ಜೈಲಿಗೂ ಹೋಗಿ ಬಂದರು. 'ಪ್ರತೀ ವಾರವೂ ಸಂಘಪರಿವಾರದ ವಿರುದ್ಧವೇ ಬರೀತೀರಿ' ಅಂತ ಟೀಕೆ ಬಂದರೂ ಬಿಡದೆ ನಿರಂತರವಾಗಿ ಆ ಕೆಲಸವನ್ನು ಮಾಡಿಕೊಂಡು ಬಂದ ಹಿರಿಮೆ ಇದರದ್ದು. ಇತರ ಪ್ರಗತಿಪರ ಸಂಘಟನೆಗಳ ವಿಚಾರದಲ್ಲೂ (ಲಂಕೇಶರ ಛಾಯೆ ಅಲ್ಲಲ್ಲಿ ಉಳಿದುಕೊಂಡಿದ್ದರೂ) 'ಲಂಕೇಶ್' ಕಟ್ಟುವ ಕೆಲಸ ಮಾಡುತ್ತಾ ಬಂದಿದೆ.


ಇವತ್ತು ಕಾಲವೂ ಬದಲಾಗಿದೆ. ಚಿಕನ್ ಗೊಜ್ಜು ಮತ್ತು ಬೆಂಡೇಕಾಯಿ ಪಲ್ಯದ ಕಾಲ ಇದಲ್ಲ. ಗೌರಿಯವರು ಪತ್ರಿಕೆ ಶುರು ಮಾಡುವ ಕಾಲಕ್ಕಾಗಲೇ ಸ್ಟ್ಯಾಂಡ್‌ನಲ್ಲಿ ಭದ್ರವಾಗಿ ಕೂತಿದ್ದ ಮೂರ್‍ನಾಲ್ಕು ಟ್ಯಾಬ್ಲಾಯ್ಡ್‌ಗಳಿದ್ದವು. ಆರ್ಥಿಕವಾಗಿ ಇದನ್ನು ಉಳಿಸಿಕೊಳ್ಳುವ ಸವಾಲೂ ದೊಡ್ಡದಿತ್ತು. 'ಗ್ರೈಡ್' ಶುರು ಮಾಡಿದಾಗ, ಇದೇನಪ್ಪಾ ಈ ಥರದ ಮ್ಯಾಗಜೇನ್‌ಅನ್ನು ಮಾಡ್ತಾ ಇದ್ದಾರಲ್ಲಾ ಅನ್ನಿಸುತ್ತಿತ್ತು. ಆದರೆ ಇಂದು ಗ್ರೈಡ್ ಬರುತ್ತಿರುವ ರೀತಿ ಮತ್ತು ಅದು ಪತ್ರಿಕೆಗೆ ಊರುಗೋಲಾಗಿರುವುದನ್ನು ನೋಡಿದರೆ ಅಂತಹದ್ದೊಂದು ಈ ಪತ್ರಿಕಾ ಬಳಗಕ್ಕೆ ಅನಿವಾರ್ಯ ಎಂಬುದು ನಮಗೂ ಮನವರಿಕೆಯಾಗಿದೆ. ಈ ವ್ಯಾವಹಾರಿಕ ಬುದ್ಧಿ ಕೂಡ ಒಂದು ರೀತಿಯ ಕಂಟಸ್ಮುಟಿಯೇ.

ತನ್ನ ಅಪ್ಪ ಇಲ್ಲವಾದ ಮೇಲೆ ಸಂಪಾದಕರಾಗಿ ಪಡೆಯದ ಮಾನ್ಯತೆ ಮತ್ತು ಗೌರವವನ್ನು ಇವತ್ತು ತನ್ನದೇ ಪತ್ರಿಕೆಯಿಂದ ಗೌರಿಯವರು ಗಳಿಸಿಕೊಂಡಿದ್ದಾರೆ.

'ಕಾಮ್ರೇಡ್ ಎಸ್.ಎಸ್.'ಗೆ ಲಾಲ್ ಸಲಾಮ್

ದಿನಾಂಕ 5.03.2009ರಂದು ಶಿವರುದ್ರಯ್ಯ ಸದಾಶಿವಯ್ಯ ಹಿರೇಮಠ್ 61ನೇ ವಯಸ್ಸಿನಲ್ಲಿ ಕ್ಯಾನ್ಸರ್ ರೋಗದಿಂದ ತೀರಿಕೊಂಡರು. ಎಸ್.ಎಸ್. ಹಿರೇಮಠರು, ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿಯೂ, ಪ್ರಾಂಶುಪಾಲರಾಗಿಯೂ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. 1994-95ರ ಅವಧಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಜಾನಪದ ಅಧ್ಯಯನದ ಪ್ರಾಧ್ಯಾಪಕರಾಗಿಯೂ ಅವರು ಕೆಲಸ ಮಾಡಿದ್ದರು. ಕವಿಯಾಗಿ ಅವರು ನಾಲ್ಕು ಕವನ ಸಂಕಲನಗಳನ್ನು ಪ್ರಕಟಿಸಿದ್ದರು. 'ಭಾರತದ ಅವೈದಿಕ ಪರಂಪರೆಯ' ಬಗ್ಗೆ ತೀವ್ರ ಒಲವುಳ್ಳವರಾಗಿ ಅವರು ಕರ್ನಾಟಕದ 'ಅವೈದಿಕ ಪರಂಪರೆ'ಗಳನ್ನು ಕುರಿತಾಗಿ ಪಂಡಿತರು ಮೆಚ್ಚುವ ಹತ್ತು ಸಂಶೋಧನಾ ಗ್ರಂಥಗಳನ್ನು ಬರೆದಿದ್ದರು. ಕ್ಯಾನ್ಸರ್ ಅವರ ಜೀವವನ್ನು ಹಿಂಡುತ್ತಿದ್ದ ಹೊತ್ತಿನಲ್ಲಿಯೂ ಅವರು ಸಂಶೋಧನೆಯಲ್ಲಿ ತೊಡಗಿದ್ದು, ನೂರಾರು ಪುಟಗಳ ಕರಡು ಬರಹಗಳನ್ನು ಅವರು ವಿದ್ಯಾಂಸರಿಗೆ ಬಿಟ್ಟು ಹೋಗಿದ್ದಾರೆ. ಇದು ಒಬ್ಬ ಪಂಡಿತನಿಗೆ ತಕ್ಕುದಾದ ಜೀವನವೇ ಸರಿ. ಇಷ್ಟು ವಿವರಗಳನ್ನು, ಪ್ರಾಮಾಣಿಕ ಜ್ಞಾನದಾಹಿಯಾದ ಎಸ್.ಎಸ್. ಹಿರೇಮಠರ ಕುರಿತಾದ ಶ್ರದ್ಧಾಂಜಲಿಯಲ್ಲಿ ಕಾಣಿಸಲೇ ಬೇಕು. ಆದರೆ, ಯಾವುದೇ ಮನುಷ್ಯನ ಬದುಕು ಒಟ್ಟಿಗೇ ನಡೆಯುವ ವಿವಿಧ ಬಗೆಯ ಜೀವನಗಳ ಗೋಜಲು. ಈ ಗೋಜಲುಗಳಲ್ಲಿ ಹೊಮ್ಮುವ ಬದುಕಿನಾಕೃತಿಯೇ ಕಾಲ-ದೇಶಗಳ ಬಗ್ಗೆ ಲೋಕರೂಢವಾದ ಕಲ್ಪನೆಗಳಿಗೆ ಸವಾಲು. ಎಸ್.ಎಸ್.ಹಿರೇಮಠರ ಬದುಕಿನಲ್ಲಿ, ಅವರ ಪಂಡಿತ ಜೀವನವನ್ನು ಅವರ ಎಡಪಂಥೀಯ ಚಳವಳಿಯ ಜೀವನದಿಂದಲೂ, ಕಡೆಗಾಲದಲ್ಲಿ ದುರಂತಮಯವಾಗಿದ್ದ ಸಂಸಾರಿಕ ಜೀವನದಿಂದಲೂ ಬೇರ್ಪಡಿಸಲಾಗದು.

ಎಸ್.ಎಸ್.ಹಿರೇಮಠ್ ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಪ್ರಖ್ಯಾತ ವಿಜಯನಗರ ಕಾಲೇಜಿಗೆ 1976ರಲ್ಲಿ ಕನ್ನಡ ಉಪನ್ಯಾಸಕರಾಗಿ ಬಂದರು. ತಮ್ಮ ನಿತ್ಯದ ಕನ್ನಡ ಸಾಹಿತ್ಯ ಪ್ರವಚನದಲ್ಲಿ ಎಸ್.ಎಸ್. ಪ್ರಾಸಂಗಿಕವಾಗಿ 'ಮೇಲ್ಜಾತಿಗಳ ಸಂಸ್ಕೃತಿ' ವ್ಯಾಖ್ಯಾನಗಳನ್ನು ವಿಮರ್ಶಿಸುವುದು, ಕೆಳಜಾತಿಗಳಿಗೆ ಆಗುತ್ತಿರುವ ಅವಮಾನಗಳನ್ನು ವಿವರಿಸುತ್ತಿದ್ದರು. ತರಗತಿಗಳಲ್ಲಿ ಅವರ ಕನ್ನಡ ಪಾಠಗಳನ್ನು ಕೇಳಿ ಜಾತಿಯಾಚೆಗೂ ಒಂದು ಸಮಾಜದ ಸಾಧ್ಯತೆ ಇದೆ ಎಂಬ ಅರಿವು ಪಡೆಯತೊಡಗಿದ ಎಲ್ಲ ಜಾತಿಯ ವಿದ್ಯಾರ್ಥಿಗಳು ಅವರ ಸುತ್ತ ಸೇರತೊಡಗಿದರು. ಈ ಸಂಚಲನವನ್ನು ಹಿರೇಮಠ್ ತುರ್ತುಪರಿಸ್ಥಿತಿಯ ಉತ್ತರ ಕಾಲದಲ್ಲಿ ಸಂಘಟಿತವಾದ ಪ್ರಗತಿಪರ ಚಳವಳಿಗಳ ಜೊತೆಗೆ ಹೆಣೆದು ಹೊಸಪೇಟೆಯಲ್ಲಿ ಏಕಕಾಲಕ್ಕೆ 'ದಲಿತ ಸಂಘರ್ಷ ಸಮಿತಿ' ಹಾಗು ಎಡಪಂಥೀಯ ವಿದ್ಯಾರ್ಥಿ ಸಂಘಟನೆ 'ಸ್ಟುಡೆಂಟ್ ಫೆಡರೇಷನ್ ಆಫ್ ಇಂಡಿಯಾ'(ಎಸ್.ಎಫ್.ಐ.)ಗಳ ಘಟಕಗಳನ್ನು ಸ್ಥಾಪಿಸಿದರು. 'ಸಮಾನತೆ-ಶೋಷಣಾರಹಿತ ಸಮಾಜ' ಎಂಬ ಆದರ್ಶವನ್ನು ಎಲ್ಲರ ತಲೆಯಲ್ಲೂ ಬಿತ್ತಿದ್ದರು ಎಸ್.ಎಸ್.



1978ರ ಹೊತ್ತಿಗೆ ರಾಜ್ಯದಲ್ಲಿ 'ಸಮುದಾಯ ಸಾಂಸ್ಕೃತಿಕ ಸಂಘಟನೆ' ಮತ್ತು 'ಬಂಡಾಯ ಸಾಹಿತ್ಯ ಸಂಘಟನೆ'ಗಳು ಶುರುವಾದದ್ದೇ, ಇದೇ ಹುಡುಗರ ಗುಂಪನ್ನು ಹುರುದುಂಬಿಸಿ ಬಳ್ಳಾರಿ ಜಿಲ್ಲೆಯಲ್ಲಿ 'ಸಮುದಾಯ' ಮತ್ತು 'ಬಂಡಾಯ'ದ ಸಂಘಟನೆ ರೂಪಿಸಿದರು. ಅಲ್ಲಿಂದ 'ಸಮುದಾಯ'ದ ಜಾಥಗಳು, 'ಬಂಡಾಯ ಸಾಹಿತ್ಯ ಸಮ್ಮೇಳನ'ಗಳೂ, ಎಸ್.ಎಫ್.ಐ. ಅಧ್ಯಯನ ಶಿಬಿರಗಳು ನಡೆಯತೊಡಗಿದವು. ಇದೇ ಹೊತ್ತಿಗೆ ಬಳ್ಳಾರಿ ಜಿಲ್ಲೆಯ ಇತರೆಡೆ, ಚೆನ್ನಬಸವಣ್ಣ ರಾಜಶೇಖರ್ ನಿರಮಾನ್ವಿ ಇವರುಗಳು 'ಬಂಡಾಯ ಸಾಹಿತ್ಯ ಸಂಘಟನೆ' ಶುರುಮಾಡಿ, ಎಡಪಂಥದ ಒಂದು ಹೊಸ ಅಧ್ಯಾಯ ಬಳ್ಳಾರಿ ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಈ ಚಳವಳಿಗಳ ಅಡಿಪಾಯದಲ್ಲಿಯೇ 'ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ' (ಸಿ.ಪಿ.ಎಂ.)ದ ಸಂಘಟನೆಯೂ ಬಳ್ಳಾರಿ ಜಿಲ್ಲೆಯಲ್ಲಿ ಶುರುವಾಯಿತು. ಸಿ.ಪಿ.ಎಂ.ನ ಬಲವರ್ಧನೆಗೆ ಅಕ್ಷರಶಃ ತಮ್ಮ ಜೀವನವನ್ನೇ ಮುಡುಪಾಗಿಟ್ಟ 'ಕಾಮ್ರೆಡ್ ಎಸ್.ಎಸ್.' ಕರ್ನಾಟಕದ ಎಡಪಂಥೀಯ ಚಳವಳಿಯಲ್ಲಿ ಗಮನಾರ್ಹ ವ್ಯಕ್ತಿಯಾಗಿದ್ದರು. 1985ರಲ್ಲಿ ಸಿ.ಪಿ.ಎಂ.ನಿಂದ ದೂರ ತಳ್ಳಲ್ಪಡುವ ಹೊತ್ತಿಗೆ, ಎಸ್.ಎಸ್. ಬಳ್ಳಾರಿ ಜಿಲ್ಲೆಯಲ್ಲಿ ಆಗಷ್ಟೇ ಚಣ್ಣ ಬಿಟ್ಟು ಪ್ಯಾಂಟು ಹಾಕಲು ಶುರುಮಾಡಿದ್ದ ಹುಡುಗರನ್ನು ಎಡಪಂಥದ ನಾಯಕರನ್ನಾಗಿಯೂ, ವೈಚಾರಿಕರನ್ನಾಗಿಯೂ ರೂಪಿಸಿಬಿಟ್ಟಿದ್ದರು. ಇವತ್ತು ಸಿ.ಪಿ.ಎಂ.ನ ಕರ್ನಾಟಕ ಸೆಕ್ರೆಟರಿಯೇಟ್ ಸದಸ್ಯರಾಗಿರುವ ಎಸ್.ವೈ.ಗುರುಶಾಂತ್, ರಾಜ್ಯ ಸಮಿತಿ ಸದಸ್ಯರಾಗಿರುವ ಕಾರ್ಮಿಕ ಮುಖಂಡ ಪ್ರಸನ್ನ ಕುಮಾರ್, ರೈತ ಮುಖಂಡ ಬಸವರಾಜ್ ಇವರೆಲ್ಲ ಎಸ್.ಎಸ್. ನಾಯಕರಾಗಿ ಬೆಳೆಸಿದ ಹುಡುಗರು.

ಹಿರೇಮಠ್ ಸಿ.ಪಿ.ಎಂ.ನಿಂದ ದೂರ ತಳ್ಳಲ್ಪಟ್ಟ ನಂತರ ಚಳವಳಿಗಳ ಲೆಕ್ಕದಲ್ಲಿ ಅಜ್ಞಾತವಾಸದಲ್ಲಿ ಇದ್ದ ಹಾಗೆ ಎಸ್.ಎಸ್. ಬದುಕಿದ್ದರು. ಆದರೆ, ತಾನು ಹೋದ ಕಾಲೇಜುಗಳಲ್ಲೆಲ್ಲ ಶೂದ್ರ-ದಲಿತ ಹುಡುಗರನ್ನು ವೈಚಾರಿಕವಾಗಿ ರೂಪಿಸುವ ಕಾಯಕವನ್ನು ಅವರು ನಡೆಸಿಕೊಂಡೇ ಹೊರಟರು. ಈ ಕಾರಣಕ್ಕೆ, ಕಾಲೇಜಿನ ಆಡಳಿತ ಮಂಡಳಿಗಳಿಂದ ಸದಾ ಕಿರಿಕಿರಿ ಅನುಭವಿಸುತ್ತಲೇ ಇದ್ದರು. ಎಸ್.ಎಸ್. 'ಚಣ್ಣದ ಹುಡುಗರ'ಪಡೆ ಕಟ್ಟಿದ ಊರುಗಳ ಬೀದಿಗಳಲ್ಲಿ ಇವತ್ತು ಕೇಸರಿ ಬಟ್ಟೆ ತಲೆಗೆ ಸುತ್ತಿ ಕುಣಿವ ಶೂದ್ರ ಸಮುದಾಯದ ಭಜರಂಗದಳದ ಹುಡುಗರು, ಗಣಿಹಣ ಝಣಝಣ ಹುಡಿ ಹಾರಿಸಿ ಎಂ.ಎಲ್.ಎ., ಮಂತ್ರಿಗಳಾಗಿರುವ ಹುಡುಗರು 'ಚೆಡ್ಡಿ' ಹಾಕಿಕೊಂಡು ಮೆರೆಯುತ್ತಿದ್ದಾರೆ.

ಸಂಸಾರಸ್ಥರಾಗಿದ್ದ ಹಿರೇಮಠ್ ತನ್ನ ಸಂಬಳದ ಎಷ್ಟು ಪಾಲನ್ನು ಸಂಸಾರಕ್ಕೆ, ಎಷ್ಟನ್ನು ಚಳವಳಿಗೆ ಹಾಕುತ್ತಿದ್ದರು ಎಂದು ಹೇಳುವುದು ಕಷ್ಟ. ಒಂದು ಹೆಣ್ಣು, ಎರಡು ಗಂಡು ಮಕ್ಕಳಿರುವ ಕುಟುಂಬ ಅವರದು. ತಮ್ಮ ಸಂಸಾರದ ತಾಪತ್ರಯಗಳನ್ನು ಹೆಚ್ಚಾಗಿ ಯಾರ ಹತ್ತಿರವೂ ಅವರು ತೋಡಿಕೊಳ್ಳುವವರಲ್ಲ. ದೊಡ್ಡಮಗನಿಗೆ ಒಂದು ನೆಲೆ ಕಾಣಿಸುವುದು ತೊಂದರೆಯಾದರೂ, ಯಾರಿಗೂ ಬೇಡಿದವರಲ್ಲ. ಕೊನೆಗೆ ಆಪ್ತರೇ, ಮುತುವರ್ಜಿ ವಹಿಸಿ ಆ ಹುಡುಗನಿಗೆ ಒಂದು ಕೆಲಸ ಕೊಡಿಸಿದ್ದರು. ಅವರಿಗೆ ಮಾರಣಾಂತಿಕ ಕಾಯಿಲೆ ಕಾಣಿಸಿಕೊಳ್ಳುವ ಹೊತ್ತಿಗೆ ಆ ಹುಡುಗ ವಿಕಾರಿಕ ನಾಪತ್ತೆಯಾದ. ಕಿರಿ ಮಗನಿಗೆ ಆರೋಗ್ಯ ಏನೂ ಸರಿ ಇಲ್ಲ. ಜೀವನದಲ್ಲಿ ಯಾರಿಗೂ ಏನೂ ಬೇಡದ ಮನುಷ್ಯ, ಮಗನ ಹುಡುಕಾಟಕ್ಕಾಗಿ ತನ್ನ ಶಿಷ್ಯಂದಿರು, ಸ್ನೇಹಿತರು, ಅಧಿಕಾರಸ್ಥರು, ಮಂತ್ರ-ತಂತ್ರಗಳನ್ನೆಲ್ಲ ಬೆನ್ನು ಹತ್ತಿದರು. ಮಗನಿಗಾಗಿ ಅವರ ಹುಡುಕಾಟ, 2002ರ ಗುಜರಾತ್ ಹಿಂಸಾಕಾಂಡದಲ್ಲಿ ಮಕ್ಕಳನ್ನು ಕಳೆದುಕೊಂಡವರ ಹುಡುಕಾಟದ ವಿವರಗಳನ್ನು ನೆನಪಿಸುವಂತೆ ಮಾಡುತ್ತಿತ್ತು. ಎಸ್.ಎಸ್.ಹಿರೇಮಠ್ ಸಾವನ್ನಪ್ಪುವ ಕೆಲವೇ ದಿನಗಳ ಮುಂಚೆ ಗುಜರಾತ್ ಸರಕಾರದ ಕಂಡಾಯ ಇಲಾಖೆ ಒಂದು ಅಸಂಗತವೂ, ಭಯಾನಕವೂ ಆದ ನಿರ್ಧಾರವನ್ನು ಪ್ರಕಟಿಸಿತು- "ಗೋಧ್ರ ಘಟನೆಯ ನಂತರ ನಡೆದ ಹಿಂಸಾಚಾರದಲ್ಲಿ ಕಾಣೆಯಾದವರ ಸುಳಿವು ಏಳು ವರ್ಷಗಳ ನಂತರವೂ ಸಿಕ್ಕಿಲ್ಲವಾಗಿ, ಅವರೆಲ್ಲ ಸತ್ತಿರುವರು ಎಂದು ಘೋಷಿಸಲಾಗಿದೆ."

■ ಕೆ.ಫಣಿರಾಜ್

...ತವಾಗಿ ರಾಜ್ಯದ ಮೂಲೆಮೂಲೆಗಳಲ್ಲಿ ಅವರಿಗೆ ...ನಿಗಳು ಸೃಷ್ಟಿಯಾಗಿದ್ದಾರೆ. ಯಾವ 'ದೊಡ್ಡ' ...ಬೆಂಬಲವಿಲ್ಲದೆ ಇಂತಹದೊಂದು ಪತ್ರಿಕೆಯನ್ನು ...ನ್ನು ನಡೆಸಿಕೊಂಡು ಬರುತ್ತಿರುವುದರಲ್ಲಿ ಈ ...ಟಿ ಮತ್ತು ಮರುಹುಟ್ಟು ಪ್ರಮುಖ ಪಾತ್ರ ...

...ನತ್ತು ಬರುತ್ತಿರುವ ಇನ್ನಿತರ ಟ್ಯಾಬ್ಲಾಯ್ಡ್‌ಗಳಿಗೆ ...ಸಿದರೆ ಗೌರಿಯವರಿಗೆ ಕೋಪ ಬರಬಹು... ? ಆದರೆ ಹೇಳಲೇಬೇಕಾದ್ದಿದೆ. ಕರ್ನಾಟಕದಲ್ಲಿ ... ವಿವಿಧ ಸಂಗತಿಗಳ ಬರೆಯಬಲ್ಲ ಸಾವಿರಾರು ...ನೂರು ಮೂಲೆಗಳಲ್ಲಿ ಸೃಷ್ಟಿಯಾಗಿದ್ದಾರೆ. ಹೊಸ ...ಗಳು, ಕವಿಗಳು ಹುಟ್ಟಿಕೊಂಡಿದ್ದಾರೆ. ಅವರೆಲ್ಲರಿಗೆ ...ಶ್ ತಮ್ಮದೂ ಕೂಡಾ ಎನ್ನಿಸದೇ ಇರುವುದರಲ್ಲಿ ... ಒಳಗೇ ಏನೋ ಕೊರತೆಯಿದೆ ಎಂಬೆನಿಸುತ್ತದೆ. ...ವಾದವನ್ನು ಹೊರತುಪಡಿಸಿದಂತೆ ಇತರೆ ...ಕಾರಿ ವಿದ್ಯಮಾನದ ಕುರಿತು ನಿರಂತರವಾದ ...ಸಂಗ್ರಾಮವನ್ನು ರೂಪಿಸುವ ಅಗತ್ಯ ಅವಕಾಶ ... ಇದ್ದಾಗ ಆ ನಿಟ್ಟಿನಲ್ಲಿ ಪತ್ರಿಕೆ ಏನೂ ಮಾಡ... ಭ್ರಷ್ಟಾಚಾರಕ್ಕಿಂತ ಕೋಮುವಾದ ಹೆಚ್ಚು ...ಕಾರಿ ಎಂದು 'ಲಂಕೇಶ್'ನ ಮೊದಲ ಸಂಚಿಕೆ ...ಕೆ ಮಾಡಿದ್ದ ತರುಣ್ ತೇಜ್‌ಪಾಲ್ ಹೇಳಿದ್ದರು. ...ಯೋ ಏನೋ ಕೋಮುವಾದದ ಆಚೆ ಇನ್ನಿತರ ...ಗಳ ಕುರಿತು ಇಲ್ಲಿ ಗಮನಹರಿಸಿದ್ದು ಕಡಿಮೆ. ...ನಿಮಾಗಳ ಕುರಿತಂತೆ ಮತ್ತು ಕೆಲವು ವ್ಯಕ್ತಿಗಳ ...ೆ ತೋರುತ್ತಾ ಬಂದ ಅನಗತ್ಯ ಜಿಗುಟುತನವೂ ...ಪೊರೆ ಎಂದೇ ನನಗನ್ನಿಸಿದೆ.

...ವಾಗಲೂ ಮರುಹುಟ್ಟು ಪಡೆದ ಗೌರಿ ... ಪತ್ರಿಕೆಯು ಕಳೆದ 4 ವರ್ಷಗಳ ಕಾಲದಲ್ಲಿ ...ಾಗದ್ದು ಬಹಳಷ್ಟೇ ಇರಬಹುದು. ಆದರೆ ...ವರ್ಷಗಳ ಕಾಲದಲ್ಲಿ ತನ್ನ ಕಾಲ ಮೇಲೆ ತಾನು ... ನಿಂತಿದೆಯೋ ಅದು ದೊಡ್ಡ ಸಾಧನೆಯೇ. ...ಪೊರೆ ಕಳಚುವ ಅಗತ್ಯವಿದೆ, ಅಂತಹ ಕಾಲ ... 'ಪತ್ರಿಕೆ' ಅದಕ್ಕೆ ಬೇಕಾದ ಅಂತಃಶಕ್ತಿಯನ್ನು ...ದೆ ಎಂದು ನಾನು ಭಾವಿಸುತ್ತೇನೆ.

■ ವಾಸು ಎಚ್.ವಿ.

ಕರ್ನಾಟಕ ಜನಪರ ವೇದಿಕೆ




ರೈತನಾಯಕ ...ಮಲಿಂಗಯ್ಯ

[illegible]

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 8



ಅಕ್ಷರ ರೂಪ: ಅಕ್ಷತಾ ಕೆ.

ಸರ್ಕಾರ ಹೆದರಿದ್ದು ಉಪವಾಸಕ್ಕೋ? ಒಣಮೀನಿನ ವಾಸನೆಗೋ?

ನಾನು ತೀರ್ಥಹಳ್ಳಿ ತಾಲ್ಲೂಕು ರೈತ ಸಂಘದ ಅಧ್ಯಕ್ಷನಾಗಿದ್ದ ಕಾಲದಲ್ಲಿ ನನ್ನ ಬಳಿ ರಾಜ್‌ದೂತ್ ಮೋಟಾರ್ ಸೈಕಲ್ಲಿತ್ತು, ನನ್ನ ಬದುಕಿನಲ್ಲಿ ಮೊದಲಿಗೆ ಕೊಂಡ ಫಸ್ಟ್ ಹ್ಯಾಂಡ್ ವಾಹನ ಅದು. ಅಲ್ಲಿವರೆಗೆ ಕೊಂಡದ್ದೆಲ್ಲ ಸೆಕೆಂಡ್ ಹ್ಯಾಂಡ್ ವಾಹನಗಳನ್ನೇ. ಮೂರು, ನಾಲ್ಕು ಗಿರಾಕಿಗಳ ಕೈ ಸೇರಿ ಅವರೆಲ್ಲ ಬಳಸಿ ನಂತರ ಗುಜರಿಗೆ ಹಾಕೋ ಸ್ಥಿತಿಯಲ್ಲಿದ್ದ ಎಷ್ಟೋ ವಾಹನಗಳನ್ನು ನಾನು ಕೊಂಡು ಅವು ನನ್ನನ್ನು ಹೊರೋದಿರ್ಲಿ ನಾನೇ ಅವನ್ನು ಹೊತ್ಕೊಂಡು ಹೋಗಿ ಮ್ಯಾನೇಜ್ ಮಾಡಿದ ಸಂದರ್ಭಗಳು ಇದೆ. ಹೊಚ್ಚ ಹೊಸ ವಾಹನ ಕೊಳ್ಳೋ ಆಲೋಚನೆ ಏನೂ ನನಗಿರಲಿಲ್ಲ, ಆಗ ಶಿವಮೊಗ್ಗದ ವೈಶ್ಯ ಬ್ಯಾಂಕಿಗೆ ಅಧಿಕಾರಿಯಾಗಿ ಬಂದಿದ್ದ ನನ್ನ ಕುಟುಂಬದ ಗೆಳೆಯರಾದ ಅಸಗೋಡು ಪುಟ್ಟಯ್ಯ ಅವರು ಒತ್ತಾಯ ಪೂರ್ವಕವಾಗಿ ಅವರ ಬ್ಯಾಂಕಿನಿಂದ ವಾಹನ ಸಾಲ ಕೊಡಿಸಿದ್ದರು. ಬ್ಯಾಂಕಿನಿಂದ ಸಾಲ ಪಡೆದ ಮೇಲೆ ಹೊಸ ಬೈಕನ್ನು ಕೊಳ್ಳಲೇಬೇಕಾದ ಅನಿವಾರ್ಯತೆ ಉಂಟಾಯಿತು.

ಆದರೆ ಯಾವನೋ ಒಬ್ಬ ಶನಿ ಬೈಕ್ ತಗಂಡ ಹೊಸತರಲ್ಲೇ "ರಾಜ್‌ದೂತ್ ಬೈಕ್ ಅಂದ್ರೆ ನಂಗೆ ತುಂಬಾ ಇಷ್ಟ. ಅದೊಂತರ ಅಂಬಾಸಡರ್ ಕಾರಿದ್ದಂಗೆ. ನಾನು ಎಷ್ಟೋ ಬೈಕ್ ಓಡಿಸಿ ನೋಡಿದೀನಿ. ಎಲ್ಲದರಲ್ಲೂ ಇದೆ ಬೆಸ್ಟು" ಅಂತೆಲ್ಲ ನನ್ನ ತಲೆಗೆ ಚೆನ್ನಾಗಿ ಎಣ್ಣೆ ತಿಕ್ಕಿ "ಒಂದೇ ಒಂದು ಸುತ್ತು ನಿಮ್ಮನೆ ಮುಂದೆ ಓಡಿಸಿ ನೋಡ್ತೀನಿ" ಅಂತ ತಗಂಡೋಗಿ ಮನೆ ಹತ್ತಿರದ ಮೋರಿಗೆ ಕುಟ್ಟಿ ಬೆಂಡ್ ಮಾಡಿ ತಂದುಕೊಟ್ಟಿದ್ದ. ಬೈಕಿನ ಚಾರ್‌ಸಿ ಪೂರ್ತಿ ಬೆಂಡಾಗಿದ್ದರಿಂದ ಹ್ಯಾಂಡಲ್ ಒಂದು ಕಡೆಗೆ ಎಳೀತಿತ್ತು. ಹ್ಯಾಂಡ್ಲ್ ಅನ್ನು ದೂಕಿ ಹಿಡ್ಕಳದೆ ಹೋದರೆ ಚಕ್ರ ಚರಂಡಿ ಕಡೆ ಎಳೆಯದು. ಇಂಥ ಭಂಡಾಟದಲ್ಲೂ ಪೂರ್ತಿ ಮೂರು ವರ್ಷ ತೀರ್ಥಹಳ್ಳಿ ರೈತ ಸಂಘದ ಅಧ್ಯಕ್ಷನಾಗಿದ್ದಾಗ ಇದೇ ರಾಜ್‌ದೂತ್ ಮೋಟಾರ್ ಸೈಕಲ್ಲಲ್ಲಿ ಹಳ್ಳಿಹಳ್ಳಿ ಓಡಾಡಿದ್ದೀನಿ. ಇದರಿಂದ ಇನ್ನೊಂದು ಅನುಕೂಲವೂ ಇತ್ತು. ಎಲ್ಲಿಗೆ ಹೋಗದಿದ್ದರೂ ಯಾರೂ ನನ್ನ ಮೋಟಾರ್ ಸೈಕಲ್ ಅನ್ನು ಮುಟ್ತಾ ಇರಲಿಲ್ಲ. "ಅದು ಶಾಮಣ್ಣಂಗೆ ಸೈ ಮಾರಾಯ್ರೆ" ಅಂತ ಬಿಟ್ಟು ಬಿಡೋರು.

ಆ ಸಂದರ್ಭದಲ್ಲಿ ಕೋಡ್ಲು ವೆಂಕಟೇಶ ರೈತ ಸಂಘದ ಕಾರ್ಯದರ್ಶಿ. ನಾನೇ ಒತ್ತಾಯ ಮಾಡಿ ಅವನಿಗೆ ಕಾರ್ಯದರ್ಶಿ ಆಗಲಿಕ್ಕೆ ಒಪ್ಪಿಸಿದ್ದೆ. ಬಹಳ ನೇರಾನೇರ ಮನುಷ್ಯ ಕೋಡ್ಲು. ಯಾವುದಾದರೂ ಕೆಲಸ ಆಗಬೇಕು ಅಂದ್ರೆ ಆಗಲೇಬೇಕು ಅವನಿಗೆ, ಅಲ್ಲಿತನಕ ಬಿಡ್ತಿರಲಿಲ್ಲ, ತುಂಬಾ ಪ್ರಾಮಾಣಿಕ ಬೇರೆ. ಆದಕ್ಕೆ ಬೇರೆಯವರಲ್ಲಿ ಒಂಚೂರು ಅಪ್ರಾಮಾಣಿಕತೆ ಕಂಡ್ರು ಸಹಿಸಕ್ಕಾಗ್ತಿರಲಿಲ್ಲ, ಸಿಟ್ಟಾಗಿ ಅಂತವರ ಮೇಲೆ ಏರಿ ಹೋಗ್ತಿದ್ದ. ವೆಂಕಟೇಶ ಎಷ್ಟೇ ಹಾರಾಡಿದ್ರೂ ನೀವವನಿಗೆ ಮೂಗುದಾಣ ಹಾಕ್ತೀರಿ. ಅವನಿಗೆ ನೀವೇ ಸರಿ ಅಂತ ಎಲ್ಲ ಹೇಳೋರು. ಅವನ ಸಿಟ್ಟನ್ನ ನನ್ನ ತಾಳ್ಮೆ ತಣ್ಣಗೆ ಮಾಡೋದು. ಆದ್ದರಿಂದ ನಾವಿಬ್ಬರು ತುಂಬಾ ಚೆನ್ನಾಗಿ ಹೊಂದಿಕೊಂಡು ಕೆಲಸ ಮಾಡಕ್ಕೆ ಸಾಧ್ಯ ಆಯ್ತು, ವೆಂಕಟೇಶನ ಅವ್ವ ಎಂಥ ಹೆಂಗಸೆಂದರೆ ರೈತ ಸಂಘದ ಸಭೆ ಅದು ಇದು ಅಂತ ಅರ್ಧರಾತ್ರಿಗೆ ಇವನು ಮೂರ್ನಾಲ್ಕು ಜನನ್ನ ಮನೆಗೆ ಕರ್ಕಂಡು ಹೋದ್ರೂ ಆ ಅವ್ವ ಹುರುಳೀನೋ ಮತ್ತೊಂದೊ ಅರೆರಾತ್ರಿಯಲ್ಲಿ ಬೇಯಿಸಿ ಬಂದವರಿಗೆ ಅಡುಗೆ ಮಾಡಿ ಬಡಿಸುತ್ತಿದ್ದರು.

ತಾಲ್ಲೂಕಿನ ನಾಲ್ಕು ಹೋಬಳಿಗಳಾದ ಕಸಬಾ, ಮುತ್ತೂರು, ಆಗುಂಬೆ, ಮಂಡಗದ್ದೆ ಹೀಗೆ ಪ್ರತಿ ಹೋಬಳಿಗೆ ರೈತ ಸಂಘದ ಒಬ್ಬ ಅಧ್ಯಕ್ಷ ಮತ್ತು ಕಾರ್ಯದರ್ಶಿಯನ್ನು ನೇಮಿಸಿಕೊಂಡೆ. ಪ್ರತಿ ಹಳ್ಳಿ ಹಳ್ಳಿಯನ್ನು ನಾನು ಮತ್ತು ವೆಂಕಟೇಶ ಬಿಡದೇ ಸುತ್ತಿ ರೈತರ ಕಷ್ಟ ಸುಖ, ಅವರ ಸಮಸ್ಯೆಗಳನ್ನು ಕೇಳಿ ತಿಳಿಯುತ್ತಿದ್ದೆವು. ಮಲೆನಾಡಿನ, ಅದರಲ್ಲೂ ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಭೂಮಿ ಹಂಚಿಕೆಯ ಸಮಸ್ಯೆ ಇಲ್ಲ, ಇರೋ ಭೂಮಿ ಬಹುತೇಕ ಹಂಚಿಕೆ ಆಗಿದೆ. ಜೊತೆಗೆ ನೂರಾರು ಎಕರೆ ಜಮೀನಿರೋ ದೊಡ್ಡ ಜಮೀನುದಾರರು ಅನ್ನೋರು ಯಾರು ಇಲ್ಲ, ಯಾರಿಗಾದರೂ ಐದು, ಆರು ಎಕರೆ ತೋಟ ಇದ್ದು ಬಿಟ್ರೆ ಅಂದ್ರೆ ಅವರೇ ಶ್ರೀಮಂತರು. ಸಣ್ಣ ಹಿಡುವಳಿದಾರರೇ ಈ ಭಾಗದಲ್ಲಿ ಹೆಚ್ಚಿಗಿರುವವರು. ಮಳೆ ಬರಲಿಲ್ಲ ನೀರು ಕಡಿಮೆಯಾಗಿ ಇಳುವರಿ ಕಡಿಮೆ ಅನ್ನೋ ಮಾತು ಇಲ್ಲಿನ ರೈತರ ಬಾಯಲ್ಲಿ ಬರ್ತಿರಲಿಲ್ಲ, 80ರ ದಶಕದಲ್ಲಂತೂ ಇಲ್ಲವೇ ಇಲ್ಲ, ಬಿರು ಬೇಸಿಗೆಯಲ್ಲಿ ಸಹ ಇಲ್ಲಿನ ತೋಟದಲ್ಲಿ ನೀರಿನ ಪಸೆ ಪೂರ್ತಿ ಬತ್ತಾ ಇರಲಿಲ್ಲ, ಇಲ್ಲಿನ ಸಮಸ್ಯೆ ಅನಾವೃಷ್ಟಿಯದಲ್ಲ, ಅತೀವೃಷ್ಟಿಯದು. ಮಳೆ ಹೆಚ್ಚಾಗಿಯೇ ಈ ಭಾಗದಲ್ಲಿ ರೈತರಿಗೆ ಸಮಸ್ಯೆ ಆಗ್ತಾ ಇದ್ದಿದ್ದು.

ತಾಲ್ಲೂಕು ರೈತ ಸಂಘದ ಅಧ್ಯಕ್ಷನಾಗಿ ನೇಮಕವಾದ ಒಂದೆರಡು ತಿಂಗಳಿಗೆ ಮಳೆಗಾಲ ಪ್ರಾರಂಭವಾಯ್ತು, ಆ ವರ್ಷ ತೀರ್ಥಹಳ್ಳಿಯಲ್ಲಿ ಮಳೆಯ ಅಬ್ಬರವೇ ಅಬ್ಬರ. ತುಂಗಾ ನದಿಯಲ್ಲಿ ಪ್ರವಾಹ ಉಕ್ಕಿ ಸುತ್ತಮುತ್ತಲ ಊರುಗಳಿಗೆ ನೀರು ನುಗ್ಗಿತು. ಗದ್ದೆ ತೋಟ ರಸ್ತೆ ಎಲ್ಲವೂ ನೀರಿನಿಂದ ಆವೃತವಾದವು. ತುಂಗೆ ಎಲ್ಲೆಲ್ಲಿ ಹರಿತಾಳೋ ಆ ಭಾಗದಲ್ಲೆಲ್ಲ ಪ್ರವಾಹದ ಪರಿಣಾಮ ಕಾಣಿಸಿಕೊಂಡಿತು. ಮಂಡಗದ್ದೆಯ ರಸ್ತೆಯಂತೂ ನೀರಿನಿಂದ ತುಂಬಿಕೊಂಡು ಹಣಗೆರೆಕಟ್ಟೆ ರಸ್ತೆ ಮೂಲಕ ಓಡಾಡಬೇಕಾಯಿತು. ದೊಡ್ಡ ವರ್ಷ, ಸಣ್ಣ ವರ್ಷ ಎರಡೂ ಮಳೆಗಳು ಭರ್ಜರಿ ಹೊಡೆದು ನೆರೆ ಬರಲಿಕ್ಕೆ ಕಾರಣವಾಯಿತು. ಅದರಲ್ಲೂ ಸಣ್ಣ ವರ್ಷ ಮಳೆಗಿಂತ ಗಾಳಿ ಜಾಸ್ತಿ, ಗಾಳಿಯ ಅಬ್ಬರಕ್ಕೆ ಅಡಿಕೆಯ ಕಾಯಿಗಳೆಲ್ಲ ನೆಲಕ್ಕೆ, ಜೊತೆಗೆ ಮಳೆಯು ಹೆಚ್ಚಾದ್ದರಿಂದ ಅಡಿಕೆಯ ಮರಗಳಿಗೆ ಕೊಳೆರೋಗ ಬಂದು ಪೂರ್ತಿ ಬೆಳೆ ನಷ್ಟ ಆಯಿತು. ಮಳೆ ಜೋರಾಗಿ ಹೊಡೆದಿದ್ದು ಮೂರೇ ದಿನವಾದರೂ ಅದು ಉಂಟುಮಾಡಿದ ನಷ್ಟ ಕಷ್ಟ ವರ್ಷಾನುಗಟ್ಟಲೆ ಅನುಭವಿಸಬೇಕಾಯಿತು. ರೈತರು ದಿಕ್ಕು ತೋಚದ ಸ್ಥಿತಿಯಲ್ಲಿದ್ದರು.

ಸರ್ಕಾರ ಈ ಸಂದರ್ಭದಲ್ಲಿ ತಾನೇ ಮುಂದೆ ನಿಂತು ನೊಂದ ರೈತರಿಗೆ ಪರಿಹಾರ ನೀಡಬೇಕಿತ್ತು. ಆದರೆ ಯಾವ ಅಧಿಕಾರಿಯು ಆ ಕಡೆ ತಲೆ ಹಾಕಲಿಲ್ಲ, ರೈತರು ಪ್ರವಾಹದಲ್ಲಿ ಜಾನುವಾರು, ಗದ್ದೆ ತೋಟ ಎಲ್ಲವನ್ನು ಕಳೆದುಕೊಂಡು ಎಂಥ ಆಘಾತದಲ್ಲಿದ್ದರು ಎಂದರೆ ಪರಿಹಾರಕ್ಕಾಗಿ ಒತ್ತಾಯಿಸೋ ಶಕ್ತಿಯೂ ಅವರಲ್ಲಿ ಉಳಿದಿರ್ಲಿಲ್ಲ. ಹಾರೋಗದ್ದೆ ಹತ್ತಿರ ಕೊಂಡ್ಲೂರುನಲ್ಲಿ ಒಬ್ಬ ರೈತನ ತೋಟ ಪ್ರವಾಹದ ಹೊಡೆತಕ್ಕೆ ಜಾರಿಕೊಂಡು ಹೋಗಿ ಸ್ವಲ್ಪ ದೂರದಲ್ಲಿರುವವನ ಗದ್ದೆ ಮೇಲೆ ಹೋಗಿ ಕೂತಿತು. ಈಗ



ತೋಟದ ಮಾಲೀಕ ಹೆಂಗೆ ಪರಿಹಾರ ಕೇಳ್ತಾನೆ? ನಷ್ಟಕ್ಕೀಡಾದ ತೋಟ ತೋರಿಸು ಅಂದ್ರೆ ಅದು ಅವನಿಗೆ ಸಂಬಂಧಪಟ್ಟ ಜಾಗದಲ್ಲಿಲ್ಲ, ಜೊತೆಗೆ ಇವನ ತೋಟ ಹೋಗಿ ಕೂತಿದ್ಯಲ್ಲ ಆ ಜಮೀನಿನ ಒಡೆಯನು ಪರಿಹಾರ ಕೇಳೋ ಹಾಗಿಲ್ಲ ಏಕೆಂದರೆ ಅವನ ಜಮೀನಿನ ಮೇಲೆ ಇವನ ತೋಟ ಕೂತು ಅವನ ಜಮೀನೇ ಕಾಣದ ಹಾಗಾಗಿದೆ. ಇಂಥ ಅಸಂಗತ ಘಟನೆಗಳು ನಡೆದಿದ್ದವು.

ನೊಂದ ರೈತರ ಬಗ್ಗೆ ಸರ್ಕಾರ ಪೂರ್ತಿ ನಿರ್ಲಕ್ಷ್ಯ ಧೋರಣೆ ತೋರಿಸಿತ್ತು, ನಾವು ಸುಮ್ಮನಾಗಲಿಲ್ಲ, ತಾಲ್ಲೂಕಿನ ರೈತ ಸಂಘದ ಪ್ರತಿನಿಧಿಗಳು ಹಳ್ಳಿ ಹಳ್ಳಿ ಸುತ್ತಿ ನಷ್ಟ ಆಗಿದ್ದರ ಬಗ್ಗೆ ಮಾಹಿತಿ ಸಂಗ್ರಹಿಸಿದೆವು. ಒಬ್ಬೊಬ್ಬ ರೈತನಿಗಾದ ನಷ್ಟದ ಬಾಬತ್ತನ್ನು, ಅವರಿಗೆ ಬರಬೇಕಾದ ಪರಿಹಾರದ ಹಣವನ್ನು ಲೆಕ್ಕ ಹಾಕಿ ಒಟ್ಟು ಇಪ್ಪತ್ತು ಲಕ್ಷ ಪರಿಹಾರ ಕೊಡಬೇಕು ಎಂದು ಸರ್ಕಾರಕ್ಕೆ ತಹಶೀಲ್ದಾರ್ ಮೂಲಕ ಮನವಿ ಕೊಟ್ಟೆವು. ಸರ್ಕಾರ ಯಾವುದೇ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ, ಕೆಲವರು ಪರಿಹಾರ ಕೇಳ್ಕಂಡು ಶಾಸಕರ ಬಳಿ ಹೋಗಿ ಎಂದು ಸೂಚಿಸಿದರು. ಆಗ ಡಿ.ಬಿ. ಚಂದ್ರೇಗೌಡರು ತೀರ್ಥಹಳ್ಳಿಯ ಶಾಸಕರಾಗಿದ್ದರು. ನಾವು ಆ ಸೂಚನೆಯನ್ನು ತಿರಸ್ಕರಿಸಿದೆವು. ಇಷ್ಟು ಜನರ ಪ್ರತಿನಿಧಿ ಅವರು. ತಮ್ಮ ಕ್ಷೇತ್ರದ ಜನ ಕಷ್ಟದಲ್ಲಿದ್ದಾರೆ ಅನ್ನೋದನ್ನು ಅರ್ಥ ಮಾಡಿಕೊಂಡು ಅವರೇ ಜನಕ್ಕೆ ಸಹಾಯ ಮಾಡಬೇಕಿತ್ತು, ಅವರು ತಮಗೆ ಸಂಬಂಧ ಇಲ್ಲ ಅನ್ನೋ ತರ ಇದಾರೆ. ನಾವು ಯಾವುದೇ ಕಾರಣಕ್ಕೂ ಸಹಾಯ ಕೇಳ್ಕಂಡು ಅವರ ಹತ್ತಿರ ಹೋಗಲ್ಲ, ಹೇಗೆ ಪರಿಹಾರ ತಗೋಬೇಕು ಅಂತ ನಮಗೆ ಗೊತ್ತಿದೆ ಅಂದ್ವಿ. ತಹಶೀಲ್ದಾರ್ ಮತ್ತು ಅವರ ಸಹಾಯಕರನ್ನ ಪ್ರವಾಹದ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಕೊಡಿ ಅಂತ ಒತ್ತಾಯಿಸಿದೆವು. ಅವರು ಬಿಲ್‌ಕುಲ್ ಆ ಕೆಲಸ ಮಾಡದೇ ಸುಮ್ಮನಿದ್ದರು. ಹೀಗೆ ಹದಿನೈದು ದಿನ ಕಳೆಯಿತು. ಪರಿಹಾರಕ್ಕೆ ಒತ್ತಾಯಿಸಿ ತಾಲ್ಲೂಕು ಕಚೇರಿ ಮುಂದೆ ಧರಣಿ ನಡೆಸೋಣ ಎಂದು ತಿಳಿಸಲು ಪ್ರವಾಹ ಪೀಡಿತ ರೈತರ ಸಭೆ ಕರೆದರೆ ಬೆರಳೆಣಿಕೆಯಷ್ಟು ರೈತರು ಸಭೆಗೆ ಬಂದರು. ಅವರಿಗಾದರೂ "ಪಾಪ, ನಮ್ಮ ದುರದೃಷ್ಟಕ್ಕೆ ಶಾಮಣ್ಣ ಏನು ಮಾಡಕ್ಕಾಗತ್ತೆ" ಅನ್ನೋ ಭಾವನೆ.

ಇನ್ನು ಕಾದು ನೋಡಿ ಏನು ಪ್ರಯೋಜನ ಇಲ್ಲ ಅಂತ ತಿಳಿದು ತಾಲ್ಲೂಕು ಕಚೇರಿ ಮುಂದೆ ಉಪವಾಸ ಸತ್ಯಾಗ್ರಹ ಆರಂಭಿಸಿದೆ. ಕೋಡ್ಲು ವೆಂಕಟೇಶ ಮತ್ತೊಂದಿಷ್ಟು ರೈತರು ಧರಣಿ ಕುಳಿತರು. ನನ್ನೊಬ್ಬನದೆ ಉಪವಾಸ ತಾನೆ ಅವರಿಗೇನು ಅನ್ವಯಿಸ್ತಿರಲಿಲ್ಲವಲ್ಲ. ಆದಕ್ಕೆ ರೈತರ ಮನೆಗಳಿಗೆ ಸುತ್ತಿ ಕರಿಮೀನು, ಸ್ವಾರ್ಲು ಮೀನು, ಬಂಗಡೆ ಮೀನು ಒಣಗಿಸಿಟ್ಟಿದ್ದು ಬೇಡಿ ತಂದ್ವಿ. ತಾಲ್ಲೂಕು ಆಫೀಸ್ ಎದುರಿಗೆ ಒಂದಷ್ಟು ಒಲೆ ಹೂಡಿ ಕುಚ್ಚಲಕ್ಕಿ ಗಂಜಿ ಒಣಕು ಮೀನು ಹುರ್ಕಂಡು ಧರಣಿ ನಿರತರು ಊಟ ಮಾಡ್ಕಂಡು ಧರಣಿ ಮುಂದುವರೆಸೋರು. ದಿನದಿನಕ್ಕೂ ಗಂಜಿ ಮೀನಿನ ಆಸೆಗಾದರೂ ಧರಣಿಗೆ ಬರೋರ ಸಂಖ್ಯೆ ಜಾಸ್ತಿಯಾಯಿತು.

ಪತ್ರಿಕೆಗೆ ಸುದ್ದಿಕೊಡಕ್ಕೆ ಲೆಟರ್ ಹೆಡ್ ಮಾಡಿಸಿದ್ವಿ. ಅದರಲ್ಲಿ ರಾಜ್ಯ ರೈತ ಸಂಘ, ತೀರ್ಥಹಳ್ಳಿ ಶಾಖೆ, ತಾಲ್ಲೂಕು ಕಚೇರಿ ಸಂಪಿಗೆ ಮರದ ಕೆಳಗೆ ಅಂತ ಬರೆಸಿದ್ದೆ. ಪತ್ರಿಕೆಯವರು ಚೆನ್ನಾಗಿ ಪ್ರಚಾರ ಕೊಟ್ಟರು. ಜನರ ಮೇಲೆ ಪ್ರಭಾವ ಆಗ ತೊಡಗಿ ತೀರ್ಥಹಳ್ಳಿಯ ಹೆಚ್ಚಿನ ಜನ ನಮ್ಮ ಸತ್ಯಾಗ್ರಹದ ಬೆಂಬಲಕ್ಕೆ ನಿಂತರು. ತಾಲ್ಲೂಕು ಆಫೀಸ್‌ನ ಎದುರಿಗೆ ಇಷ್ಟೆಲ್ಲ ನಡಿತಿದ್ರಿಂದ ಆಫೀಸ್‌ಗೆ ಬರೋಕೆ ಜನ ಹೆದರಿಕೊಂಡು ಈ ರೈತರ ಸಮಸ್ಯೆನಾ ಹೆಂಗಾದ್ರೂ ಬಗೆ ಹರಿಸಿ ಮಾರಾಯ್ರೆ ಅಂತ ಕೇಳಿಕೊಳ್ಳತೊಡಗಿದರು. ಜೊತೆಗೆ ತಾಲ್ಲೂಕು ಆಫೀಸ್ ಸುತ್ತಮುತ್ತ ಇರೋದೆಲ್ಲ ಕೊಂಕಣಿ ಬ್ರಾಹ್ಮಣರ ಮನೆಗಳು. ಒಣ ಮೀನಿನ ವಾಸನೆಗೆ ಅವರೆಲ್ಲ ಮನೆ ಬಿಡೋ ಪರಿಸ್ಥಿತಿ ಉಂಟಾಯ್ತು. ನಾನು ಉಪವಾಸ ಕೂತಿದ್ನಲ್ಲ ಮೂರನೆ ದಿನಕ್ಕೆ ಪೂರ್ತಿ ಸುಸ್ತಾಗಿ ಬಿಟ್ಟೆ. ಆದರೂ ಉಪವಾಸ ನಿಲ್ಲಿಸಲಿಲ್ಲ, ತಹಶೀಲ್ದಾರ್ ಪೂರ್ತಿ ಹೆದರಿಹೋದರು. ಐದನೆ ದಿನಕ್ಕೆ ಸರ್ಕಾರಕ್ಕೆ ವರದಿ ಕಳಿಸಿ ಒಂದೆ ದಿನದಲ್ಲಿ ಹದಿನೈದು ಲಕ್ಷ ಪರಿಹಾರದ ಹಣ ಮಂಜೂರಾಗುವಂತೆ ನೋಡಿಕೊಂಡರು. ಲಂಕೇಶ್ ಇದೇ ಸಂದರ್ಭದಲ್ಲಿ ಈ ಘಟನೆಯನ್ನು ಇಟ್ಕೊಂಡು 'ಮಲೆನಾಡಿಗೆ ಗಾಂಧಿಯನ್ನು ತಂದವರು' ಎಂದು ತಮ್ಮ ಪತ್ರಿಕೆಯಲ್ಲಿ ಲೇಖನ ಪ್ರಕಟಿಸಿದರು. ಆ ಲೇಖನ ಪ್ರಕಟವಾದ ನಂತರ ಎರಡನೇ, ಹಂತದ ಪರಿಹಾರ ಹಣವೂ ಮಂಜೂರಾಯಿತು.

ನಾನೊಂದು ಸತ್ಯ ಹೇಳಿಬಿಡ್ತೀನಿ: ಉಪವಾಸ ಸತ್ಯಾಗ್ರಹ ಮಾಡಿದ್ದು, ಉಪವಾಸದಿಂದ ನಿತ್ರಾಣವಾಗಿ ನನ್ನ ಆರೋಗ್ಯ ಕೆಟ್ಟಿದ್ದು, ಹೀಂಗೆ ಉಪವಾಸ ಮುಂದುವರೆದರೆ ಶಾಮಣ್ಣನ ಜೀವಕ್ಕೆ ಅಪಾಯ ಅಂತ ಎಲ್ಲರೂ ಹೆದರಿದ್ದು ಹೌದು. ಆದರೆ 'ಒಂದು ತೊಟ್ಟು ನೀರೂ ಕುಡೀದೆ ಉಪವಾಸ ಮಾಡಿದೆ' ಅಂತ ನಾನೇನು ಪ್ರಮಾಣ ಮಾಡಲಾರೆ. ಯಾಕೆಂದರೆ ರಾತ್ರಿ ಹೊತ್ತು ನಾನು ಆಸೆ ತಡೆಯಕ್ಕಾಗದೆ ಒಂದು ತುತ್ತು ಗಂಜಿ ಮತ್ತು ಕರಿಮೀನು, ಸ್ವಾರ್ಲು ಮೀನಿನ [illegible] ತುಂಡು ತಿಂದ... [illegible]

ಹಳೆ ಕಬ್ಣ, ಖಾಲಿ ಬಾಟ್ಲಿ, ಹಳೇ ಪೇಪರ್

ಕನ್ನಡ ಸಿನಿಮಾರಂಗಕ್ಕೆ ಎಪ್ಪತ್ತೈದು ವರ್ಷಗಳಾದ ಬಗ್ಗೆ ಉಗ್ರಿ ಟಿಟಿ ಮಾಡುತ್ತಿದ್ದ ಅದನ್ನು ಕೇಳಿದ ಕಾಣಮಾವ

"ಅಂಗಲೆ, ನಾನು ಹುಟ್ಟಿದಾಗ್ಲೆ ಬಯಿಸ್ಕೋಪು ಶುರುವಾಗ್ತದೇ ಅನ್ನು" ಎಂದ.

"ನಿನ್ನ ವಯಸ ಇಲ್ಲಿಗಂಟ ಕಂಡಿದಿಯಕ್ಯಾಗಿಲ್ಲ ಕಾಣಮಾವ. ನೀನು ಯಾವಾಗುಟ್ಟದೆ ಅಂತ ಹೇಳೋರೆ ಇಲ್ಲ ಹೋಗಿತ್ತಾಗ" ಎಂದ ಉಗ್ರಿ.

"ಅಲ್ಲ ಕಂಡ್ಯಾ. ನನ್ನ ವಯಸ್ಸ ಸುಳ್ಳೇಳದಾಗ್ಲಿ ನಿಜಹೇಳದಾಗ್ಲಿ ಅದರಿಂದ ಏನು ಫಾಯದೇ. ಇದೇ ಹಾಸನದ ದನಿನ ಜಾತ್ರೆಲಿ ಬ್ಯಾಡ್ರ ಕಣ್ಣಪ್ಪನ ಸಿನುಮ ನೋಡಿದಾಗ ನನಿಗೆ ಮದಿವಾಗಿ ಆಗಲೆ ಮೂರನೆ ಹುಡುಗ ಹುಟ್ಟಿದ ಕಂಡ್ಯ."

ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಮೂರನೆ ಹುಡುಗ ಅಂದ್ರೆ ಚಿಕ್ಕೇಗೌಡ ಅನ್ನು."

"ಊ, ಅವುನಿಗೆ ಈಗಾಗ್ಲೆ ಐವತ್ತರ ಮ್ಯಾಲಾಯ್ತು ಕಂಡ್ಯ."

"ಅವುನಿಗೆ ಐವ್ವತ್ತರ ಮ್ಯಾಲಾಯ್ತು ಅಂದ್ರೆ ನಿನಿಗೆ ಯಪ್ಪತ್ತರ ಮ್ಯಾಲಾಗಿ ಯಂಬತ್ತು ಯಟಗಿಸಿಗತ್ತಾ ಅದೆ ಕಣಮಾವ" ಎಂದ ಉಗ್ರಿ.

"ಇರಬವುದು ಬುಡು."

"ಯಾವ್ಯಾವ ಸಿನುಮ ನೋಡಿದ್ದೀ?"

"ಹಾಸನ, ಯಾಮಗಿರಿ ಜಾತ್ರೆಗೆ ಎತ್ತಡಕಂಡೋದಾಗ್ಯಲ್ಲ ನೋಡಿದ್ದಿನಿ. ಹರಿಚಂದ್ರ, ಸತಿಸಗತಿ, ಅಮ್ಯಾಲೇ ಮಯಿಸಾಸುರ, ಬಕ್ತಕನುಕದಾಸ, ಹಿಂಗೆ ಅವೇನು ವಸಿ ನೋಡಿದ್ದೆನೆ."

"ನೀನ್ಯಾವು ಸಿನುಮ ನೋಡಿದ್ದಿಯೋ ಸೀರ ಮಾವ?" ಎಂದಳು ಜುಮ್ಮಿ.

"ನಾನು ನೋಡಿರವ್ರೊಟ ಸಿನುಮ ನೀನು ನೋಡಿದ್ದಿಯೇನ್ಲೆ?"

"ಯಾವ್ಯಾವ ನೋಡಿದ್ದಿ ಹೇಳು."

"ಟಕ್ಕ ಬುಟ್ರು ಸಿಕ್ಕ, ಕಳ್ಳರಕಳ್ಳ, ರೌಡಿ ರಂಗಣ್ಣ, ಚೂರಿ ಚಿಕ್ಕಣ್ಣ, ಯಮ್ಮೆ ತಮ್ಮಣ್ಣ ಹಿಂಗೆ ನಾನು ನೋಡಿದ್ದಿನಿ" ಎಂದ ಸೀರ.

"ನೀನು ಈಚಿಗೆ ಸಿನುಮ ನೋಡ್ತಾಯಿಲವೇನೊ?" ಎಂದ ಉಗ್ರಿ.

"ನೀನು ಕಂಡಂಗೆ ನಾನೆಲ್ಲಿ ಸಿನುಮಕ್ಹೋಗಿದ್ದಿನ? ಯಾವತ್ತು ರಾಜಕುಮಾರ ತೀರಿಕೊಂಡನೊ ಅವತ್ತೇ ಸಿನುಮ ನೋಡದ ಬುಟ್ಟೆ."

"ನೀನು ನೋಡೋ ಅಂತ ಸಿನುಮನೆ ಕಣೊ ಈಗ ಬತ್ತಾಯಿರವು. ಅವತ್ತಿನ ಕಾಲಕೆ ರೌಡಿ ರಂಗಣ್ಣ, ಚೂರಿ ಚಿಕ್ಕಣ್ಣ ಯಮ್ಮೆ ತಮ್ಮಣ್ಣ ಬಂದ್ರೆ ಇವತ್ತು ಮೆಂಟ್ಲು ಮಂಜ, ದೆಡ್ಲಿ ಸೋಮ, ಕರಿಯ, ಪರಿಯ ಅಂತ ಬತ್ತಾ ಅವೆ, ಗೊತ್ತೆ?"

"ಯಂಥಾ ಸಿನುಮ ಬಂದ್ರು ಇವತ್ತು ನೋಡೋ ತರ ಇಲ್ಲ ಬುಡ್ಯ. ಆ ಕಾಲವೇ ಬ್ಯಾರೆ. ಮುಂಡೇವುಕೆ ರಾಜಕುಮಾರ ಬತ್ತನಂತೆ ಅಂತ ಗೊತ್ತಾಗಿ ಇಲ್ಲಿಂದ ಹೋಗಿದ್ರು ಜನ. ಇವತ್ತು ಯಾರು ಬಂದ್ರೂ ಹೋಗದಿಲ್ಲ ಅಂಗಾಗ್ಯದೆ ಕಾಲ."

"ಅವತ್ತಿನ ಕಾಲವೆ ಅಂಗಲವೇನೊ? ಸಿನುಮವ ಗುಟ್ಟಾಗಿ ತಗಿಯೋರು. ಅದೂ ಸ್ಟುಡಿಯೋದಲ್ಲಿ ತಗಿಯೋರು. ಬುಡೋರು. ಸಿನುಮದಲ್ಲಿ ನೋಡಿದೋರ ನಿಜವಾಗ್ಲೂ ನೋಡಕ್ಕೆ ಹಾತೊರೆಯೋರು. ಈಗ ಆಗುಟ್ರುಗಳು ಎಲ್ಲಿ ಅಂದ್ರಲ್ಲಿ ನೋಡಕ್ಕೆ ಸಿಗತವೆ. ಟವಿಲಂತೂ ಯಾವಾಗ ಅಂದ್ರಾವಾಗ ನೋಡಬವುದು. ಅದ್ಕೆ ನಿಮ್ಮ ಕಾಲದ ಇದಿಲ್ಲ ಇವತ್ತು" ಎಂದ ಉಗ್ರಿ.

"ಅಂಗಲ್ಲ ಕಂಡ್ಯ. ನಮ್ಮ ಕಾಲಕೆ ರಾಜಕುಮಾರಿದ್ದ. ಇವತ್ತ್ಯಾವನಿದ್ದನೂ? ಆ ಮುಸುಡಿ ನೋಡಕ್ಯಾದತ್ಲ" ಎಂದು ಸೀರ ಇವತ್ತಿನ ಹೀರೋಗಳನ್ನ ಮೂದಲಿಸಿದ್ದಕ್ಕೆ ಜುಮ್ಮಿ ನಗುತ್ತಾ

"ನಿಜ ಕಣಮಾವ. ರಾಜಕುಮಾರನ ವಟ್ಟೆಲೂ ಅವುನಂಥವು ಹುಟ್ಟಲಿಲ್ಲ"

"ಅವುನಂಥೋನು ತಿರಗ ಹುಟ್ಟದಿಲ್ಲ ಬುಡು. ಪಾಪ ಇವತ್ತಿರಬೇಕಾಗಿತ್ತು ಅವುನು" ಎಂದು ಸೀರ ಹೇಳುತ್ತಿರುವಾಗ,

"ಹಳೆ ಕಬ್ಣ, ಖಾಲಿ ಸೀಸ, ಹಳೆ ಪೇಪರ್" ಎಂದುಕೊಂಡು ವಾಟಿಸ್ಸೆ ಕಾಣಿಸಿಕೊಂಡ.

"ಇದೇನ್ಲ ಹಳೇಪೇಪ್ರು, ಹಳೆ ಸೀಸ ಅಂತಿ. ನೀನು ಬೆಳ್ಳೂರ ಸಾಬ್ರು ಜ್ವತಿಗೆ ಸೇರಿಕಂಡೋ ಯಂಗ್ಲ?" ಎಂದಳು ಜುಮ್ಮಿ.

"ನಾನ್ಯಾವತ್ತು ಇನ್ನೊಬ್ಬರ ಕಸುಬ ಕಿತಗಳದಿಲ್ಲ ಕಣಕ್ಕ, ನಾನಾತರ ಕೂಗಿದ್ನು ಏನು ಗೊತ್ತೆ?"

"ಏನ್ಲ?"

"ಫಿಲಂ ಸಾಂಗು ಕಣಕ್ಕ ಸಿನುಮ ಹಾಡು."

"ಅಹಹ ಸಿನುಮಾ ಆಡಂತೆ, ಇಂಗೂ ಇದ್ದವುಲ ಸಿನುಮಾ ಆಡು?"

"ಗಾಡ್ ಪ್ರಾಮಿಸ್ಸು ಕಣಕ್ಕ ರೀಸೆಂಟಾಗಿ ರಿಲೀಜಾಗಿರೊ ಸಿನುಮ ಹಾಡು. ಹಳೆ ಕಬ್ಣ ಖಾಲಿ ಸೀರ ಹಳೆ ಪೇಪರ್ ಕೇಳಕ್ಕೆ ಎಷ್ಟು ಚನ್ನಾಗ್ಯದಕ್ಕ."

"ನಿನ್ನಂಗೆ ಅದೆ ಬುಡು ನೀನಾಡೊ ಪದ."

"ಅಂದ್ರೆ ನಾನು ಓಲ್ಡ್ ಐರನ್, ಓಲ್ಡ್ ಪೇಪರ್ ತರ ಇದ್ದೀನೇನಕ್ಕ?"

"ಯಂಗಾರ ಇರು. ಕೇಳಿಸಗಳಂಗೆ ಪದ ಹಾಡ್ಯ."

"ನೋಡಕ್ಕ ನಮ್ಮ ಸುತ್ತಮುತ್ತ ಇರೋದ್ಯಲ್ಲ ಕಟ್ಟೊಗ್ಯದೆ ಕಣಕ್ಕ. ರಾಜಕಾರಣದಲ್ಲಾಗ್ಲಿ, ಸಿನುವಾದಲ್ಲಾಗ್ಲಿ, ಸಾಯಿತ್ಯದಲ್ಲಾಗ್ಲಿ ಕ್ವಾಲಿಟನೇ ಇಲ್ಲ, ಇಂತ ಟೇಮಲ್ಲಿ ಹಳೇ ಪೇಪರ್ ಹಾಡೇ ಅಲವೆ ಬರದು."

"ಬಂದ್ರು ಬರ್ಲಿ, ಅವ ಹಾಡದ್ಯಾಕೆ? ನೀನಾನಡಿಕಂಡು ತಿರಗದರಿಂದ ಅಂತೆ ಹಾಡೇ ಬತ್ತವೆ ಕಣೊ" ಎಂದ ಉಗ್ರಿ.

"ನೋಡೋ ಉಗ್ರಿ, ಇಂತ ಹಾಡು ಬರದೋನು ತಮಾಸಿಗೆ ನಗತಾ ಬರದವ್ರುನೆ. ಅಂಗೆ ನಾನೂ ತಮಾಸಿ ಮಾಡಿದೆ ಕಣೊ."

"ಕನ್ನಡ ಸಿನುಮ ಸುವರ್ಣ ಮಹೋತ್ಸವದ ಟೈಮಿಗೆ ಒಳ್ಳೆ ಹಾಡು ಬಂದದೆ ಬುಡು. ಹಾಡು ನೋಡನ ಅತ್ತಗೆ."

"ಅಷ್ಟೆ ಕಣೊ ಬರದು. ಹಳೆ ಕಬ್ಣ, ಖಾಲಿ ಸೀಸ, ಹಳೆ ಪೇಪರ್...."

"ಅದ್ಕೆ ಏಟುಸತಿ ಹೇಳತಿ, ಸುಮ್ಮನಿರಲೆ."

"ನೀನು ನನ್ನನ್ನ ಸುಮ್ಮನಿರಸಬೌದು ದ್ವಡಪ್ಪ, ಅದ... ಬರಿಯೋರ್ನ, ಹಾಡೋರ್ನ ಸುಮ್ಮನಿರುಸ್ತಿಯಾ?"

"ಯಾವನ್ಲ ಅವುನು ಬರದೋನು? ಹಳೆಹಾಡು... ನೋಡಿಕಂಡು ಬರಿಯಕ್ಕೇನು? ಯ್ಯಂತ್ಯಂತ ಪದಬಂದವ... ಗೊತ್ತೆ?"


"ನಮ್ಮ ದ್ವಡಪ್ಪನ ಅಭಿರುಚಿ ನೋಡನ. ನೀನು ಕೇಲಿರೋ ಯಾವುದಾದ್ರು ಒಂದಾಡು ಗುಣುಗು ದ್ವಡಪ್ಪ" ಎಂದು ವಾಟಿಸ್ಸೆ ಕಾಳಮಾವನಿಗೆ ಸವಾಲು ಹಾಕಿದ. ಅದಕ್ಕೆ ಕಾಳಮಾವ ಒಳಗೇ ಸ್ವರ ಎತ್ತಿಕೊಂಡು,

"ಸುಂಗಾರವಾಯಿನಿ ಮನಮೋಯಿನಿ ಪ್ರಿಯಕಾಂ... ಮಣಿ ಭಾಮಿನಿ" ಎಂದು ಹಾಡಿ,

"ಇಂತ ಹಾಡು ಬರಿಯಕ್ಕೇನಾಗ್ಯದ್ಲ?" ಎಂದ.

"ಎಷ್ಟು ಸತಿ ಅಂತ ಬರಿತರೆ ದ್ವಡಪ್ಪ? ಬರದು ಬರದೂ ಬೇಜಾರಾಗಿ ಹಳೇ ಪೇಪರ್ ಕಡೆ ವಂಟವ್ರುರೆ" ಎಂದು ವಾಟಿಸ್ಸೆ ಹೇಳುವಾಗ ಸ್ವರ ಎತ್ತಿದ ಸೀರ,

"ಅಮರಾ ಮಧುರಾ ಪ್ರೇಮ, ನೀ ಬಾ ಬೇಗ ಚಂದ ಮಾಮಾ,



ಲಲನಾಮಣಿಯರ ಪಬ್ ಪುರಾಣ

ಕಲಿಯುಗದಲ್ಲಿ ಆಳುವ ದೊರೆಗಳ ಕೃಪಾಕಟಾಕ್ಷದಿಂದ ಎಲ್ಲೆಲ್ಲಿ ನೋಡಲಿ ಅಲ್ಲಲ್ಲಿ ಕಾಣುವ ಪಬ್ ಎಂಬ ಪಾಪಕೂಪಕ್ಕೆ ಲಲನಾಮಣಿಯರು ಹೋಗಲಿಕ್ಕೆ ಶುರು ಮಾಡಿದಂತಹ ಸಂದರ್ಭದಲ್ಲಿ "ಸಂಭವಾಮಿ ಯುಗೇ ಯುಗೇ" ಎಂಬ ಸನಾತನ ಭರವಸೆಗೆ ಬದ್ಧವಾಗಿ ತ್ರೇತಾಯುಗದಿಂದ ನೇರ ನೇಮಕಾತಿಯಾಗಿ ಬಂದ ಮರ್ಯಾದಾ ಪುರುಷೋತ್ತಮನ ವಾನರ ಸೇನೆಯ ಮಂದಿ ಥೇಟ್ ಲಂಕಿಣಿಯರಂತೆ ಕಂಡ ಲಲನೆಯರಿಗೆ ಒಂದಷ್ಟು ಧರ್ಮದೇಟು ಕೊಟ್ಟರಂತೆ.

ಕುಯ್ಯೋಮರ್ರೋ ಎನ್ನುತ್ತಾ ಲಲನೆಯರು ಈ ಯುಗದ ವಾನರ ಸೇನಾಧಿಪತಿ ಆಚಾರ್ಯಪುರುಷರ ಮೊರೆಹೋಗಿ "ಇದ್ಯಾವ ಧರ್ಮ? ಬಯರಿಗೂ ಜಾತಿ, ಮತ, ಕುಲ, ಲಿಂಗವುಂಟೇ?" ಅಂತ ಕೇಳಿದಾಗ ಆ ಪುರುಷನು ತೊಟ್ಟ ಬಿಳಿಯ ಪ್ಯಾಂಟನ್ನು ಉದಾಹರಣೆಯೋಪಾದಿಯಲ್ಲಿ ತೋರಿಸುತ್ತಾ "ನಮ್ಮ ಧರ್ಮದಲ್ಲಿ ಲಲನೆಯರ ಚಾರಿತ್ರ್ಯವೆಂದರೆ ರಿನ್ ಜಾಹಿರಾತಿಗೆ ಸರಿಗಟ್ಟಬೇಕು. ಸೀತೆಯು ಭಯಂಕರ ಶೀತ ಬಂದಾಗಲೂ ಕುಡಿಯದ ಪೇಯ ನಿಮಗೆ ಬೇಡ ತಾಯಿಯರೆ. ಇದನ್ನು ಸ್ಪರ್ಶಿಸಿದರಾದರೆ ಎಡೆಯೂರು ಸಿದ್ಧಲಿಂಗೇಶ್ವರನ ಶಾಪಕ್ಕೆ ಗುರಿಯಾಗುವಿರಿ" ಎಂದು ಗುಡುಗಿಬಿಟ್ಟರಂತೆ.

ಆಗ ಮೈತುಂಬ ಮಾತೃವಾತ್ಸಲ್ಯ ತುಂಬಿಕೊಂಡ ಲಲನೆಯರು, "ಮಗನೆ, ಬಿಯರೆಂಬುದು ಹಿಂದಿನ ಕಾಲದಲ್ಲಿ ನಮ್ಮಿಂದ ಪಾಶ್ಚಿಮಾತ್ಯರು ಕದ್ದುಕೊಂಡು ಹೋದ ಸೋಮರಸದ ಫಾರ್ಮುಲಾದಿಂದಲೇ ತಯಾರಿಸಿದ್ದು, ಥೇಟ್ ಪುಷ್ಪಕ ವಿಮಾನದ ಫಾರ್ಮುಲಾ ಕದ್ದು ರೈಟ್ ಸಹೋದರರು ವಿಮಾನ ತಯಾರಿಸಿದ ಹಾಗೆ" ಅಂತೆಲ್ಲಾ ಹೇಳಿದರೂ ಆಚಾರ್ಯಪುರುಷರ ಹೊಳೆವ ಬಿಳಿಯ ಕೆನ್ನೆ ಕೊಂಚವೂ ರಂಗೇರಲಿಲ್ಲವಂತೆ.

ಸರಿ ಹೋಗಲಿ, ಒಂದು ಪಿಚ್ಚರ್ ಕುಡಿದರೆ ಹತ್ತು ಬಾರಿ ಬಾತ್‌ರೂಮಿಗೆ ಓಡಿಸುವ ಪೇಯದ ಸಹವಾಸವೂ ಬೇಡ, ಈ ಬಿಳಿ ಪ್ಯಾಂಟು, ಪ್ಯಾಂಟ್‌ಕೆ ಪೀಠಿಯ ಚೆಡ್ಡಿ ಯಾವುದರ ಸಹವಾಸವೂ ಬೇಡ ಅಂತ ಲಲನೆಯರು ವೋಡ್ಕಾ ಜೊತೆ ಸ್ವಲ್ಪ ಪೈನ್‌ಆಪಲ್ ಜೂಸು, ಜೊತೆಗೆ ಒಂದು ಸಣ್ಣ ಸೀಳಿದ ಮೆಣಸಿನ ಕಾಯಿಯ ರುಚಿ ಹತ್ತಿಸಿಕೊಂಡು ಆನಂದವಾಗಿ ಇದ್ದರಂತೆ.





"ಏನಾದರೂ ಮಾಡುತಿರು ತಮ್ಮ" ಎಂಬ ಕವಿವಾಣಿಗೆ ಬದ್ಧವಾದ ವಾನರ ಸೇನೆಯ ಮಂದಿಗೆ ಸ್ವಲ್ಪ ದಿನವಾದಂತೆ ಚವ್ರುಟಲಿಕ್ಕೆ ಯಾವ ಚಿಗುರೂ ಸಿಗದೆ ತುಂಬಾ ಬೇಜಾರಾಯಿತಂತೆ. ಹೀಗೆ ಒಂದು ದಿನ ಏಡುಕೊಂಡಲವಾಡನ ಹೆಸರನ್ನೇ ಭಕ್ತಿಯಿಂದ ಇಟ್ಟಿದ್ದ ಬಾರೊಂದರಲ್ಲಿ ಗಂಡಸರಿಗೆ ಮಾತ್ರ ಚ್ಯವನಪ್ರಾಶದಂತೆ ಶಕ್ತಿ ಕೊಡುವ ರಂ ಎಂಬ ಪೇಯವನ್ನು ಹೀರುತ್ತಾ ಕೂತಿದ್ದಾಗ ಸೇನಾ-ಪ್ರೇರಿತನೊಬ್ಬನಿಗೆ ಬಾರಿನ ಅರೆಗತ್ತಲನ್ನು ಸೀಳಿಕೊಂಡು ಮಿಂಚಿನಂತ ಆಲೋಚನೆಯೊಂದು ಬಂತಂತೆ: ಬೆಂಗಳೂರೆಂಬ ನಗರಿಯಲ್ಲಿ ಬುಟ್ಟಬುಟ್ಟ ಐಟಿ, ಬೀಟಿ, ಕಂಪನಿಗಳಲ್ಲಿ ಹಗಲುರಾತ್ರಿಯೆನ್ನದೆ ದುಡಿಯುವ ಲಲನೆಯರು ಅಮೆರಿಕದ ಕ್ಲೈಂಟ್‌ಗಳ ಜೊತೆಗೆ ಫೋನಲ್ಲಿ ಅಮೆರಿಕನ್ ಆಕ್ಸೆಂಟ್‌ನಲ್ಲೇ ಮಾತಾಡಲಿ, ಆದರೆ ಭಾರತೀಯ ಸಂಸ್ಕೃತಿಗೆ ಬದ್ಧವಾಗಿ ಸೀರೆ ಉಟ್ಟುಕೊಂಡೇ ಮಾತಾಡಬಹುದಲ್ಲ,

ವಿಡಂಬನೆ

• ಗೌತಮಿ

ಫೋನಲ್ಲಿ ಸೀರೆ ಹೇಗಿದ್ದರೂ ಕಾಣಿಸುವುದೂ ಇಲ್ಲವಲ್ಲ ಅಂತ!

ಇಂತಾಗಿ ಬೆಂಗಳೂರಿನ ಬೀದಿಗಳಲ್ಲಿ ಜೀನ್ಸ್ ಪ್ಯಾಂಟ್ ತೊಟ್ಟ ಲಲನೆಯರನ್ನು ಹಿಡಿಹಿಡಿದು, ಜಗ್ಗಾಡಿ ಹೊಡೆಯಲಾಯಿತಂತೆ. ಆಚಾರ್ಯಪುರುಷರ ಕೃಪೆಯ ಭರವಸೆಯನ್ನು ತಲೆಯ ಮೇಲೆ ಹೊತ್ತ ಮಂದಿ ಹೀಗೆಲ್ಲಾ ಅಟ್ಯಾಡಿಸಿಕೊಂಡು ಹೊಡೆದರೂ ನಗರದ ಸಿಕ್ಕಾಪಟ್ಟೆ ಮರ್ಯಾದಾ ಪುರುಷೋತ್ತಮರಾದ ಜನ ತಮ್ಮ ತಮ್ಮ ಟೀವಿ ಸೀರಿಯಲ್ಲುಗಳನ್ನು ನೋಡಿಕೊಂಡು, ಅಳುತ್ತಾ, ನಗುತ್ತಾ ಇದ್ದುಬಿಟ್ಟರಂತೆ.

ಇನ್ನೇನು ಮಾಡುವುದಪ್ಪಾ ಅಂದ ದಾರಿ ಕಾಣದೆ ಲಲನಾಮಣಿಯರು ಕನ್ನಡ ಸಿನೆಮಾದ ಐಟಮ್ ಹಾಡುಗಳನ್ನು ರೀವೈಂಡ್ ಮಾಡಿ, ಮಾಡಿ, ಮತ್ತೆ ಮತ್ತೆ ನೋಡುತ್ತಾ ಥೇಟ್ ಆ ಉತ್ತರ ಭಾರತದಿಂದ ಫ್ರೆಶ್ ಆಗಿ ಇಂಪೋರ್ಟ್ ಆದವಳಂತೆ ಸೀರೆ ಉಡುವುದಾ ಅಂತ ಸಮಾಲೋಚನೆ ನಡೆಸಲಿಕ್ಕೆ ಶುರು ಮಾಡಿದರಂತೆ. ಇನ್ನೇನು ರಿಹರ್ಸಲ್ ಶುರು ಮಾಡಬೇಕು ಅಷ್ಟರಲ್ಲಿ ವಾನರ ಸೇನೆಯೋ ಅಥವಾ ಸೇನೆಯ ಚೈತ್ರಯಾತ್ರೆಯಿಂದ ಸ್ಫೂರ್ತಿ ಪಡೆದ ಛೋಟಾ ಮೋಟಾ ತುಕಡಿಯೋ ಲಲನಾಮಣಿಯರನ್ನು ಸೀರೆ, ಚೂಡಿದಾರ್ ಅಂತಲೂ ಲೆಕ್ಕಿಸದೆ ಕತ್ತಲಲ್ಲಿ ಹೊಡೆದು ಹೋಗುವ ಶೌರ್ಯಕಾರ್ಯ ಶುರು ಹಚ್ಚಿಕೊಂಡಿದ್ದಾರೆ ಎಂಬ ಸುದ್ದಿ ಬಂದಿತಂತೆ.

ಅಯ್ಯೊ ಶಿವನೆ, ಶಂಕರನೆ ಇನ್ನೇನಪ್ಪಾ ಮಾಡೋದು ಅಂತ ಚಿಂತಾಕ್ರಾಂತರಾದರಂತೆ ಲಲನೆಯರು. ನಾವು ಶರಣ... ನಮ್ಮೆಲ್ಲರ ಹಿರಿಯಕ್ಕನ ಉಪಾದಿಯಲ್ಲಿ ಎಲ್ಲಾ ಬಿಟ್ಟು ಬರೀ ಕೇಶರಾಶಿಯನ್ನೇ ಮೈತುಂಬಾ ಹೊದ್ದು ಓಡಾಡೋಣ... ಅಂದರೆ ಈ ಹಾಳು ಬೆಂಗಳೂರಿನ ಕೆಟ್ಟ ನೀರು ಗಾಳಿಯ ದೆಸೆಯಿಂದ ಕೂದಲು ಸೊಂಟದ ಕೆಳ... ಬೆಳೆಯೋದೂ ಇಲ್ಲವಲ್ಲಾ ಇನ್ನೇನು ಗತಿ ಚೆನ್ನಮಲ್ಲಿಕಾರ್ಜುನದೇವಾ, ಅಂದರಂತೆ.

ಈ ಲಲನೆಯರ ಒದರಾಟದಿಂದ ಶಂಕರ ಮತ... ಆಚಾರ್ಯಪುರುಷರು ನಡೆಸುತ್ತಿದ್ದ ದೀರ್ಘ... ಸಮಾಲೋಚನೆಗೆ ಭಂಗವಾಯಿತಂತೆ. ಮೂರನೆಯ ಕಣ್ಣಿಂದ ಲಲನೆಯರನ್ನು ಗುರಾಯಿಸುತ್ತಾ "ನಿಮ್ಮನ್ನ ಯಾರೋ ನಿಜವಾಗಿಯೂ ಹೊಡೆದಿದ್ದಾರೆ ಅಂ... ನಂಬುವುದಾದರೂ ಹೇಗೆ? ಬ್ರಹ್ಮ, ವಿಷ್ಣು ಮಹೇಶ್ವರರೆಲ್ಲರಿಗೂ ಒಂದೇ ಏಟಿನಲ್ಲಿ ಕೆಟ್ಟ ಹೆಸರು ತರಬೇಕು ಅಂತ ನೀವು ನಿಮ್ಮ ಕೆನ್ನೆಗೆ ನೀವೆ ಹೊಡೆದುಕೊಂಡಿಲ್ಲ, ನಿಮ್ಮ ಕಾರಿಗೆ ನೀವೇ ಕಲ್ಲು ಹಾ... ಚಚ್ಚಿಲ್ಲ, ನಿಮ್ಮ ಬಟ್ಟೆ ನೀವೇ ಎಳೆದಾಡಿಕೊಂಡಿಲ್ಲ ಅಂ... ಯಾವ ಗ್ಯಾರಂಟಿ?" ಅಂತ ಶಂಕರನು ಸವಾಲೆಸೆದನಂತೆ.

ಹೀಗೆ ಬದಿರಿನ ಬಾಣ ಬಿಟ್ಟು ಇನ್ನೇನು ಶಂಕ... ಜಟೆ ಎತ್ತಿ ಕಟ್ಟಿ ತಾಂಡವಕ್ಕೆ ರೆಡಿ ಆಗಬೇಕು ಅನ್ನುವಷ್ಟರ... ಬಂದ ದಾರಿಗೆ ಸುಂಕವಿಲ್ಲ ಅಂತ ಲಲನಾಮಣಿಯ... ಗುಂಪು ಕೈಲಾಸ ಪರ್ವತವನ್ನು ಇಳಿಯಲಿಕ್ಕೆ ಶುರುಮಾಡು... ತ್ತಿದ್ದಂತೆ, "ಸ್ವಲ್ಪ ತಾಳಿ" ಅಂತ ಹಿಂದಿನಿಂದ ಕೋರಸ್‌ನ... ಕೂಗು ಕೇಳಿಬಂತಂತೆ. ಹಿಂದೆ ತಿರುಗಿ ನೋಡಲಾ... ಅಲ್ಲಿ ಸರಸ್ವತಿ, ಲಕ್ಷ್ಮಿ ಮತ್ತು ಪಾರ್ವತಿಯರು ... ಮೋರೆ ಹಾಕಿಕೊಂಡು ನಿಂತಿದ್ದರಂತೆ. ಜೊತೆಗೆ ಹೆಸರು ಸರಿಯಾಗಿ ಗೊತ್ತಿಲ್ಲದ ಒಂದೂವರೆ ಕೋಟಿ ... ದೇವತೆಗಳ ದಂಡೂ ಇತ್ತಂತೆ.

ಇದೇನಪ್ಪ ಅಂತ ಲಲನಾಮಣಿಯರು ಕೇಳಲಾ...


ಾ ಬೇಗ ಚಿಂದಮಾಡು" ಎಂದು ಹೇಳಿಬಿಟ್ಟ.
ಾದಲೇ ಹತ್ತಿರ ಹೋದ ಪಾಟಿಸ್ಸ್,
"ಏನೇಳು ಚಿಗಪ್ಪ?" ಎಂದ.
"ಏನುವಿಲ್ಲ, ಹಾಡಿದ್ರೆ ಇಂತ ಪದ ಹಾಡಬೇಕು
ಅಂದ್ರೆ ಮುಕಳಿ ಮುಚಿಗಂಡು ಸುಮ್ಮನಿರಬೇಕು.
ಬೇನು ಮುಳುಗ್ಹೋಗದಿಲ್ಲ."
"ಮುಳುಗ್ಹೋಗದಿಲ್ಲ ಸರಿ, ಆದ್ರೆ ಯಂತೆದ್ಹೋ
ಹಾಯಿರಬೇಕಾಯ್ತದೆ ಚಿಗಪ್ಪ, ಕ್ಯಟ್ಟ ಪದಗಳಿಂದ
ಪದ ಹುಟ್ಟತವಂತೆ. ಸುಮ್ಮನಿದ್ರೆ ಏನೂ ಹುಟ್ಟದಿಲ್ಲ."
ಹುಟ್ಟಸಬೇಕಾದ್ರೆ ವಳಗಿರಬೇಕು ಕಣೊ. ಓದುಬೇಕು,
ಬೇಕು. ನೋಡು ರಜನಿಕಾಂತ ತಮಿಳುನಾಡಿಂದ
ಬಂದು ನೀವು ಕನ್ನಡ ಸಾಹಿತ್ಯ ಓದಿ ಅಂದವ್ರುನೆ.
ಂತಬೇಕೆ ಅವುಮಾನ?" ಎಂದ ಉಗ್ರಿ.
ಕಮಲಹಾಸನ್ ಹೇಳಿದ್ನು ಅದ್ನೆ ಅಲವೇನೊ ಉಗ್ರಿ.
ವಳಿಕೆ ಕಲ್ಲಾಕಬ್ಯಾಡಿ ಅಂದವ್ರುನೆ. ರಜನಿ ಮಾತು
ಹಾಸನ್ ಮಾತು ಒಬ್ಬರಿಗೇ ಹೇಳಿದಂಗಿಲ್ಲವೇನೊ?"
ಯಾರಿಗೇಳಿದ್ದನ್ಲ?" ಎಂದಳು ಜುಮ್ಮಿ.
ಕರ್ನಾಟಕ ರಕ್ಷಣಾ ವೇದಿಕೆ, ಕರ್ನಾಟಕ ಸಮರ
ಭೋಜನ ಸೇನೆ, ಕಲಕ್ಷನ್ ಸೇನೆ, ಇವುಕ್ಯಲ್ಲ ಅಪ್ಲೇ
ತರ ಹೇಳಿಬುಟ್ಟು ಹೋದ್ರು ಕಣಕ್ಕ. ಇಪ್ಪಾದ್ರು
ಅರ್ಥಾಗದಿಲ್ಲ ಅಂದ್ರೆ ಇಟೀಸ್ ಸೇಂ ಟು
ನೇಶನ್."
ಯಲಕ್ಷನ್ ಬತ್ತಲ್ಲ ಯಾರ ಕಡಿಕೋಯ್ತಿಲ?" ಎಂದಳು
ಮ್ಮಿ.
ಬಳ್ಳಾರಿ ದಣಿಗಳ ಕಡೆ ಹೋಯ್ತಿನಿ."
"ಅದ್ಯಾಕವುರ ಕಡಿಯೋಯ್ತಿ? ಪಾಂಡುಪುರದ
ಣ್ಣಯ್ಯ ನಿಂತಗತ್ತನಂತಲ್ಲಾ, ಅವುನ ಕಡಿಕೋಗ್ಲ."
ಓಟು ಮಾತ್ರ ರೈತಸಂಘದ ಪುಟ್ಟಣ್ಣಯ್ಯಗ್ಗೆ ಹಾಕ್ತಿನಿ
. ಆದ್ರೆ ರೆಡ್ಡಿಗಳು ಈ ಸತಿ ಒಂದು ಓಟಿಗೆ ಒಂದು
ಕೊಡ್ತರಂತೆ. ಆದ ಈಸ್ಕಂಡು ಬದಲಾವಣೆ ಮಾಡನ
ಯಾಕೆಂದ್ರೆ ಅವುರು ಕೊಡೋ ದುಡ್ದು ನಮ್ಮ
ಟಕದ ಮಣ್ಣಿನ ದುಡ್ನು, ನಮ್ಮ ನೆಲದ್ದು, ನಮ್ಮ
ದು. ಅದು ನಮ್ಮ ರೈತಾಪಿ ಜನಕ್ಕೆ ಸೇರಬೇಕಾದ್ದೆ
. ಅದ್ಕೆ ನಾನೀಸತಿ ರೆಡ್ಡಿ ಕಡೆ ಇದ್ದು ನಮ್ಮ ಕಡೆ
ಮಾಡ್ತಿನಿ."
!?" ■

ತೆಗಳ ಸ್ಪೋಕ್ಸ್‌ವುಮನ್ ಆದ ಸರಸ್ವತಿ "ಇತ್ತೀಚಿನ
ಳಲ್ಲಿ ಜಂಬೂದ್ವೀಪೆ, ಭರತಖಂಡೆ ಆಳುವ
ಗಳೆಲ್ಲಾ ದೇವಾದಿದೇವತೆಗಳ ಜೊತೆ ಹಾಟ್‌ಲೈನ್
ರ್ಕ ಹೊಂದಿದ ಲಾಗಾಯ್ತು ನಮ್ಮ ಗಂಡಂದಿರಿಗೆ
ನ್ನು ಮಾತಾಡಿಸುವುದಕ್ಕೂ ಪುರುಸೊತ್ತಿಲ್ಲ. ಇವರ
ನಲ್ಲಿ ಪೂಜೆ, ಪುನಸ್ಕಾರ, ಅಭಿಷೇಕ, ಬಜೆಟ್ ದುಡ್ಡು
ನ್ನು, ಗಲಭೆ, ಜಗಳ ಒಂದಲ್ಲಾ ಒಂದು. ಅದಕ್ಕೆ
ಇವರ ಸಹವಾಸ ಸಾಕು ಅಂತ ನಿಮ್ಮ ಜೊತೆ
ಬಿಡೋಣ ಅಂತ ಇದ್ದೀವಿ" ಅಂದಳಂತೆ. ಎಲ್ಲರಿಗಿಂತ
ಜಾಸ್ತಿ ಸಿಟ್ಟಾಗಿ ಕಾಣುತ್ತಿದ್ದಾ ಪಾರ್ವತಿ "ಈ ಗಂಗೆ
ಬೇರೆ ನನಗೆ ಈಗ ಸೌತ್ ಇಂಡಿಯಾದಲ್ಲೂ
ಟ್ಟಿದ್ದಾರಲ್ಲ ನಿಮ್ಮ ದೊರೆಗಳು. ಮೊನ್ನೆ ಶಿವರಾತ್ರಿಗೆ
ಲ್ಲಿ ಯಾರೋ ಶ್ರೇಷ್ಠರು ಬೆಂಗಳೂರಿಗೂ ಗಂಗೆ
ದ್ದಾರಂತಲ್ಲ" ಅಂತ ಹಿಡಿಶಾಪ ಹಾಕಿದಳಂತೆ.
ಲನಾಮಣಿಯರು ಮತ್ತು ದೇವತೆಗಳು ಕೈಲಾಸದ
ಲ್ಲಿ ಒಂದು ಎಮೆರ್ಜೆನ್ಸಿ ಗೇಟ್ ಮೀಟಿಂಗ್
ಎಲ್ಲರೂ ಒಟ್ಟಿಗೆ ಕೆಳಗೆ ಹೋಗುವುದು ಎಂದು
ರಿಸಿ ದಬದಬ ಬಂದುಬಿಟ್ಟರಂತೆ. ಸದ್ಯಕ್ಕೆ ಎಲ್ಲರೂ
ಒಂದು ದೊಡ್ಡ ಪಾರ್ಟಿ ಇಟ್ಟುಕೊಂಡಿದ್ದಾರಂತೆ.
ದಿನ ಜಾಯಿಂಟ್ ಆಕ್ಷನ್ ಕಾರ್ಯಕ್ರಮಗಳು
ದಿನ ದಿನಗಳಲ್ಲಿ ಪ್ರಕಟವಾಗುವ ನಿರೀಕ್ಷೆಯಿದೆಯಂತೆ.
ತನ್ಮಧ್ಯೆ ಭೂ ಕೈಲಾಸಗಳಲ್ಲಿ ಹೆಣ್ಣು ದಿಕ್ಕಿಲ್ಲದೆ
ರು ಹೆಂಗ್‌ಹೆಂಗೋ ಆಡಲಿಕ್ಕೆ ಶುರುಮಾಡಿದ್ದಾರಂತೆ.
ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಬಾರ್‌ನಲ್ಲಿಯೇ
ಕಳೆಯುವ ಇನ್ನು ಕೆಲವು ಗಂಡಸರು ಕೈಲಾಸ
ಗಳು ಒಂದಾದ ಪಾರ್ಟಿಯಲ್ಲಿ ಯಾವಯಾವ
ಕಾಕ್‌ಟೈಲ್‌ಗಳು ಹುಟ್ಟಬಹುದು ಅಂತ
ಚಿಸಿ, ಕರುಬ ಕರುಬ ಸಿಕ್ಕಾಪಟ್ಟೆ ಅಲ್ಸರ್
ಕೊಂಡಿದ್ದಾರಂತೆ. ■

ಸೂ.:
ಚ್.ಎಲ್. ಕೇಶವಮೂರ್ತಿಯವರ
ರೋಗ್ಯ ಸರಿ ಇಲ್ಲದಿರುವುದರಿಂದ ಅವರ
ಣಕ' ಈ ವಾರ ಪ್ರಕಟವಾಗುತ್ತಿಲ್ಲ.
-ಸಂ

A CANDLE IN THE THIGHS

ಮರೆಯುವ ಮುನ್ನ



■ ಪಿ. ಲಂಕೇಶ್ -ಮೇ 12, 1991

ನಾವು ಕವನ ಅಚ್ಚುಮಾಡುತ್ತೇವೆಂದು ತಿಳಿದೊಡನೆ ನೂರಾರು ಜನ ಕವಿಗಳು ತಮ್ಮ ಪದ್ಯ ಕಳಿಸುತ್ತಿದ್ದಾರೆ. ನಾನೇ ಖುದ್ದು ಎಲ್ಲವನ್ನೂ ನೋಡಿ ಪ್ರಕಟಿಸಲು ಅಥವಾ ಪ್ರಕಟಿಸದೆ ಇರಲು ತೀರ್ಮಾನಿಸುತ್ತೇನೆ. ಪದ್ಯ ಬರೆಯುವ ಕಷ್ಟದ ಬಗ್ಗೆ ಈ ಅಂಕಣದಲ್ಲಿ ಬಹಳ ಸಲ ಬರೆದಿದ್ದರೂ ಮತ್ತೆ ಎರಡು ಮಾತು ಬರೆಯಬೇಕೆನ್ನಿಸುತ್ತದೆ. ಮೊನ್ನೆ ಡಿಲನ್ ಥಾಮಸ್‌ನ ಪದ್ಯಗಳನ್ನು ಓದಿದ್ದು ಈ ನನ್ನ ಬರಹಕ್ಕೆ ಸ್ಫೂರ್ತಿ.

ಡಿಲನ್ ಥಾಮಸ್ ಇಂಗ್ಲೆಂಡಿನ ವೇಲ್ಸ್ ಪ್ರಾಂತದ ಕವಿ; ಪ್ರಖ್ಯಾತ ನಟ ರಿಚರ್ಡ್ ಬರ್ಟನ್‌ನಂತೆಯೇ ವೇಲ್ಸ್‌ನ ತೀವ್ರ ಭಾವನೆ, ಮದ, ಮತ್ಸರವನ್ನೆಲ್ಲ ಪಡೆದು ಹುಟ್ಟಿದವನು; ಬರ್ಟನ್‌ನಂತೆಯೇ ಅದ್ಭುತ ಕಂಠಶ್ರೀ ಪಡೆದು ಬಂದವನು. ಡಿಲನ್ ಥಾಮಸ್‌ನ ಕವನಗಳು ಕ್ಲಿಷ್ಟ, ಓದಿದೊಡನೆ ಏನೂ ಅರ್ಥವಾಗುವುದಿಲ್ಲ, ಆದರೆ ಆತನ ಕವನ ತನ್ನ ಸಂಕೇತ ಮತ್ತು ಹೊಳಪಾದ ಮಾತುಗಳಿಂದ ನಮ್ಮ ವ್ಯಕ್ತಿತ್ವವನ್ನು ನೇರವಾಗಿ ತಟ್ಟುತ್ತದೆ. ಅರ್ಥ ಮಾಡಿಕೊಳ್ಳುವ ಮಿದುಳನ್ನು ಮೀರಿ ಹೃದಯಕ್ಕೆ ತಲುಪುವ ಈ ಶಕ್ತಿ ವಿಚಿತ್ರವಾದದ್ದು. ಅದಕ್ಕೆ ಡಿಲನ್ ಥಾಮಸ್‌ನೇ ಹೇಳುತ್ತಾನೆ: 'ಮಾತುಗಳ ಚೈತನ್ಯವನ್ನು ತಲುಪಿ ಅವನ್ನು ಬಳಸುತ್ತೇನೆ.' ಅವನಿಗೆ ಭಾಷೆ ಅಂದರೆ ಅಷ್ಟು ಪ್ರೀತಿ; ತನ್ನೊಳಗಣ ನಿಗೂಢ ಅನುಭವ ಸಂಪತ್ತನ್ನು ಈ ಮಾತುಗಳಲ್ಲಿ ಹೊರಗೆಡಹುತ್ತಾನೆ.

ಡಿಲನ್ ಥಾಮಸ್ ಬದುಕಿದ್ದು ಕೇವಲ 39 ವರ್ಷ. ಆ ಅವಧಿಯಲ್ಲಿ ಆತ ಪ್ರೇಮಿಸಿ, ಕಾಮಿಸಿ, ಕುಡಿದು, ಕಾವ್ಯ ರಚಿಸಿ, ಅದ್ಭುತ ರೀತಿಯಲ್ಲಿ ಕವನಗಳನ್ನು ಓದಿ ಪ್ರಖ್ಯಾತನಾಗಿ ತೀರಿಕೊಂಡ. ಪತ್ರಿಕೆಗಳಲ್ಲಿ ವರದಿಗಾರನಾಗಿದ್ದ, ಬಿಬಿಸಿಯಲ್ಲಿ ವಾಚಕನಾಗಿದ್ದ, ಅಮೆರಿಕಾದಲ್ಲಿ ಉಪನ್ಯಾಸದ ಪ್ರವಾಸ ಮಾಡಿದ. ಆದರೆ ಆತ ಮುಖ್ಯವಾಗಿ ಕವಿಯಾಗಿದ್ದ. ಭಾಷೆಯ ಬನಿ, ಸೊಗಡು, ಗತ್ತು, ಗಮ್ಮತ್ತೆಲ್ಲ ಅವನಿಗೆ ಗೊತ್ತಿತ್ತು; ಅನುಭವದ ಮರ್ಮ ಕೂಡ. ಅವನು



Light breaks where no sun shines;
Where no sea runs, the waters of the heart
Push in their tides.....

ಎಂದಾಗ ಅದಕ್ಕೆ ಅರ್ಥವಿಲ್ಲ, ಆದರೆ ಆ ಪದಪುಂಜ ಲೈಂಗಿಕ ಅನುಭವಿಸುವುದನ್ನು ಹೇಳುತ್ತಿರುವುದು, ಸೂರ್ಯ ನಮ್ಮಲ್ಲಿ ಹರಿಯುತ್ತಿರುವುದನ್ನು ವರ್ಣಿಸುತ್ತಿರುವುದು ಎಲ್ಲರಿಗೆ ಗೊತ್ತು,


ಈ ಡಿಲನ್ ಥಾಮಸ್ ಬಗ್ಗೆ ಇನ್ನೊಮ್ಮೆ ಬರೆಯುತ್ತೇನೆ. ಆದರೆ ಕವಿಗಳು ಥಾಮಸ್, ಬೇಂದ್ರೆ, ಬರ್ನ್ಸ್ ಮುಂತಾದವರಿಂದ ಕಲಿಯಬೇಕಾದ್ದು ಮುಖ್ಯ: ನಿಮ್ಮ ಕಾವ್ಯ ಭಾಷೆಯ ಚೆಂದ, ಅರ್ಥ, ಸ್ಪಂದನವಾಗಿ ಹೊರಬರದಿದ್ದರೆ ನೀವು ಎಷ್ಟೇ ವಿಷಯ ಹೇಳಲು ಯತ್ನಿಸಿದರೂ ಕಾವ್ಯವಾಗುವುದಿಲ್ಲ; ನಿಮ್ಮಲ್ಲಿ ಹೇಳಿಸಿಕೊಳ್ಳಲು ಕಾಯುತ್ತಿರುವ ದಟ್ಟ ತಲ್ಲಣವಿಲ್ಲದಿದ್ದರೆ ಬರೀ ಭಾಷೆ ಏನೂ ಮಾಡುವುದಿಲ್ಲ, ಕಾಳಿದಾಸನ 'ವಾಗರ್ಥ'ವನ್ನೂ ಮೀರಿದ್ದು ಇದೆಲ್ಲ,

ಅದೇ ಪದ್ಯದಲ್ಲಿ;

A candle in the thighs
Warms youth and seed and burns and seeds of age...

ಮರಾಡೋನಾ....ಮಡೋನಾ






ಇತ್ತೀಚೆಗೆ ಜಗತ್ತಿನ ಅನೇಕರನ್ನು ವಿಸ್ಮಯಗೊಳಿಸಿದ ಒಂದು ಸಂಗತಿ ಬಗ್ಗೆ ಬರೆಯುವೆ. ಅದು ಅರ್ಜೆಂಟೈನಾದ ಫುಟ್‌ಬಾಲ್ ಹೀರೋ ಮರಾಡೋನಾ ಕುರಿತದ್ದು. ಆತ ಒಂದೊಂದು ಫುಟ್‌ಬಾಲ್ ಸೀಸನ್‌ಗೆ ಕೋಟ್ಯಂತರ ಡಾಲರ್ ಪಡೆಯುತ್ತಿದ್ದವನು; ಅರ್ಜೆಂಟೈನಾವನ್ನು ಒಮ್ಮೆ ವಿಶ್ವಛಾಂಪಿಯನ್ ಮಾಡಿ ಇನ್ನೊಮ್ಮೆ ಫೈನಲ್ಸ್‌ಗೆ ತಲುಪಿಸಿದವನು. ಆತ ಕಾಣಿಸಿಕೊಂಡರೆ ಮಿಂಚಿನ ಸಂಚಾರವಾಗುತ್ತಿತ್ತು, ಇವತ್ತು ಇದೇ ಮರಾಡೋನಾ ಏಕಾಂಗಿ, ಅನೇಕ ಕೇಸ್‌ಗಳನ್ನು ಎದುರಿಸುತ್ತಿರುವವನು; ತನ್ನ ಯಶಸ್ಸಿನಿಂದಾಗಿಯೇ ಕೊಕೇನ್, ಮರಿಯಾನಾ ತೆಗೆದುಕೊಂಡು ನಾಶವಾದವನು. ಎಲ್ಲರ ಹೀಯಾಳಿಕೆಯ ಮೂಲಕ ನರಕ ಅನುಭವಿಸುತ್ತಿರುವವನು.

ಈ ಹೀರೋ ಜಗತ್ತೇ ಹೀಗೆ. ಗ್ರೀಕರ ಪ್ರಕಾರ ಅತ್ಯಂತ ಎತ್ತರಕ್ಕೆ ಬೆಳೆದ ಮರ ಮತ್ತು ಎತ್ತರ ಕ್ರಮಿಸಿದ ಮನುಷ್ಯನಿಗೆ ವಿಧಿಯ ಸಿಡಿಲು ಬಡಿಯುತ್ತದೆ; ಆತನ ಸಾಮಾನ್ಯತೆಯನ್ನು ಹಠಾತ್ತನೆ ತೋರುತ್ತದೆ. ಜನಸಾಮಾನ್ಯರ ಕಷ್ಟ, ದುರಂತ ಅವನದು ಮಾತ್ರ; ಹೀರೋನ ದುರಂತ ಮನುಕುಲಕ್ಕೆ ಪಾಠದಂತಿರುತ್ತದೆ. ಆದ್ದರಿಂದ ಸಾಫೋಕ್ಲಿಸ್ ಹೇಳಿದ: ಸಾಯುವ ಮುನ್ನ ಯಾವನನ್ನೂ ಸುಖಿ ಎಂದು ಕರೆಯಬೇಡ.

ಇದೇ ಸಮಯದಲ್ಲಿ ಅಮೆರಿಕಾದ ರಂಜನೆಯ ಹುಡುಗಿ ಮಡೋನಾ.... ತೀರಾ ಸಾಮಾನ್ಯ ರೂಪದ, ಹಾಲಿವುಡ್‌ನವರು ಇಷ್ಟಪಡದ, ಸದಾ ಸೋಲಿನ ಅಂಚಿನಲ್ಲಿದ್ದೂ ಗೆಲುವಿನ ಮೆಟ್ಟಿಲು ಹತ್ತುತ್ತಲೇ ಇರುವ ಹುಡುಗಿ ಮಡೋನಾ. ಇತ್ತೀಚೆಗೆ ಹೊಚ್ಚ ಹೊಸಾ ಕ್ಯಾಸೆಟ್ ಬಿಡುಗಡೆ ಮಾಡಿದ್ದಾಳೆ. **'Truth or Dare'** ಎಂಬ ಹೆಸರಿನ ಈ ಹಾಡು, ನೃತ್ಯದ ಕ್ಯಾಸೆಟ್ ಆಕೆಯನ್ನು ಅತ್ಯಂತ ಜನಪ್ರಿಯ ಹುಡುಗಿಯನ್ನಾಗಿ ಮಾಡಿದೆ. ಕೆಲಸ ಮತ್ತು ಕ್ರೀಡೆ, ಪ್ರೇಮ ಮತ್ತು ಕುಟುಂಬ ಕುರಿತ ಹಾಡುಗಳ ಚಿತ್ರ... ಈಕೆ ತೀರಾ ಎತ್ತರಕ್ಕೆ ಬೆಳೆದಂತೆ ಆಕಾಶಕ್ಕೆ ಅನ್ನಿಸುತ್ತಿಲ್ಲವೆ? ಅನ್ನಿಸದಿರಲಿ. ■



ಲ ಂ ಕೇ ಶ್

ಪ್ರೀತಿಯ ಹುಡುಕುತ್ತಾ
ಹಾರಿಬಂದ ಅರಳಿಯ ಎಲೆ
ಅವರ ಮೇಜಿನ ಮೇಲೆ.....
* * *
ಈ ಆಲದ ನೆರಳಲ್ಲಿ
ಸಸಿಗಳು ಬೆಳೆದವು
ಗಾದೆ ಸುಳ್ಳಾಯಿತು
* * *
ಪ್ರತಿ ಹೆಜ್ಜೆಯಲ್ಲಿ ಗುಲಾಬಿ
ಹೂವು ಹಲವರಿಗೆ
ಮುಳ್ಳು ಕೆಲವರಿಗೆ
* * *
ಈ ಒಂಟಿ ಸಲಗ ಕೊಟ್ಟಿತ್ತು
ಬಡ ಬೋರನಿಗೆ
ಮಾವುತನ ಸ್ಥಾನ
* * *
ನೀರವ ರಾತ್ರಿ
ಬಣ್ಣಬಣ್ಣದ ಕಾದಿಯಲ್ಲಿ
ನೀಲು ಕಾಯುತ್ತಾಳೆ....

ವಿಶೇಷವಾಗಿ ಹುಳಿಗಟ್ಟುತ್ತಿರುವ
ವೈನ್
ಅವರನ್ನು ಹುಡುಕುತ್ತಿದೆ
ಅಕ್ಷರಗಳ ಕಾವು
ಅವರ ಕೋಣೆ
ಇನ್ನೂ ಬೆಚ್ಚಗಿದೆ!
* * *
ವಸಂತ
ಅವರ ಪುಸ್ತಕದಲ್ಲಿ
ಅಕ್ಷರಗಳು ಚಿಗುರುತ್ತಿವೆ
* * *
ಅಕ್ಷರಗಳ ಕಡೆದರು

ಲಂಕೇಶ್ ಎಂಬ
ಗಡಿಗೆಯಲ್ಲಿ
ಸಾಹಿತ್ಯದ ಬೆಣ್ಣೆ
* * *
ವಸಂತದ ಹೂವುಗಳಿಗೆ
ತುಂಬ ಇಷ್ಟ
ಹುಳಿ ಮಾವು,
ಕೋಗಿಲೆಯ ಹಾಡು
* * *
ಈ ಹೊತ್ತು
ಆಗುಸದಲ್ಲೊಂದು ಚುಕ್ಕಿ
ಇರುಳ ದಾರಿದೀಪ

■ ಡಾ. ಸಿ. ರವೀಂದ್ರನಾಥ್

ರೊಚ್ಚಿಗೆದ್ದವರ ಪ್ರತಿರೋಧ

ಈ ನಾಲ್ಕು ವರ್ಷಗಳ ಬದುಕನ್ನು ಹೇಗೆ ಉರಿಸಿದೆವೆಂಬ ಲೆಕ್ಕ ಸಿಗುವುದೆಂತು?


ಮೇಣದಬತ್ತಿಯನ್ನು ಎರಡೂ ಕಡೆ ಹಚ್ಚಿ ಉರಿಸುತ್ತಾ ಹೋದಂತೆ ನಮ್ಮ ತ್ರಾಣ, ಸಮಯವನ್ನು 'ಲಂಕೇಶ್' ಬಸಿದುಕೊಂಡಿದೆ. ನಮ್ಮ ಪುಟ್ಟ ತಂಡ ಈಗ ಸ್ವಾವಲಂಬಿ. ಕರ್ನಾಟಕದ ಸಮಕಾಲೀನ ರಾಜಕೀಯ ಹಾಗೂ ಸಾಮಾಜಿಕ ಸಂದರ್ಭಗಳಿಂದಾಗಿ ಮತ್ತು ಹತ್ತಾರು ಸಾವಿರ ಓದುಗರ ಅಗೋಚರ ಕೈಗಳ ಬೆಂಬಲದಿಂದಾಗಿ ನಾವೀಗ ಐದನೇ ವರ್ಷದಲ್ಲೂ ಮುನ್ನಡೆಯಲು ಸಾಧ್ಯವಾಗುತ್ತಿದೆ. ಅದಕ್ಕೂ ಮೊದಲಿಂದಲೂ ಲಂಕೇಶ್ ಪತ್ರಿಕೆಯ ಪರಂಪರೆಯಲ್ಲಿ ಒಂದಷ್ಟು ಕಲಿತು ಬಂದಿದ್ದ ನಾವುಗಳು ಕೋಮುವಾದ, ರಾಜಕೀಯ ಭ್ರಷ್ಟಾಚಾರ ಮತ್ತು ಎಲ್ಲಾ ರೀತಿಯ ಸಾಮಾಜಿಕ ಅನ್ಯಾಯಗಳ ವಿರುದ್ಧದ ಹೋರಾಟಗಳಲ್ಲಿ ತೊಡಗಿದ್ದೆವು. ಒಂದು ದಶಕ ಕಾಲದ ಆ ಜೀವನ ಕುಟುಂಬದ ಸಮಸ್ಯೆಗಳು, ಹಣಕಾಸಿನ ಕಷ್ಟಗಳು, ಅನೇಕ ಅಪಾಯಗಳನ್ನು ಮುಂದೊಡ್ಡಿತ್ತಾದರೂ ನಾವ್ಯಾರೂ ಎದೆಗುಂದಿರಲಿಲ್ಲ.

ಆವಾಗಲೇ ನಮಗೆ ಗೌರಿಯ ಪರಿಚಯವಾಗಿದ್ದು. ಆದರ ಬೆನ್ನ ಹಿಂದೆಯೇ ನಮ್ಮ ಗೆಳೆಯರ ಬಳಗದ ರಾಜಕೀಯ ಬದ್ಧತೆಯನ್ನು ಪರೀಕ್ಷೆಗೊಡ್ಡುವ ಘಟನೆಗಳೂ ವೇಗವಾಗಿ ಸಂಭವಿಸಿದವು.

ಸಾಕೇತ್ ಹತ್ಯೆ ಅದರಲ್ಲೊಂದು....

ಅವರೊಂದಿಗೆ ನಮಗೆ ಯಾವುದೇ ನೇರ ಸಂಬಂಧ ಇರಲಿಲ್ಲ. ಆದರೂ ಸಾಕೇತನ ಸಾಮಾಜಿಕ ಕಾಳಜಿಗಳನ್ನು ಅಂತದ್ದೇ ಆಶಯಗಳಿದ್ದವರು ನಿರ್ಲಕ್ಷಿಸುವಂತಿರಲೂ ಇಲ್ಲ. ಈ ಸರಳ ಸೂಕ್ಷ್ಮವನ್ನು ಯಾರೇ ಆಗಲಿ ಅರ್ಥ ಮಾಡಿಕೊಳ್ಳುವಷ್ಟರಲ್ಲಿ 'ನಕ್ಸಲ್' ಬೆಂಬಲಿಗರೆಂಬ ಆರೋಪದಡಿ ಗೌರಿ ಏಕಾಂಗಿಯಾದರು. ನಾವೂ ಸಹ.

ಅವತ್ತಿನ ಮಟ್ಟಿಗೆ ಸಾಕೇತ್ ಹತ್ಯೆ ಕೇವಲ **outlaw** ಒಬ್ಬನ ಸಾವು ಮಾತ್ರ ಆಗಿರಲಿಲ್ಲ. ಅದು ಪ್ರಜಾಪ್ರಭುತ್ವದ ಮುಖವಾಡದಡಿ ಸರ್ಕಾರಗಳು ಬೆಳೆಸಿಕೊಂಡಿದ್ದ ಕೊಲೆಗಡುಕ ಕೈಗಳ ಪ್ರದರ್ಶನವಾಗಿತ್ತು. ಸಶಸ್ತ್ರ ಹೋರಾಟದ ನಕ್ಸಲರನ್ನು ದಮನಿಸುವ ನೆಪದಲ್ಲಿ ಬೇರೆಲ್ಲಾ ಪ್ರಜಾಸತ್ತಾತ್ಮಕ ಭಿನ್ನಾಭಿಪ್ರಾಯ ಪ್ರತಿಭಟನೆಗಳನ್ನು ಹೊಸಕಿ ಹಾಕಿಬಿಡುವ ಪಿತೂರಿಯೂ ಅದರಲ್ಲಿತ್ತು. ಪೊಲೀಸರು, ಬಲಪಂಥೀಯರು ನಡೆಸಿದ ಈ ಜಂಟಿ ಕಾರ್ಯಾಚರಣೆಗಳಿಗೆ ಪ್ರಗತಿಪರರ, ಜನಪರ ಕಾಳಜಿಯಿರುವವರ ಹುಟ್ಟಡಗಿಸುವ ಗುರಿ ಇತ್ತು.



ಅವತ್ತಿನ ಮಟ್ಟಿಗೆ ಕರ್ನಾಟಕದ ಸಿಪಿಎಂ ಪಕ್ಷ ಮತ್ತು ಜಾಳುಜಾಳು ತಿಳಿವಳಿಕೆಯ ಸಮಾಜವಾದಿಗಳೆನಿಸಿಕೊಂಡಿದ್ದ ಕೆಲವರ ನಿಲುವಂತೂ ಪೊಲೀಸು, ಆರ್‌ಎಸ್‌ಎಸ್‌ಗಿಂತ ಬೇರೆ ಇರಲಿಲ್ಲ.

ಅದನ್ನೆಲ್ಲಾ ನೆನೆದರೆ ಈಗಲೂ ಬೇಸರ.

ಇಂಥ ಬಿಕ್ಕಟ್ಟಿನ ಸಂದರ್ಭವೇ 'ಲಂಕೇಶ್' ಹೊಸ ಹುಟ್ಟಿಗೆ ಪ್ರೇರಣೆಯಾಗಿತ್ತು. ಒಂದಿಷ್ಟು ವೃತ್ತಿಯ ಅನುಭವ, ಅಗಾಧ ಸಾಮಾಜಿಕ ಕಾಳಜಿ ಬಿಟ್ಟರೆ ನಮ್ಮ ಹತ್ತಿರ ಬೇರೇನೂ ಇರಲಿಲ್ಲ. ಅನ್ನ ಸಂಪಾದನೆಗೆ ನಮಗಿದೊಂದೇ ಆಯ್ಕೆ ಅಂತಲೂ ಇರಲಿಲ್ಲ. ಆದರೂ ನಾವೀ ದಾರಿಯನ್ನೇ ಆರಿಸಿಕೊಂಡೆವು. **Activist Journalism** ನ ಹೊಸ ಲಯ ರೂಢಿಸಿಕೊಂಡೆವು. ಜನಪರ ನಿಲುವು, ಪ್ರಗತಿಪರ ಕಾಳಜಿ, ಜನಾಂದೋಲನಗಳನ್ನು ಬೆಸೆಯುವ, ಮರುಭರವಸೆ ತುಂಬುವ ಸೇತುವೆಯಾಗುವ ಪ್ರಯತ್ನವಾಗಿತ್ತು ನಮ್ಮದು. ಸರ್ಕಾರ ದಮನಿಸಲು ಹೊರಟದ್ದು ಕೆಲವೇ ವ್ಯಕ್ತಿಗಳನ್ನಿರಬಹುದು. ಆದರೆ ಉದ್ದೇಶ ಮಾತ್ರ ಸ್ಪಷ್ಟವಿತ್ತು ಅದು.

ಬೆದರಿಕೆ.....!

ಸಾಕೇತ್ ಹತ್ಯೆಯ ಬೆನ್ನಿಗೇ ಪಾವಗಡದಲ್ಲಿ ನಕ್ಸಲರು ಕೆಲ ಪೊಲೀಸರನ್ನು ಕೊಂದರು. ಅದನ್ನು ಗೌರಿಯ ತಲೆಗೆ ಕಟ್ಟುವ ದುಷ್ಟ ಪ್ರಯತ್ನಗಳಾದವು. ಯಾವುದೇ ಕ್ಷಣದಲ್ಲಾದರೂ ಗೌರಿಯನ್ನು ಪೊಲೀಸರು ಬಂಧಿಸಿ ಕರೆದೊಯ್ಯುತ್ತಾರೆಂಬ ಭೀತಿ ಹುಟ್ಟಿಸಲಾಯಿತು.

ನಾವೂ ರೊಚ್ಚಿಗೆದ್ದು ಪ್ರತಿರೋಧ ತೋರಿದೆವು. 'ಲಂಕೇಶ್' ನಮ್ಮ ಪ್ರತಿಭಟನೆಯ ವೇದಿಕೆಯಾಯಿತು. ಬಹಿರಂಗವಾಗಿ ಏನನ್ನಾದರೂ ಮುಕ್ತವಾಗಿ ಹೇಳಲಾರದೆ ಪರಿತಪಿಸುತ್ತಿದ್ದ ಸಾವಿರಾರು ಜನ 'ಲಂಕೇಶ್' ಖರೀದಿಸುವ ಮೂಲಕ ಸರ್ಕಾರದ ವಿರುದ್ಧ ನಿಂತರು.

ಬಿಡಿ ಚಿತ್ರಗಳು

• ಈಶ

ಅದೊಂದು ಸ್ಪಷ್ಟ ಗೋಚರವಾಗಿದ್ದ ಅಥವಾ ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ **invisible support.** ಜನಪರ ರಾಜಕೀಯ ನಿಲುವುಗಳ ಕುರಿತಂತೆ ಆಪ್ಪಳಿಸಲಿದ್ದ ವ್ಯಾಕ್ಯೂಂ ಅನ್ನು 'ಲಂಕೇಶ್' ತುಂಬಿದ್ದು ಹೀಗೆ. ನಾವು ಈವರೆಗೂ ಸಾಧಿಸಿದ್ದು ಕಡಿಮೆಯೇ ಇರಬಹುದು, ಆದರೆ ನಾವೆಂದೂ ಅಪ್ರಾಮಾಣಿಕರಾಗಲಿಲ್ಲ. ನಮ್ಮ ಮುಂದಿರುವ ಗುರಿ ಬಲು ಕಷ್ಟದ್ದೇ ಆಗಿರಬಹುದು, ನಾವೆಂದೂ ಹತಾಶರಾಗುವುದಿಲ್ಲ. ಮಾಫಿಯಾ ಡಾನ್‌ಗಳಂತೆ ಕಂಡವರ ಹಣ ಕಸಿದು, ಕುವೆಂಪು ಫೋಟೋ ಹಾಕಿಕೊಂಡು ಪ್ರಗತಿಪರ ಪೋಸ್ ಕೊಡಲಿಲ್ಲ. ಓದುಗರಿಂದ ರಚನಾತ್ಮಕ ಟೀಕೆ ಬಂದಾಗ ನಿರ್ಲಕ್ಷಿಸಲೂ ಇಲ್ಲ.

ಇಲ್ಲಿ ನಿಮಗೊಂದು ತಮಾಷೆ ಹೇಳಬೇಕು.


ನಮ್ಮ ಪತ್ರಿಕೆಯ ಮಾರಾಟವಾಗದಿರುವ ಪ್ರತಿಗಳನ್ನು ಏಜೆಂಟರು ವಾರದ ಒಂದು ದಿನ ಆಫೀಸಿಗೆ ವಾಪಸ್ ತಂದು ಕೊಟ್ಟು ಹೋಗುತ್ತಿರುತ್ತಾರೆ. ಆಫೀಸಿನ ಮೆಟ್ಟಿಲುಗಳ ಹತ್ತಿರ ಆ ಕೆಲವು ಬಂಡಲ್‌ಗಳು ನಮ್ಮ ಕಣ್ಣಿಗೆ ಬಿದ್ದಾಗೆಲ್ಲ ನಮಗೆ ಕಸಿವಿಸಿ, ಓದುಗನಿಂದ ತಿರಸ್ಕರಿಸಲ್ಪಟ್ಟ ಅವಮಾನಿತರಾದ ಭಾವನೆ. ನಾವು ಆಗೆಲ್ಲಾ ಮ್ಯಾನೇಜರ್ ರಾಜುಗೆ "ಏನ್ ರಾಜು, **unsold copies** ನಾವಿಲ್ಲದಾಗ ಸೀಕ್ರೆಟಾಗಿ ರಾತ್ರಿ ಹೊತ್ತು ತರಿಸಿಕೊಳ್ಳಕ್ಕಾಗಲ್ಲವಾ" ಎಂದು ಕಿಚಾಯಿಸುತ್ತಿರುತ್ತೇವೆ. ಆದರೆ ಒಳಗೆ ಭಯ ಇದ್ದೇ ಇದೆ. ಓದುಗರಿಗೆ ಯಾವ ವಿಚಾರ ಹೇಗೆ ಹೇಳಬೇಕು, ಎಷ್ಟು ಹೇಳಬೇಕು, ಯಾವಾಗ ಹೇಳಬೇಕೆಂಬುದನ್ನು ನಾವೆಲ್ಲಾ ಇನ್ನೂ ಕಲಿಯುತ್ತಲೇ ಹೋಗಬೇಕಿದೆ ಅದರ **indicator** ಈ ಸೇಲ್ ಆಗದ ಪ್ರತಿಗಳು ಎಂದು ನಮಗೆ ಗೊತ್ತಾಗಿದೆ. ಅದೇರೀತಿ ಈಗ ಪಾಪ್ಯುಲರ್ ಆಗಿರುವ 'ಗ್ರೈಡ್'ನ ಓದುಗರನ್ನು ಹೊಸ ಪೀಳಿಗೆಯ 'ಲಂಕೇಶ್' ಓದುಗರನ್ನಾಗಿ ರೂಪಿಸುವ ತಹತಹ ನಮಗಿದೆ. ಆದರೆ ಅಂತಾದೊಂದು ಸೇತುವೆಯನ್ನು ಹೇಗೆ ಕಟ್ಟಬೇಕೆಂಬ ಸೂತ್ರ ನಮಗಿನ್ನೂ ಸಿಕ್ಕಿಲ್ಲ. ಸದ್ಯಕ್ಕೆ ಅವೆರಡೂ ಪ್ರತ್ಯೇಕ ದ್ವೀಪಗಳಂತಿವೆ.

ಈ ನಾಲ್ಕು ವರ್ಷಗಳ 'ಲಂಕೇಶ್' ಕೆಲಸ ನಮಗೆ ಜೀವನದ ಅನೇಕ ಪಾಠ ಕಲಿಸಿದೆ. ಅನೇಕ ಸಾಧ್ಯತೆಗಳನ್ನು ತೋರಿಸಿದೆ. ಮುಖ್ಯವಾಗಿ ಜನರ ಪ್ರೀತಿ ನಂಬಿಕೆ ಪಡೆದುಕೊಂಡಿದೆ. ನಮಗೆಲ್ಲಾ ಅನ್ನ ಕೊಟ್ಟಿದೆ.

ಸರ್ಕಾರಕ್ಕೆ, ಸಮಾಜದ್ರೋಹಿ ಕೋಮುವಾದಿಗಳಿಗೆ, ನಿರಾತಂಕವಾಗಿ ಅವರ ದುಷ್ಟತನ ಮುಂದುವರೆಸಿಕೊಂಡು ಹೋಗಲು 'ಲಂಕೇಶ್' ಬಿಡುವುದಿಲ್ಲ. ಇದು ನಮ್ಮ **committment.** ■

ತಂದೆಗೆ ತಕ್ಕ ಮಗಳು

1986 ರ ಆಸುಪಾಸಿನಲ್ಲಿ ಪಾವಗಡದಲ್ಲಿ ನಾನು ಹೈಸ್ಕೂಲ್ ಶಿಕ್ಷಕನಾಗಿದ್ದಾಗ ಮನೆ ಪಾಠಕ್ಕೆಂದು ಬರುತ್ತಿದ್ದ ಮಕ್ಕಳ ಪೈಕಿ ಅಂಗವಿಕಲ ವಿದ್ಯಾರ್ಥಿಯೊಬ್ಬ (ಕೇವಲ ತನಗಿದ್ದ ಒಂದೇ ಕೈನಿಂದ ಬಂಡಲ್ ಹಿಡಿದು ಸೈಕಲ್ ತುಳಿಯುತ್ತ ಮನೆ ಮನೆಗೆ ಲಂಕೇಶ್ ಪತ್ರಿಕೆ ಹಂಚುತ್ತಿದ್ದ ವಿದ್ಯಾರ್ಥಿ) ತಾನು ಕೊಡಬೇಕಾದ ಫೀಸ್ ಬದಲಿಗೆ ಲಂಕೇಶ್ ಗುರುಗಳ ಪತ್ರಿಕೆ ಪರಿಚಯಿಸಿದ. ಅಂದಿನಿಂದ ಇಂದಿನವರೆಗೆ ಲಂಕೇಶ್ ಒಡನಾಡಿಯಾಗಿ ನಾನು ಪಡೆದಿರುವ ಅನುಭವ ಸಂಸ್ಕಾರ, ಜಾತ್ಯತೀತ ಮನೋಭಾವ, ಹೃದಯ ವೈಶಾಲ್ಯತೆ ಮಹತ್ವಪೂರ್ಣವಾದದ್ದು ಎನ್ನಬಹುದು. ಸಮಾಜದ ವಿವಿಧ ವರ್ಗಗಳ ಶೋಷಿತರ ದನಿಯಾಗಿ ಮೂಡಿಬಂದಿದ್ದ ಪತ್ರಿಕೆ ಗುರುಗಳ ಹಠಾತ್ ಕಣ್ಮರೆಯಿಂದಾಗಿ ನನ್ನ ಹೃದಯದೊಂದಿಗೆ ಬೆಸುಗೆಗೊಂಡಿದ್ದ ಪತ್ರಿಕೆ ಮುಂದೆ ಹೇಗೆ ಎನ್ನುವಂತಾಯಿತು. ಆ ಶೂನ್ಯವನ್ನು ಸಮರ್ಥವಾಗಿ ತುಂಬಿದ ಗೌರಿ ಮೇಡಂರವರು ತಂದೆಗೆ ತಕ್ಕ ಮಗಳಾಗಿ ಪತ್ರಿಕೆಯ ನಿಲುವು ಆಶಯಗಳಿಗೆ ತಕ್ಕಂತೆ ಬುದ್ಧ, ಬಸವ, ಅಂಬೇಡ್ಕರ್ ತತ್ವಗಳಿಗೆ ಅನುಗುಣವಾಗಿ ಯಶಸ್ವಿಯಾಗಿ ಮುನ್ನಡೆಸುತ್ತಿರುವುದು ಖುಷಿಯ ವಿಚಾರವಾಗಿದೆ. ದುರ್ಬಲ ವರ್ಗದ ದನಿಯಾಗಿ, ದಲಿತರ ಆಶಾಕಿರಣವಾಗಿ, ಮಹಿಳೆಯರಿಗೆ ಸ್ಫೂರ್ತಿಯಾಗಿ, ಅಲ್ಪಸಂಖ್ಯಾತರಿಗೆ ಆತ್ಮವಿಶ್ವಾಸದ ಪ್ರತೀಕವಾಗಿ, ಸಮಾಜದ ಎಲ್ಲ ಶೋಷಿತ ಸಮುದಾಯದ ಭರವಸೆಯ ಬೆಳಕಾಗಿ ಮುನ್ನಡೆಯುತ್ತಿರುವ ಗೌರಿ ಲಂಕೇಶ್‌ರವರಿಗೆ ಹ್ಯಾಟ್ಸ್ ಆಫ್. ಪತ್ರಿಕೆಯ 5ನೇ ವಾರ್ಷಿಕೋತ್ಸವ ಮತ್ತು ಲಂಕೇಶ್ ಗುರುಗಳ 74ನೇ ಹುಟ್ಟುಹಬ್ಬದ ಈ ಸಂದರ್ಭದಲ್ಲಿ ಕ್ಯಾಪ್ಟನ್ ಗೌರಿಯವರಿಗೆ ಅಭಿನಂದನೆಗಳು.



-ಕಟಿಹಳ್ಳಿ ಮಲ್ಲಿಕಾರ್ಜುನಯ್ಯ, ಪಾವಗಡ



5ನೇ ವರ್ಷಕ್ಕೆ

ನಿಮ್ಮ ಕಷ್ಟ-ಸುಖದಲ್ಲಿ ನಾನೂ ಇದ್ದೇನೆ

ಅದೊಂದು ದಿನ ಕಂಚಿನ ಕಂಠದ ಹೆಣ್ಣು ಧ್ವನಿಯೊಂದು ನನ್ನ ಮೊಬೈಲ್‌ಗೆ ಕರೆ ಮಾಡಿ, "ಹೊಸದಾಗಿ ಪತ್ರಿಕೆ ಮಾಡುತ್ತಿದ್ದೇನೆ, ಸಹಕರಿಸಬೇಕಪ್ಪಾ, ಒಂದಿಷ್ಟು ಚಂದಾದಾರರನ್ನಾಗಿ ಮಾಡಿ. ಪತ್ರಿಕೆ ಬಿಡುಗಡೆಗೆ ಬನ್ನಿ" ಎಂದು ಕರೆಯಿತು. ಆ ಹೆಣ್ಣು ಧ್ವನಿ ಗೌರಿ ಲಂಕೇಶ್.

ಬೇರೆಯವರನ್ನು ಚಂದಾದಾರರನ್ನಾಗಿ ಮಾಡುವ ಮೊದಲು ನಾನು ಚಂದಾದಾರನಾಗಬೇಕೆಂದು ಬ್ಲಾಂಕ್ ಚೆಕ್ ಮೂಲಕ ಚಂದಾದಾರನಾದೆ. ಪ್ರಥಮ ಸಂಚಿಕೆಯನ್ನು ಕೈಗೆತ್ತಿಕೊಂಡು, ಹೇಗಪ್ಪಾ ಇವರು ಪತ್ರಿಕೆ ನಡೆಸುತ್ತಾರೆ ಎಂಬ ಸ್ವಗತದೊಂದಿಗೆ ಮಾತನಾಡಿಕೊಂಡೆ.

ಪತ್ರಿಕೆಯ ಬೆಳವಣಿಗೆಗೆ ನನ್ನದು ಏನೇನೂ ಇಲ್ಲ. ಆದರೆ ಪತ್ರಿಕೆ ನನ್ನನ್ನು ಗುರುತಿಸಿ, ತನ್ನ ಅಪ್ಪುಗೆಯಲ್ಲಿ ತಬ್ಬಿಕೊಂಡಿದೆ. ಈ ತಬ್ಬುವಿಕೆಯಲ್ಲಿ ಅಂಕಣಕಾರ ಬಿ. ಚಂದ್ರೇಗೌಡರ ಪಾತ್ರ ಹಿರಿದು.

ಬೆಂಗಳೂರಿಗೆ ಹೋದಾಗಲೆಲ್ಲಾ ಪತ್ರಿಕಾ ಕಚೇರಿಗೆ ಹೋದರೇನೇ ನನಗೆ ಸಮಾಧಾನ. ಅದೂ-ಇದೂ ಮಾತನಾಡಿ, ಪತ್ರಿಕೆಯ ಪ್ರೂಫ್ ತಿದ್ದಿ, ಗೆಳೆಯರು ಹೇಳಿದ ಒಂದಿಷ್ಟು ಪುಸ್ತಕಗಳನ್ನು ತಂದರೇನೇ ಸಮಾಧಾನ. ಇಂದು ಪತ್ರಿಕೆ ಪ್ರತಿ ಸಂಚಿಕೆಯಲ್ಲೂ ವೈವಿಧ್ಯತೆಯನ್ನು ತಂದುಕೊಂಡಿದೆ. ಪ್ರತಿ ವಾರ ಕಾಯುವಂತೆ ಮಾಡುತ್ತಿದೆ. ಶಿವಸುಂದರ್‌ರ ಚಿಂತನ ಬರಹಗಳು, ಗೌರಿಯವರ ಕಂಡಹಾಗೆ ಬರಹದಲ್ಲಿನ ವೈಚಾರಿಕತೆ, ಸೋಮನಾಥ್‌ರ ಎದೆ ಝಲ್ಲೆನಿಸುವ ತನಿಖಾ ವರದಿಗಳು, ಪಾರ್ವತೀಶರ ಬಿಡಿಚಿತ್ರಗಳು, ಜೊತೆಗೆ ಪತ್ರಿಕೆಯ ಹಿರಿಯ ಹಾಗೂ ಅಂಕಣಕಾರ ಬಿ. ಚಂದ್ರೇಗೌಡರ ಅವರದೇ ಬಿದರಕೆರೆ ಊರಿನ ಕಟ್ಟೆ ಪುರಾಣದ ಸಮಗ್ರ ಚಿತ್ರಣ, ಚಿತ್ರರಂಗ: ಆಗು-ಹೋಗು ಬಗ್ಗೆ ಚಾಟಿ ಏಟು ನೀಡುತ್ತಿರುವ ಅರುಣ್-ಶೆಣೈ ಬರಹಗಳು, ತಿವಿದು ಎಚ್ಚರಿಸುವ ಕುಮಾರ್ ಬುರಡಿಕಟ್ಟಿ ಅವರ ಸುತ್ತ-ಮುತ್ತ, ಮೇಷ್ಟ್ರ ಸಮಕಾಲೀನರಾದ ಹಿರಿಯ ಎಚ್.ಎಲ್.ಕೆ. ಅವರ ಅಣಕ... ಇವೆಲ್ಲಾ ಪತ್ರಿಕೆಯನ್ನು ಚಂದಗಾಣಿಸಲು ಕಾರಣ. ಇದರಷ್ಟೇ ಕಾರಣ ಪತ್ರಿಕೆಯ ಫೇಂಡಾಮೃಗ ಮ್ಯಾನೇಜರ್ ರಾಜು. ಪತ್ರಿಕೆಯ ಚಿತ್ರ ಕಲಾವಿದ ಮಂಜು ನಾಥ್ ಅವರ ವ್ಯಂಗ್ಯ ಚಿತ್ರವಂತೂ ಹೊಟ್ಟೆ ಹುಣ್ಣಾಗಿಸುವಂತಿರುತ್ತೆ.



ಒಟ್ಟಾರೆ ಒಂದು ಪತ್ರಿಕೆ ಆರೋಗ್ಯವಂತ ಸಮಾಜದಲ್ಲಿ ಆರೋಗ್ಯಕರವಾಗಿ ಬೆಳೆಯುತ್ತಿರುವುದು ಸಂತಸದ ವಿಷಯ.

ನಿಮ್ಮೊಂದಿಗೆ ಯಾವಾಗಲೂ ಕಷ್ಟ-ಸುಖದಲ್ಲಿ ನಾನು ಇರುತ್ತೇನೆ. ನಿಮಗೆ ಒಳ್ಳೆಯದಾಗಲಿ.

-ಎನ್. ವೆಂಕಟೇಶ್, ಅಜ್ಜಂಪುರ

ನನ್ನ ಮುನಿಸು ಮತ್ತು ಆರೋಪ

ಐದು ವರ್ಷಗಳ ಹಿಂದಿನ ಮಾತು.

ಗೌರಿ ಲಂಕೇಶ್ ಪತ್ರಿಕೆ ಮಾಡುತ್ತಾರೆಂಬ ಸುದ್ದಿ ತಿಳಿದ ತಕ್ಷಣ ಅವರಿಗೊಂದು ಫೋನ್ ಮಾಡಿ ನನ್ನ ಬೆಂಬಲವನ್ನು ಸೂಚಿಸಿದೆ. ಶಿವಮೊಗ್ಗ ಜಿಲ್ಲೆಯಾದ್ಯಂತ 'ಗೌರಿ ಲಂಕೇಶ್' ಪತ್ರಿಕೆಯನ್ನು ಹಬ್ಬಿಸಬೇಕು, ಆ ಮೂಲಕ ಪ್ರಗತಿಪರ ಶಕ್ತಿಗಳನ್ನು ಬಲಗೊಳಿಸಬೇಕು ಎಂಬ ಹಂಬಲದಲ್ಲಿ ಶಿವಮೊಗ್ಗ ನಗರದ ಪತ್ರಿಕೆಯ ಏಜೆನ್ಸಿಯನ್ನು ನಾನೇ ಪಡೆದೆ. ಬೆಂಗಳೂರಿನಿಂದ ಪೇಪರ್ ಬಂಡಲ್‌ಗಳನ್ನು ಹೊತ್ತು ತರುವ ಬಸ್ಸಿಗಾಗಿ ಪ್ರತಿ ಸೋಮವಾರ ಕಾಯುವುದು, ಪೇಪರ್ ತುಂಬಿದ ಬ್ಯಾಗುಗಳನ್ನು ಸೈಕಲ್ಲಿಗೆ ಸಿಕ್ಕಿಸಿಕೊಂಡು ಗಲ್ಲಿಗಲ್ಲಿ ತಿರುಗುತ್ತಾ ಪ್ರತಿ ಅಂಗಡಿಗೆ ಹಂಚುತ್ತಾ ಹೋಗುವುದು ಹೊಸ ಅನುಭವವಾಗಿತ್ತು.

ತೀರ್ಥಹಳ್ಳಿ-ಸಾಗರ-ರಿಪ್ಪನ್ ಪೇಟೆಗಳ ಪತ್ರಿಕೆಯ ಏಜೆನ್ಸಿಯನ್ನು ನನ್ನ ಗೆಳೆಯರಿಗೆ ಕೊಡಿಸಿದೆ. ಕಾಲಕ್ರಮೇಣ ಕೆಲವು ವಾಸ್ತವಗಳು ಅರಿವಿಗೆ ಬರಲಾರಂಭಿಸಿದವು. ಪತ್ರಿಕೆಯ ಏಜೆನ್ಸಿಯನ್ನು ವ್ಯವಹಾರಿಕವಾಗಿ ನಾನು ಸ್ವೀಕರಿಸಿದ್ದಲ್ಲ, ಗೌರಿ ಲಂಕೇಶ್‌ರವರ ಮೇಲಿನ ಅಭಿಮಾನ ಮತ್ತು ಪ್ರಗತಿಪರ ಆಶಯಗಳಿಗಾಗಿಗ ಅವರ ಬದ್ಧತೆಯನ್ನು ಗೌರವಿಸಿ ಪತ್ರಿಕೆಯ ಏಜೆನ್ಸಿಯನ್ನು ಪಡೆದುದಾಗಿತ್ತು. ಆದರೆ ಒಂದೇ ಪತ್ರಿಕೆಯ ಏಜೆನ್ಸಿ ಇಟ್ಟುಕೊಂಡರೆ ನಿರ್ವಹಿಸುವುದು ಕಷ್ಟ ಎಂಬುದು ಅರಿವಿಗೆ ಬಂತು. ಹಾಗೆಂದು ಇನ್ನಷ್ಟು ಪತ್ರಿಕೆಗಳ ಏಜೆನ್ಸಿ ಪಡೆಯುವ ಆಸಕ್ತಿ ನನಗಿರಲಿಲ್ಲ. ಆದ್ದರಿಂದ ಅವರೆಗಿನ ಲೆಕ್ಕಾಚಾರ ಚುಕ್ತಾ ಮಾಡಿ ಹಲವು ಪತ್ರಿಕೆಗಳ ಏಜೆನ್ಸಿ ಹೊಂದಿರುವ ಪರಿಚಿತ ಪ್ರಾಮಾಣಿಕರೊಬ್ಬರಿಗೆ ಏಜೆನ್ಸಿಯನ್ನು ಹಸ್ತಾಂತರಿಸಿದೆ. ಇದೇ ಹೊತ್ತಿನಲ್ಲಿ ಪ್ರಗತಿಪರ ಆಲೋಚನೆಗಳಿಗೂ ವ್ಯವಹಾರದಲ್ಲಿನ ಶುದ್ಧತೆಗೂ ಸಂಬಂಧವಿಲ್ಲವೆಂಬುದನ್ನು ಪತ್ರಿಕೆಯ ಏಜೆನ್ಸಿ ಹೊಂದಿದ್ದ ನನ್ನ ಕೆಲವು ಪ್ರಗತಿಪರ ಗೆಳೆಯರು ಸಾಬೀತುಪಡಿಸಿದ್ದರು. ವ್ಯವಹಾರ ಕುಶಲತೆಯ ಕೊರತೆಯೂ ಅವರಿಂದ ಪತ್ರಿಕೆಗಾದ ಸಾಕಷ್ಟು ನಷ್ಟಕ್ಕೆ ಕಾರಣವಾಗಿರಬಹುದು. ಇದು ನನ್ನಿಂದಲೇ ಪತ್ರಿಕೆಗಾದ ನಷ್ಟವೆಂದು ಅನ್ನಿಸಿ ದುಃಖವಾಗುತ್ತದೆ.

ದುರಂತವೆಂದರೆ ಪತ್ರಿಕೆಯ ವಿಚಾರದಲ್ಲಿ ಇದೊಂದು ಅಪವಾದವಲ್ಲ. ರಾಜ್ಯದ ನಾನಾ ಕಡೆ ಪತ್ರಿಕೆಯ ಏಜೆನ್ಸಿ ಪಡೆದ ಪ್ರಗತಿಪರ ಗೆಳೆಯರಿಂದ ಈ ರೀತಿಯ ಕೊಡುಗೆ ಪತ್ರಿಕೆಗೆ ಸಾಕಷ್ಟು ಪ್ರಮಾಣದಲ್ಲಿ ಲಭಿಸಿದೆಯೆಂದು ಪತ್ರಿಕೆಯ ಪ್ರಸರಣಾಧಿಕಾರಿ ರಾಜುರವರೊಮ್ಮೆ ನಗುತ್ತಾ ಹೇಳಿದ್ದರು!

ಕೋಮುವಾದದ ವಿರುದ್ಧದ ರಾಜ್ಯದ ಏಕೈಕ ಪ್ರಬಲ ಶಕ್ತಿ ಪತ್ರಿಕೆ ಕೋಮುವಾದದ ವಿರುದ್ಧ ವರದಿ, ಲೇಖನಗಳು ಸ್ವಲ್ಪ ಜಾಸ್ತಿಯಾದವೇನೋ ಎಂದು ನನಗನ್ನಿಸಿದ್ದಿದೆ. ಕೆಲವು ಗೆಳೆಯರೂ ಈ ಬಗೆಯ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಕೇಳಿದ್ದೇನೆ. ಪತ್ರಿಕೆಯ ಬದ್ಧತೆಯನ್ನು ಗೌರವಿಸುತ್ತಲೇ ಕೋಮುವಾದದ ಬಗೆಗಿನ ಬರಹಗಳಲ್ಲಿನ ನಿರೂಪಣಾ ಶೈಲಿ, ವರದಿಗಾರಿಕೆಯ ಪ್ರೆಸೆಂಟೇಷನ್ ಕುರಿತು ಹೊಸದಾಗಿ ಚಿಂತಿಸುವುದು ಸೂಕ್ತವೇನೊ ಎನ್ನಿಸುತ್ತಿದೆ.

ಗೌರಿ ಲಂಕೇಶ್ ಪತ್ರಿಕೆಯ ಬಳಗದವನಾಗಿ ನನ್ನ ಎರಡು ಮುನಿಸನ್ನು ಇಲ್ಲಿ ಹೇಳಿಕೊಳ್ಳಲೇಬೇಕು. ಎರಡು ವರ್ಷದ ಹಿಂದೆ ನನ್ನದೊಂದು ಕತೆಯನ್ನು ವಿಶೇಷಾಂಕಕ್ಕೆ ಹಾಕಿಕೊಳ್ಳುತ್ತೇವೆಂದು ಅದನ್ನು ತರಾತುರಿಯಲ್ಲಿ ಈ-ಮೈಲ್‌ನಲ್ಲಿ ಸಿಡಿ ರೂಪದಲ್ಲಿ ತರಿಸಿಕೊಂಡು ಪ್ರಕಟಿಸದೆ ಗೆಳೆಯರ ಬಳಿ ನನ್ನನ್ನು ಇಂಗು ತಿಂದ ಮಂಗನನ್ನಾಗಿಸಿದರು! ನನ್ನ 'ಪ್ರಗತಿಪರ ಕಥೆ'ಗಳಿರುವ ಕಥಾಸಂಕಲನದ ಬಗ್ಗೆ ಪತ್ರಿಕೆಯ ಬಳಗದ ಮಿತ್ರರಿಗೆ ಪರಿಚಯಿಸುವ ಕೆಲಸ ಮಾಡದೆ 'ಪ್ರಗತಿಪರ ಪತ್ರಿಕೆ' ಎಂಬ ತನ್ನ ಹೆಗ್ಗಳಿಕೆಗೆ ಪತ್ರಿಕೆ ಕಳಂಕ ತಂದುಕೊಂಡಿದೆ ಎಂಬುದು ನನ್ನ ಗಂಭೀರ ಆರೋಪ ಮತ್ತು ಎರಡನೆಯ ಮುನಿಸು!

ಗೌರಿ ಲಂಕೇಶ್ ಹಾಗೂ ಪಾರ್ವತೀಶ್‌ರವರಿಗೆ ಈ ವಿಚಾರಗಳಲ್ಲಿ ಕ್ಷಮೆಯಿಲ್ಲ! ನನ್ನ ಪುಸ್ತಕ ಪ್ರಕಟವಾದ ಒಂದೂವರೆ ವರ್ಷದಿಂದಲೂ ಪುಸ್ತಕ ಪರಿಚಯಿಸುವ ಕುರಿತಂತೆ ಆಗಸ್ತ್ಯ ಮಹಾಮುನಿಗಳಂತೆ ಆಶ್ವಾಸನೆ ನೀಡುತ್ತಿರುವ ಶಿವಸುಂದರ್ ಹಾಗೆ ತಿಳಿದುಕೊಳ್ಳಬೇಕಿಲ್ಲ!



-ಸರ್ಜಾಶಂಕರ್ ಹರಳಿಮಠ
ಶಿವಮೊಗ್ಗ

ಜಯಮಾಲಾ ರಾಜೀನಾಮೆ?

ಡಾ. ಜಯಮಾಲಾ ತನ್ನ ಅಧ್ಯಕ್ಷ ಸ್ಥಾನಕ್ಕೆ ನೀಡುವರೇ? ಉದಯ ಟಿವಿ ಮತ್ತು ಚೇಂಬರ್ ನಡುವೆ ಜಟಾಪಟಿ ಆರಂಭವಾಗಿದೆಯೇ? ಕಲಾವಿದರ ನಡುವೆ ಪರಸ್ಪರ ವೈಮನಸ್ಸು ಸೃಷ್ಟಿಯಾಗಿದೆಯೇ? ಇಂತಹ ಹತ್ತಾರು ಕಥೆಗಳು ಗಾಂಧಿನಗರದಲ್ಲಿ ಈಗ ಹುಟ್ಟುತ್ತಿವೆ. ಅಮೃತಮಹೋತ್ಸವ ಸಮಾರಂಭ ಮುಗಿದ ನಂತರವಂತೂ ಈ ಕಥೆಗಳಿಗೆ ಹುನಕಳೆದಂತೆ ರೆಕ್ಕೆಪುಕ್ಕ ಬರುತ್ತಿದೆ.



ಅಂತೂಇಂತೂ ಕನ್ನಡ ಚಿತ್ರರಂಗದ ಅಮೃತಮಹೋತ್ಸವ ಸಮಾರಂಭ ಮುಗಿದೇ ಹೋಯಿತು ಎಂಬ ಸಮಾಧಾನವಿದ್ದರೂ ಯಾರ ಮುಖದ ಮೇಲೂ ಸಂತೃಪ್ತಿಯ ನಗು ಕಾಣಿಸುತ್ತಿಲ್ಲ. ಯಾಕೆಂದರೆ ಒಂದು ಸಮಾರಂಭ ಎಷ್ಟು ಕೆಟ್ಟದಾಗಿ ಮಾಡಬಹುದು ಎಂಬುದಕ್ಕೆ ಇವರ ಹಾಡು-ಕುಣಿತ, ಸಭೆ, ನಿರೂಪಣೆ, ಭಾಷಣ, ಸನ್ಮಾನ ಎಲ್ಲವೂ ಉದಾಹರಣೆಯಾಗಿ ನಿಂತಿವೆ. ಮಾತ್ರವಲ್ಲ ಕನ್ನಡದವರಿಗೆ ಒಂದು ಸಮಾರಂಭವನ್ನೂ ಸಮರ್ಥವಾಗಿ ಮಾಡಲಾಗುವುದಿಲ್ಲ ಎಂಬುದು ಜಗಜ್ಜಾಹೀರಾಗಿದೆ. ಹೀಗೆ ಹೇಳಿದರೆ ಉದ್ಯಮದವರಿಗೆ ಬೇಸರವಾಗಬಹುದು, ಆದರೆ ಹಾಗೆ ಹೇಳದೆ ಬೇರೆ ದಾರಿಯೇ ಇಲ್ಲ.

> ಅಂತೂ ಇಂತೂ ಕನ್ನಡ ಚಿತ್ರರಂಗದ ಅಮೃತಮಹೋತ್ಸವ ಸಮಾರಂಭ ಮುಗಿದೇ ಹೋಯಿತು ಎಂಬ ಸಮಾಧಾನವಿದ್ದರೂ ಯಾರ ಮುಖದ ಮೇಲೂ ಸಂತೃಪ್ತಿಯ ನಗು ಕಾಣಿಸುತ್ತಿಲ್ಲ. ಯಾಕೆಂದರೆ ಒಂದು ಸಮಾರಂಭ ಎಷ್ಟು ಕೆಟ್ಟದಾಗಿ ಮಾಡಬಹುದು ಎಂಬುದಕ್ಕೆ ಇವರ ಹಾಡು-ಕುಣಿತ, ಸಭೆ, ನಿರೂಪಣೆ, ಭಾಷಣ, ಸನ್ಮಾನ ಎಲ್ಲವೂ ಉದಾಹರಣೆಯಾಗಿ ನಿಂತಿವೆ. ಮಾತ್ರವಲ್ಲ ಕನ್ನಡದವರಿಗೆ ಒಂದು ಸಮಾರಂಭವನ್ನೂ ಸಮರ್ಥವಾಗಿ ಮಾಡಲಾಗುವುದಿಲ್ಲ ಎಂಬುದು ಜಗಜ್ಜಾಹೀರಾಗಿದೆ.

ಚೇಂಬರ್‌ನಲ್ಲಿ ಸಮನ್ವಯದ ಕೊರತೆ

ಇತ್ತೀಚೆಗೆ ಟಿವಿಯಲ್ಲಿ ಫಿಲ್ಮ್‌ಫೇರ್ ಪ್ರಶಸ್ತಿ, ಜೀನಿಟಿವಿ ಪ್ರಶಸ್ತಿ ಮೊದಲಾದವುಗಳನ್ನು ನೋಡಿದ ಪ್ರೇಕ್ಷಕರು ನಮ್ಮ ಕನ್ನಡ ಚಿತ್ರರಂಗದವರ ರಂಗಿನಾಟವೂ ಅದೇ ಮಾದರಿಯಲ್ಲಿರುತ್ತವೆ ಎಂದು ಭಾವಿಸಿ ಪುಳಕಗೊಂಡಿದ್ದರು. ಅಷ್ಟೇ ಯಾಕೆ, ಎರಡು ವರ್ಷಗಳ ಹಿಂದೆ ಆಂಧ್ರ ಪ್ರದೇಶದವರು ಮಾಡಿದ್ದ ಅದ್ದೂರಿ ಕಾರ್ಯಕ್ರಮವನ್ನು ನೋಡಿ 'ನಾವ್ಯಾಕೆ ಹಾಗೆ ಮಾಡಲಾಗುವುದಿಲ್ಲ' ಎಂದು ಹಲುಬಿದ್ದರು. ಈ ಎಲ್ಲಾ ಕಾರಣಗಳಿಂದ 75ನೇ ವರ್ಷದ ಈ ಸಮಾರಂಭಕ್ಕೆ ಅದರದೇ ಆದ ಮಹತ್ವವಿತ್ತು.

ನಿಜ ಇಷ್ಟು ದೊಡ್ಡಮಟ್ಟದ ಕಾರ್ಯಕ್ರಮ ಆಯೋಜಿಸುವಾಗ ಕೆಲವೊಂದು ಸಣ್ಣಪುಟ್ಟ ಪ್ರಮಾದಗಳು, ತಪ್ಪುಗಳು ಆಗುತ್ತವೆ. ಹಾಗಾಗಿದ್ದರೆ ಅದನ್ನು ಸಹಿಸಿಕೊಳ್ಳಬಹುದಿತ್ತು; ನಿರ್ಲಕ್ಷಿಸಬಹುದಿತ್ತು. ಆದರೆ ಜಯಮಾಲಾ ನೇತೃತ್ವದ ತಂಡ ಅಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡದೇ ಇದ್ದುದರಿಂದ ಇಡೀ ಸಮಾರಂಭ ಎಕ್ಕುಟ್ಟಿಹೋಯಿತು. ಈ ಅಧ್ವಾನಕ್ಕೆ ಚೇಂಬರ್ ಪದಾಧಿಕಾರಿಗಳ ನಡುವೆ ಸಮನ್ವಯತೆ ಇರದಿರುವುದೇ ಕಾರಣ ಎನ್ನಬಹುದು.

ಸಮರ ನಡೆದಿತ್ತು. ಸಮಾರಂಭ ನಡೆಯುವ ಮೂರು ದಿನಗಳ ಮುನ್ನವೇ ವೇದಿಕೆಯನ್ನು ಸಿದ್ಧಪಡಿಸಿ ರಿಹರ್ಸಲ್ ಮಾಡಲು ಬಿಟ್ಟುಕೊಡಬೇಕು ಎಂದು ರವಿಚಂದ್ರನ್ ಪಟ್ಟು ಹಾಕಿದ್ದರು. ಆದರೆ ಸಮಾರಂಭದ ಮೊದಲನೆ ದಿನವೂ ವೇದಿಕೆ ರೆಡಿಯಾಗಿರಲಿಲ್ಲ. ಈ ಕಾರಣಕ್ಕಾಗಿ ರವಿಚಂದ್ರನ್ ಮತ್ತು ಜಯಮಾಲಾ ನಡುವೆ ದೊಡ್ಡ ಕದನವೇ ನಡೆಯಿತು.

3 ಕೋಟಿಗೆ ಪಂಗನಾಮ!

ಅಪಾರ ಸಂಖ್ಯೆಯಲ್ಲಿ ಸೇರಿದ ಜನಸ್ತೋಮ, ನೂಕುನುಗ್ಗಲು, ಭದ್ರತಾ ವ್ಯವಸ್ಥೆಯ ಕೊರತೆ... ಇತ್ಯಾದಿಗಳಿಂದಾಗಿ ಅರಮನೆ ಮೈದಾನದಲ್ಲಿ ಹರಡಿದ್ದ ಉದಯ ಟಿವಿಯವರ ಕೇಬಲ್‌ಗಳೆಲ್ಲಾ ಹಾಳಾಗಿ ಹೋದವು. ಹೀಗಾಗಿ ಮೂರುಗಂಟೆಗಳ ಕಾಲ ಮನರಂಜನಾ ಕಾರ್ಯಕ್ರಮ ನಡೆದರೂ ಉದಯ ಟಿವಿಯವರು ತಾಂತ್ರಿಕ ಕಾರಣಗಳಿಂದಾಗಿ ಮನರಂಜನಾ ಕಾರ್ಯಕ್ರಮವನ್ನು ಕೇವಲ ಒಂದು ಗಂಟೆ ಕಾಲ ರೆಕಾರ್ಡ್ ಮಾಡಲು ಸಾಧ್ಯವಾಯಿತು.

ಹೀಗಾಗಿ ಅದೇ ದಿನ ರಾತ್ರಿ ಉದಯದವರು "ನಮಗೆ ನಾಳೆ ಎರಡು ಗಂಟೆಗಳ ಕಾರ್ಯಕ್ರಮ ನೀಡಿ. ಪ್ರೇಕ್ಷಕರೂ ಇಲ್ಲದಿದ್ದರೂ ಪರವಾಗಿಲ್ಲ. ನಾವು ಅದನ್ನೇ ರೆಕಾರ್ಡ್ ಮಾಡಿಕೊಳ್ಳುತ್ತೇವೆ'' ಎಂದು ಗೋಗರೆದರು. ಆದರೆ ಕಲಾವಿದರು "ಇದೆಲ್ಲಾ ಸಾಧ್ಯವಿಲ್ಲ'' ಎಂದು ನಿರ್ದಾಕ್ಷಿಣ್ಯವಾಗಿ ಅವರ ಮನವಿಯನ್ನು ತಳ್ಳಿಹಾಕಿದರು. ಮೂರು ಕೋಟಿ ರೂ. ಕೊಟ್ಟು ಈ ಕಾರ್ಯಕ್ರಮದ ಪ್ರಸಾರದ ಹಕ್ಕನ್ನು ಖರೀದಿಸಿದ್ದ ಉದಯ ಟಿವಿ ಈಗ ಕೇವಲ ಒಂದು ಗಂಟೆ ಕಾರ್ಯಕ್ರಮವನ್ನು ಕೈಯಲ್ಲಿಟ್ಟುಕೊಂಡು ಉದ್ಯಮದವರಿಗೆ ಶಾಪ ಹಾಕುತ್ತಿದೆ. ಒಂದು ಗಂಟೆ ಕಾರ್ಯಕ್ರಮಕ್ಕೆ ಮೂರು ಕೋಟಿ ಹೋಯಿತಲ್ಲ ಎಂದು ಅದು ರೋದಿಸುತ್ತಿದೆ.

ಮಹಿಳೆ ವಿರುದ್ಧ ಪುರುಷರ ಪಿತೂರಿ?

ಅದಕ್ಕಿಂತಲೂ ಮುಖ್ಯವಾದ ಬೆಳವಣಿಗೆ ಚಿತ್ರರಂಗದಲ್ಲಿ ಈಗ ನಡೆಯುತ್ತಿದೆ. ಈ ಎಲ್ಲಾ ಗೊಂದಲ, ಗಲಿಬಿಲಿ ಮತ್ತು ಅವ್ಯವಸ್ಥೆಗೆ ಚೇಂಬರ್ ಅಧ್ಯಕ್ಷೆ ಜಯಮಾಲಾ ನೇರ ಕಾರಣ; ಆದುದರಿಂದ ಅವರು ನೈತಿಕ ಹೊಣೆ ಹೊತ್ತು ಅಧ್ಯಕ್ಷೆ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಕೆಯ ವಿರೋಧಿಗಳು ಪ್ರಚಾರ ಆರಂಭಿಸಿದ್ದಾರೆ. ಆದರೆ "ಯಾವುದೇ ಕಾರಣಕ್ಕೂ ನನ್ನ ಅವಧಿ ಮುಗಿಯುವ ತನಕ ನಾನು ನನ್ನ ಕುರ್ಚಿಯನ್ನು ಬಿಟ್ಟುಕೊಡುವುದಿಲ್ಲ'' ಎಂದು ಜಯಮಾಲಾ ಪಟ್ಟುಹಿಡಿದಿದ್ದಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಕರ್ನಾಟಕದ ಜನತೆ ಮತ್ತೊಂದು ಸುತ್ತಿನ ಪುಕ್ಕಟೆ ಮನರಂಜನೆಯನ್ನು ನಿರೀಕ್ಷಿಸಬಹುದು.

ಸಾಧಕರನ್ನೂ ಮರೆತರು!

ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದ ಸಂಪಾದಕ ಮಂಡಳಿ 75 ಸಾಧಕರ ಪುಸ್ತಕಗಳನ್ನು ಸರಿಯಾದ ಸಮಯದಲ್ಲಿ ಪ್ರಕಟಿಸಿ ಬಿಡುಗಡೆ ಮಾಡಿದ್ದು ಮೆಚ್ಚುವಂತದ್ದೇ. ಆದರೆ ಉದ್ಯಮಕ್ಕೆ ಅಪಾರ ಕಾಣಿಕೆ ಸಲ್ಲಿಸಿದ್ದ ತೂಗುದೀಪ್ ಶ್ರೀನಿವಾಸ್, ಸುಧೀರ್, ಸುಂದರಕೃಷ್ಣ ಅರಸು.. ಮೊದಲಾದ ಖ್ಯಾತನಾಮರ ಪುಸ್ತಕ ಹೊರತರದಿರುವುದು ವಿಷಾದನೀಯ.

ಕ್ರೇಜ್ ಹುಟ್ಟಿಸದ ಕ್ರೇಜಿಸ್ಟಾರ್!

ರವಿಚಂದ್ರನ್ ನೇತೃತ್ವದಲ್ಲಿ ಮೂಡಿಬಂದ ಮನರಂಜನಾ ಕಾರ್ಯಕ್ರಮ ಕೂಡಾ ನಿರೀಕ್ಷಿಸಿದ ಮಟ್ಟದಲ್ಲಿ ಪ್ರೇಕ್ಷಕರನ್ನು ರಂಜಿಸಲಿಲ್ಲ. ಇದು ಅಮೃತ ಮಹೋತ್ಸವ ಕಾರ್ಯಕ್ರಮ ಕಳೆಗುಂದಲು ಮುಖ್ಯಕಾರಣ. ಚಿತ್ರರಂಗದ ಕಲಾವಿದರೆಲ್ಲಾ ಒಗ್ಗಟ್ಟಿನಿಂದ ಒಂದೇ ನಾಯಕನ ಕೈ ಕೆಳಗೆ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದು ಮೆಚ್ಚೋಣ. ಆದರೆ ಕಾರ್ಯಕ್ರಮ ಮಾತ್ರ ಯಾವ ಹಂತದಲ್ಲೂ ಮನಸೆಳೆಯಲೇ ಇಲ್ಲ. ಸಿನಿಮಾ ರಂಗದ ಅತಿರಥ ಮಹಾನಟರು ಸೇರಿ ಮಾಡಿದ ಈ ರಂಗುರಂಗಿನ ನೃತ್ಯಗಳೆಲ್ಲವೂ ಕಾಲೇಜು ಮಟ್ಟದ್ದಾಗಿತ್ತು ಎಂದು ಹೇಳಿದರೆ ವಿದ್ಯಾರ್ಥಿಗಳಿಗೆ ಬೇಸರವಾಗಬಹುದೇನೋ?

ನಾಮಕಾವಸ್ಥೆ ಸನ್ಮಾನ?

ಇದು ಮೊದಲ ದಿನದ ಪಾಡಾದರೆ ಎರಡನೆಯ ದಿನವಂತೂ ಇನ್ನು ಕಳಪೆಯಾಗಿತ್ತು. ರಜನೀಕಾಂತ್‌ರಂತಹ ಸೂಪರ್‌ಸ್ಟಾರ್ ಇರುವ ವೇದಿಕೆಯಲ್ಲಿ ಚೇಂಬರ್‌ನ ಕಾಂಜಿ-ಪಿಂಜಿಗಳೆಲ್ಲಾ ಅಡ್ಡಾದಿಡ್ಡಿ ಓಡಾಡುತ್ತಾ ಸಭೆಯ ಗಾಂಭೀರ್ಯತೆಯನ್ನು ಹಾಳುಗೆಡವಿದರು. ನೂರಕ್ಕೂ ಹೆಚ್ಚು ಸಂಖ್ಯೆಯ ಸಾಧಕರನ್ನು ನಾಮಕಾವಸ್ಥೆ ರೀತಿಯಲ್ಲಿ ಸನ್ಮಾನಿಸಲಾಯಿತೇ ವಿನಃ ಅದರ ಹಿಂದೆ ಪ್ರೀತಿ-ಗೌರವದ ಕೊರತೆ ಎದ್ದು ಕಾಣುತ್ತಿತ್ತು. ಇಲ್ಲೂ ಅಷ್ಟೇ ಹದಿನೇಳು ರಾಜ್ಯ, 2 ರಾಷ್ಟ್ರ ಪ್ರಶಸ್ತಿ ಪಡೆದ ರಾಜೇಂದ್ರಸಿಂಗ್ ಬಾಬುರವರಂತಹ ಪ್ರತಿಭಾನ್ವಿತರ ಕೊಡುಗೆ ಚೇಂಬರ್‌ನವರ ಕಣ್ಣಿಗೆ ಬೀಳಲಿಲ್ಲ. ಅಂತಹ ಅನೇಕ ಸಾಧಕರು ಒಟ್ಟು ಸೇರಿ ಈಗ ಚೇಂಬರ್‌ನವರನ್ನು ಪ್ರಶ್ನಿಸಲು ಹೊರಟಿದ್ದಾರೆ.





ಪೊಲೀಸರಿಗೆ ಗೊತ್ತೇ ಇಲ್ಲ...

ಉದಾಹರಣೆಗೆ ಸಾವಿರಾರು ಜನ ಸೇರುವ ಈ ಕಾರ್ಯಕ್ರಮಕ್ಕೆ ಮೊದಲು ಮಾಡಬೇಕಾಗಿದ್ದ ಪೊಲೀಸ್ ಸೆಕ್ಯುರಿಟಿ ಮತ್ತು ಇತರ ಭದ್ರತಾ ವ್ಯವಸ್ಥೆಯದನ್ನು ಉದಯ ಟಿವಿಯವರು ಮಾಡುತ್ತಾರೆಂದು ಜಯಮಾಲಾ ಕೈಕಟ್ಟಿಕುಳಿತಿದ್ದರು, ಜಯಮಾಲಾ ಮಾಡುತ್ತಾರೆಂದು ಉದಯ ಟಿವಿಯವರು ಸುಮ್ಮನಿದ್ದರು. ಆದರೆ ಯಾವಾಗ ಸಮಾರಂಭದ ದಿನ ನಾಲ್ಕು ಗಂಟೆಗೆ ಅರಮನೆ ಮೈದಾನದಲ್ಲಿ ಹತ್ತಿರತ್ತಿರ ಒಂದು ಲಕ್ಷ ಜನ ಸೇರಿಕೊಂಡರೋ ಆಗಲೇ ಜಯಮ್ಮನಿಗೆ ತಮ್ಮ ತಪ್ಪಿನ ಅರಿವಾಯಿತು. ಉದಯ ಟಿವಿಯವರು ಭದ್ರತಾ ವ್ಯವಸ್ಥೆ ನಮ್ಮ ಜವಾಬ್ದಾರಿಯಲ್ಲ ಎಂದು ನುಣುಚಿಕೊಂಡರು. ನಂತರ, ಪಾರ್ವತಮ್ಮ ರಾಜ್‌ಕುಮಾರ್ ಪೊಲೀಸ್ ಕಮೀಷನರ್ ಜೊತೆ ಮಾತನಾಡಿ ಕೊನೆ ಕ್ಷಣದಲ್ಲಿ ಭದ್ರತೆಯ ವ್ಯವಸ್ಥೆ ಮಾಡಬೇಕಾಯಿತು.

ಚೇಂಬರ್-ಉದಯ ಟಿವಿ ಟೂ...ಟೂ...

ಈ ಸಮಾರಂಭ ಕುರಿತಂತೆ ಉದಯಟಿವಿ ಮತ್ತು ಉದ್ಯಮದವರ ನಡುವೆ ಮೊದಲಿನಿಂದಲೂ ಶೀತಲ

ವಿಚಾರ ಸಂಕೀರ್ಣ ಎಂಬ ಪ್ರಹಸನ

ಕೊನೆಯ ದಿನ ನಿರ್ಮಾಪಕರ ಸಂಘದ ಆಶ್ರಯದಲ್ಲಿ ನಡೆದ ವಿಚಾರ ಸಂಕೀರ್ಣವೊಂದು ಚೇಂಬರ್ ಮೀಟಿಂಗ್ ತರಹ ಕಾಣಿಸಿತ್ತೇ ಹೊರತು ಅಲ್ಲಿ ಯಾವುದೇ ಫಲಪ್ರದ ಮಾತುಕತೆ ನಡೆಯಲಿಲ್ಲ. ಈ ವಿಚಾರ ಸಂಕೀರ್ಣವನ್ನು ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ.

ಹೀಗೆ ಅಮೃತ ಮಹೋತ್ಸವ ಕಾರ್ಯಕ್ರಮ ಗೊಂದಲ, ಗದ್ದಲ, ಅವ್ಯವಸ್ಥೆ ಅಸಮಾಧಾನ, ಭಿನ್ನಮತ, ಅತೃಪ್ತಿ ಇವೆಲ್ಲದರ ಒಂದು ಗೊಂಚಲಾಗಿ ನೆನಪಿನಂಗಳದಲ್ಲಿ ಕಾಡುವಂತೆ ಮೂಡಿಬಂತು.

ರಿಮೇಕ್ ಚಿತ್ರಗಳನ್ನು ಸಖತ್ತಾಗೆ ಭಟ್ಟಿ ಇಳಿಸುವ ನಮ್ಮ ಚಿತ್ರರಂಗದವರು ತೆಲುಗು ಚಿತ್ರರಂಗದವರು ಮಾಡಿದ್ದ ಅಮೃತಮಹೋತ್ಸವದ ಕ್ಯಾಸೆಟ್ಟನ್ನಾದರು ತರಿಸಿ ಅದೇ ರೀತಿ ಕಾರ್ಯಕ್ರಮವನ್ನು ಮಾಡಿದ್ದರೆ ಬಹುಶಃ ಚೆನ್ನಾಗಿರುತ್ತಿತ್ತೇನೋ?


■ಶೆಟ್ಟೆ

ಒಳಗೆ ಸೇರಿದರೆ ಗುಂಡು!

ಅಮೃತ ಮಹೋತ್ಸವ ಸಮಾರಂಭದ ಮುನ್ನ ದಿನ ರಾತ್ರಿ ಎರಡು ಗಂಟೆಯ ತನಕ ಮನರಂಜನಾ ಕಾರ್ಯಕ್ರಮದ ರಿಹರ್ಸಲ್ ಅರಮನೆ ಮೈದಾನದಲ್ಲಿ ನಡೆಯುತ್ತಿತ್ತು, ಅದು ಕಲಾವಿದರ ಪಾಲಿಗೆ ರಿಹರ್ಸಲ್ ಮಾತ್ರವಲ್ಲ ಒಂದು ರೀತಿಯ ಪಿಕ್‌ನಿಕ್ ಆಗಿತ್ತು.

ಅಂದು ರಾತ್ರಿ ನಾಲ್ಕು ಜನ ನಾಯಕಿಯರು (ಅದರಲ್ಲಿ ಒಬ್ಬರು ಮಾಜಿ ನಾಯಕಿ) ಕುಡಿದು ವೇದಿಕೆಗೆ ಬಂದು ಯದ್ವಾತದ್ವಾ ನೃತ್ಯ ಮಾಡಿ ಎದುರುಗಡೆ ಸಿಕ್ಕಿದವರಿಗೆಲ್ಲಾ ಸಖತ್ತಾಗಿ ಆವಾಜ್ ಹಾಕಿದರು. ಅಷ್ಟೇ ಅಲ್ಲ ಕೊನೆಯಲ್ಲಿ ವೇದಿಕೆ ಮೇಲೇ ವಾಂತಿ ಮಾಡಿದರಂತೆ. ಈಗ ಅಮೃತ ಮಹೋತ್ಸವ ಸಮಾರಂಭ ಮುಗಿದ ನಂತರ ಆ ನಾಲ್ಕು ಜನ ನಾಯಕಿಯರು ಯಾರು ಎಂದೇ ಇಡೀ ಗಾಂಧಿನಗರದಲ್ಲಿ ಚರ್ಚೆಯಾಗುತ್ತಿದೆ. ಇದು ಸಮಾರಂಭಕ್ಕಿಂತ ಹೆಚ್ಚು ಕುತೂಹಲಕಾರಿಯಾಗಿ ಪ್ರಚಾರ ಪಡೆಯುತ್ತಿದೆ.

ಕನ್ನಡವದನ ಕಮಲ್



ಮೂರು ದಿನಗಳ ಕಾರ್ಯಕ್ರಮದಲ್ಲಿ ಜಯಮಾಲಾ, ಸಾರಾ ಗೋವಿಂದು, ಮುಖ್ಯಮಂತ್ರಿ ಚಂದ್ರು, ಯಡಿಯೂರಪ್ಪ ಕಟ್ಟಾ ಸುಬ್ರಮಣ್ಯ ನಾಯ್ಡು, ಶೋಭಾ ಕರಂದ್ಲಾಜೆ, ಕೆ.ಸಿ.ಎನ್. ಚಂದ್ರು... ಹೀಗೆ ಸುಮಾರು ಎರಡು ಡಜನ್‌ಗಿಂತಲೂ ಹೆಚ್ಚು ಗಣ್ಯರು ಭಾಷಣ ಮಾಡಿದರು. ಆದರೆ ನೆನಪಿನಲ್ಲುಳಿಯುವಂತಹ ಭಾಷಣ ಮಾಡಿದ್ದು ಮಾತ್ರ ಕಮಲ ಹಾಸನ್ ಮತ್ತು ರಜನೀಕಾಂತ್. ಕಮಲ್ ತಮಿಳಿನಲ್ಲಿ ಬರೆದ ಭಾಷಣವನ್ನು ಕನ್ನಡದಲ್ಲಿ ಓದಿ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿದರು. ರಾಜಕಾರಣಿಗಳ ಬಲೆಗೆ ಕಲಾವಿದರು ನಾವು ಬೀಳಬಾರದು ನಾವೆಲ್ಲಾ ಸಹೋದರರಂತೆ ಬಾಳೋಣ ಎಂಬುದು ಅವರ ಭಾಷಣದ ತಿರುಳಾಗಿತ್ತು. ಅಷ್ಟೇ ಅಲ್ಲ ಅನಂತಮೂರ್ತಿ, ಲಂಕೇಶ್, ಬಿ.ವಿ.ಕಾರಂತ್, ಜಿ.ವಿ. ಅಯ್ಯರ್, ಪುಟ್ಟಣ್ಣ ಕಣಗಾಲ್... ಮೊದಲಾದವರನ್ನು ಜ್ಞಾಪಿಸಿಕೊಂಡರು.

ರಜನೀಕಾಂತ್ ಸುಮಾರು 20 ನಿಮಿಷಗಳ ಕಾಲ ನಿರರ್ಗಳವಾಗಿ ಕನ್ನಡದಲ್ಲಿ ಮಾತನಾಡಿ ಕನ್ನಡ ಚಿತ್ರರಂಗ ಬೆಳೆದು ಬಂದ ಹಾದಿಯನ್ನು ತನ್ನದೇ ಶೈಲಿಯಲ್ಲಿ ನಿರೂಪಿಸಿ ತಾನಿನ್ನೂ ಕನ್ನಡ ಚಿತ್ರರಂಗವನ್ನು ಮರೆತಿಲ್ಲ ಎಂಬುದನ್ನು ತೋರಿಸಿದರು. ವಿಶೇಷವೆಂದರೆ ಅವರು ಕಮಲ್ ತರಹ ಭಾಷಣವನ್ನು ಬರೆದುಕೊಂಡು ಬಂದಿರಲಿಲ್ಲ. ಕನ್ನಡದವರು ಕಾದಂಬರಿ ಆಧಾರಿತ ಚಿತ್ರಗಳನ್ನು ನಿರ್ಮಿಸುವಂತಾಗಬೇಕು. ದಳವಾಯಿ ಮುದ್ದಣ್ಣ ಪಾತ್ರವನ್ನು ಮಾಡುವ ಅಭಿಲಾಷೆ ಇದೆ ಎಂದು ತನ್ನ ಮನದಾಳದ ಆಸೆಯನ್ನು ವ್ಯಕ್ತಪಡಿಸಿದರು.

ಆಚ್ಚರಿಯೆಂದರೆ ಕಮಲ ಹಾಸನ್ ಮಾತನ್ನು ವೇದಿಕೆಯಲ್ಲಿದ್ದ ಉದ್ಯಮದವರಾಗಲಿ, ರಾಜಕಾರಣಿಗಳಾಗಲಿ ಅಥವಾ ಕನ್ನಡ ಹೋರಾಟಗಾರರಾಗಲಿ ಗಂಭೀರವಾಗಿ ಪರಿಗಣಿಸಲಿಲ್ಲ. ಹಾಗೆ ಪರಿಗಣಿಸಿದ್ದರೆ ಮೊದಲು ಸಿನಿಮಾ ಜೊತೆ ರಾಜಕೀಯವನ್ನು ಬೆರೆಸಿದ್ದು ತಮಿಳು ಚಿತ್ರೋದ್ಯಮದವರು ಎಂದು ಖಂಡಿತವಾಗಿಯೂ ಹೇಳುತ್ತಿದ್ದರೇನೋ?!

ದರ್ಶನ್ ಧೋರಣೆ!



ಫಿಲ್ಮ್ ಚೇಂಬರ್ ಮರೆತು ಹೋದ ಕೆಲವು ಸಾಧಕರ ಪುಸ್ತಕಗಳನ್ನು ಮತ್ತೆ ಪ್ರಕಟಿಸುವ ನಿರ್ಧಾರ ಕೈಗೊಂಡಿದೆ. ಆದರೆ ದರ್ಶನ್ ತನ್ನ ತಂದೆ ತೂಗುದೀಪ್ ಶ್ರೀನಿವಾಸ್ ಅವರ ಬಗ್ಗೆ ಫಿಲ್ಮ್ ಚೇಂಬರ್ ಎರಡನೇ ಕಂತಿನಲ್ಲಿ ಪುಸ್ತಕ ತರುವುದನ್ನು ಸ್ವಾಗತಿಸುವುದಿಲ್ಲ ಎಂದು ಖಾರವಾಗಿ ಹೇಳಿದ್ದಾರಲ್ಲದೆ ಅಂತಹ ಸಮಾರಂಭಕ್ಕೆ ತಮ್ಮ ಕುಟುಂಬದ ಸದಸ್ಯರ್‍ಯಾರು ಹೋಗುವುದಿಲ್ಲವೆಂದೂ ಘೋಷಿಸಿದ್ದಾರೆ. ಅದೇರೀತಿ ಕನ್ನಡ ಚಿತ್ರರಂಗಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದ ಟೈಗರ್ ಪ್ರಭಾಕರ್ ಬಗ್ಗೆ ಕೂಡಾ ಪುಸ್ತಕವನ್ನು ಹೊರತರದಿರುವುದು ಅವರ ಅನೇಕ ಅಭಿಮಾನಿಗಳಿಗೆ ಬೇಸರ ಮೂಡಿಸಿದೆ.

ಕ್ಯಾಮೆರಾಮನ್‌ಗಳ ಕಪ್ಪುಬಟ್ಟೆ

ಕರ್ನಾಟಕ ಚಲನಚಿತ್ರ ಛಾಯಾಗ್ರಾಹಕರ ಸಂಘ ಅಮೃತಮಹೋತ್ಸವ ಕಾರ್ಯಕ್ರಮವನ್ನು ವಿಶಿಷ್ಟ ರೀತಿಯಲ್ಲಿ ಪ್ರತಿಭಟಿಸಿ, ಬಹಿಷ್ಕರಿಸಿವೆ. ಇದಕ್ಕೆ ಮುಖ್ಯ ಕಾರಣ ಛಾಯಾಗ್ರಾಹಕರ ಸಂಘವನ್ನು ಚೇಂಬರ್ ಸಂಪೂರ್ಣವಾಗಿ ನಿರ್ಲಕ್ಷಿಸಿದ್ದು. ಚೇಂಬರ್ ಅಧ್ಯಕ್ಷೆ ಜಯಮಾಲಾ ಅವರಿಗೆ ಕಪ್ಪು ಬಟ್ಟೆಯನ್ನು ಸುತ್ತಿದ್ದ ತೂಗುಬ್ಬವನ್ನು ನೀಡಿ ತಮ್ಮ ಪ್ರತಿಭಟನೆಯನ್ನು ಪ್ರದರ್ಶಿಸಿದ್ದಾರೆ. ■

R B P LANKESH, Kannada Weekly Price Rs. 12/- 18-03-2009 RNI No. KARKAN2005/14648

ಶೇಷಾ ನಿ ರೆಕಾರ್ಡ್

ಪರಮಾತ್ಮ'ನ ಭಕ್ತರು!



ತೆರೆಯ ಮೇಲೆ ತಮ್ಮ ಗತ್ತು ಗೈರತ್ತುಗಳಿಗೇ ಹೆಸರುವಾಸಿಯಾಗಿರುವ ಕೆಲ ನಟರು ತಮ್ಮ ಖಾಸಗಿ ಬದುಕಿನ ಕೆಲ ಸಂದರ್ಭಗಳಲ್ಲಿ ಜಾಳುಜಾಳಾಗಿ, ಸ್ಟುಪಿಡ್ಆಗಿ, ಹಲವೊಮ್ಮೆ ವಿಚಿತ್ರವಾಗಿ ವರ್ತಿಸಿ ಮಜಾ ಕೊಡುತ್ತಾರೆ. ಅಂಥದ್ದೊಂದು ಉದಾಹರಣೆ ಇಲ್ಲಿದೆ:


ಅದು 2003-04ರ ವರ್ಷವಿರಬಹುದು. ಘಟ್ಟಪ್ರದೇಶ ಆಗುಂಬೆಯ ಕಾರ್ಮುಗಿಲ ಮಧ್ಯೆ ನಿರ್ದೇಶಕಿ ಕವಿತಾ ಲಂಕೇಶ್ ಅವರ ಮಾಲ್ಗುಡಿ ಡೇಸ್‌ನ ಶೂಟಿಂಗ್ ನಡೆಯುತ್ತಿತ್ತು, ಮಾಲ್ಗುಡಿ ಡೇಸ್‌ನ ಮುಖ್ಯ ಪಾತ್ರವೊಂದರಲ್ಲಿ ನಮ್ಮ 'ಎವರ್‌ಗ್ರೀನ್ ಹೀರೋ' ಅನಂತ್‌ನಾಗ್ ಕೂಡ ನಟಿಸಿದ್ದರು.

ಅನಂತ್‌ರ ಸಹೋದರ ಶಂಕರ್‌ನಾಗ್ ಸಹ ಹಿಂದಿಯಲ್ಲಿ ಮಾಲ್ಗುಡಿ ಡೇಸ್ ಧಾರಾವಾಹಿಯನ್ನು ನಿರ್ದೇಶಿಸಿ ಇಡೀ ದೇಶವೇ ತನ್ನತ್ತ ನೋಡುವಂತೆ ಮಾಡಿದ್ದರಲ್ಲಾ? ಆಗಲೂ ಇದೇ ಅನಂತ್ ಮಾಲ್ಗುಡಿ ಡೇಸ್‌ನಲ್ಲಿ ನಟಿಸಿದ್ದರು.

ಈ ಬಾರಿ ಕವಿತಾರ 'ಮಾಲ್ಗುಡಿ' ಚಿತ್ರೀಕರಣಕ್ಕಾಗಿ ಆಗಮಿಸಿದ್ದ ಅನಂತ್‌ಗೆ ಹಿಂದೊಮ್ಮೆ ಆ ದಟ್ಟಾರಣ್ಯದ ಮಧ್ಯೆಯಿರುವ ಒಂದು ದೇವಸ್ಥಾನಕ್ಕೆ ಭೇಟಿ ನೀಡಿದ್ದ ನೆನಪುಗಳು ಎಲ್ಲಿಲ್ಲದಂತೆ ಕಾಡಲಾರಂಭಿಸಿವೆ. ಅಗಲಿದ ಸಹೋದರನ ನೆನಪೂ ಅನಂತ್ ಮನಸ್ಸಿಗೆ ಮೇಲಿಂದ ಮೇಲೆ ಅಪ್ಪಳಿಸಿವೆ. ಇದರ ಜೊತೆಗೆ ಅದಾಗಲೇ ಸಾಕಷ್ಟು 'ತೀರ್ಥ' ಸ್ವೀಕಾರವೂ ನಡೆದಿತ್ತಾದ್ದರಿಂದ ಅನಂತ್‌ಗೆ ದೇವರ ಸೆಂಟಿಮೆಂಟ್ ಮತ್ತಷ್ಟು ಇಮ್ಮಡಿಗೊಂಡಿದೆ. ಒಳಗಿರುವ ಪರಮಾತ್ಮನ ಆಟ ಹೆಚ್ಚಾದಾಗ ಸೀದಾ ಗುಡಿಗೆ ಹೋಗಿ ಅಲ್ಲಿರುವ ದೇವರಿಗೆ ಕೈಮುಗಿದು ಪ್ರದಕ್ಷಿಣೆ ಹಾಕಲೇಬೇಕು ಎಂದು ತೀರ್ಮಾನಿಸಿದ್ದಾರೆ ಅನಂತ್.

ಅನಂತ್‌ನಾಗ್‌ರಂತಹ ಹಠಮಾರಿ ವ್ಯಕ್ತಿ ನಿರ್ಧರಿಸಿದ ಮೇಲೆ ಅವರನ್ನು ಯಾರಾದರೂ ತಡೆಯಲಾದೀತೆ? ಸರಿ, ಎಷ್ಟು ಹೇಳಿದರೂ ಕೇಳದ ಅನಂತ್ ಕಾರು ಏರಿ ಹೊರಟೇಬಿಟ್ಟಿದ್ದಾರೆ. ಆ ಹೊತ್ತಿಗಾಗಲೇ ನಿಲ್ಲಲೂ ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿದ್ದ ಅವರು ಅದ್ಹೇಗೆ ದೇವಸ್ಥಾನಕ್ಕೆ ಹೋಗಲು ಸಾಧ್ಯ? ಹಾಗೊಂದು ವೇಳೆ ದೇವಸ್ಥಾನ ತಲುಪಿದರೂ ದೇವರಿಗೆ ನಮಸ್ಕರಿಸಿ, ಪ್ರದಕ್ಷಿಣೆ ಹಾಕುವುದಾದರೂ ಹೇಗೆ?

ಅನಂತ್‌ರ ಹಠವನ್ನು, ಅವರ ಆಗಿನ ಪರಿಸ್ಥಿತಿಯನ್ನು ಅರಿತ ಪತ್ರಕರ್ತರೊಬ್ಬರು 'ಏನಾದರೂ ಯಡವಟ್ಟಾದರೆ ಏನು ಗತಿ' ಎಂದು ಮತ್ತೊಂದು ಕಾರ್ ಹತ್ತಿ ಅನಂತ್‌ರನ್ನು ಹಿಂಬಾಲಿಸಿದ್ದಾರೆ. ಅವರ ಅದೃಷ್ಟ, ದಾರಿ ಮಧ್ಯೆ ಕಾರ್ ನಿಲ್ಲಿಸಿ ನಿಸರ್ಗದ ಕರೆಗೆ ಓಗೊಟ್ಟು ನಿಂತಿದ್ದ ಅನಂತ್ ಅವರ ಕಣ್ಣಿಗೆ ಬಿದ್ದಿದ್ದಾರೆ. ಕೂಡಲೇ ಪತ್ರಕರ್ತರು ತಮ್ಮ ಕಾರಿನಿಂದ ಇಳಿದು ಅನಂತರ ಕಾರಿನ ಡ್ರೈವರ್ ಸೀಟಿಗೆ ಹತ್ತಿ ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ವಿಧಿ ಇಲ್ಲದೆ ಕಾರಿನ ಪ್ಯಾಸೆಂಜರ್ ಸೀಟ್ ಹತ್ತಿದ ಅನಂತ್ ಮಾತ್ರ ದೇವಸ್ಥಾನಕ್ಕೇ ಹೋಗಲೇ ಬೇಕು, ನಮಸ್ಕಾರ ಮಾಡಲೇ ಬೇಕು, ಪ್ರದಕ್ಷಿಣೆ ಹಾಕಲೇಬೇಕು ಎಂದು ಹಠ ಹಿಡಿದಿದ್ದಾರೆ.



ಆಗ ಪತ್ರಕರ್ತರು ಒಂದು ಉಪಾಯ ಮಾಡಿದ್ದಾರೆ. ಅನಂತ್‌ರನ್ನು ಕಾರಿನಲ್ಲೇ ಕೂಡಿಸಿಕೊಂಡು ದೇವಸ್ಥಾನವನ್ನು ಸಮೀಪಿಸಿದ ಪತ್ರಕರ್ತರು ಕಾರನ್ನೇ ದೇವಸ್ಥಾನದ ಸುತ್ತ ಮೂರು ಬಾರಿ ಓಡಿಸಿದ್ದಾರೆ. ಆಗ 'ಪರಮಾತ್ಮ' ಆಡಿಸಿದಂತೆ ಆಡುತ್ತಿದ್ದ ಅನಂತ್‌ಗೆ ಕಾರಿನಿಂದ ಇಳಿಯದಿದ್ದರೂ ದೇವಸ್ಥಾನಕ್ಕೆ ಭೇಟಿ ನೀಡಿದ್ದು, ಕಾರಿನಿಂದಲೇ ನಮಸ್ಕರಿಸಿದ್ದು, ಅಷ್ಟೇ ಅಲ್ಲ ಪ್ರದಕ್ಷಿಣೆ ಕೂಡ ಮಾಡಿದ ನೆಮ್ಮದಿ, ತಮ್ಮ ಹಠ ಸಾಧಿಸಿದ ಸಂತೋಷ ಎರಡೂ ಆಯಿತಂತೆ.

ಅಂದಹಾಗೆ, ಅಂದು ಅನಂತ್‌ರ ದೈವಭಕ್ತಿಗೆ ಈ ಉಪಾಯ ಕಂಡುಕೊಂಡು ಅವರ ಅಂತರಾಳ ಸೇರಿದ್ದ 'ಪರಮಾತ್ಮ'ನನ್ನೂ ನೆಮ್ಮದಿ ಪಡಿಸಿದ್ದ ಪತ್ರಕರ್ತರು ಯಾರು ಗೊತ್ತ?

ನಮ್ಮ ತಂಡದ ಕ್ಯಾಪ್ಟನ್ ಗೌರಿ ಲಂಕೇಶ್!!

■ ಅರುಣ್

ಯಾರಿಗೂ ಬಾರದ ಟೈಗರ್ ನೆನಪು

ಟೈಗರ್ ಪ್ರಭಾಕರ್‌ರ ಪರ್ಸನಲ್ ಲೈಫ್ ಏನೇ ಇರಬಹುದು. ಆದರೆ, ಭಾರತೀಯ ಚಿತ್ರರಂಗ ಕಂಡ ಯಶಸ್ವೀ ನಟರಲ್ಲಿ ಅವರೊಬ್ಬರು. ಕನ್ನಡದಲ್ಲೇ 165 ಚಿತ್ರಗಳಲ್ಲಿ ನಟಿಸಿದ್ದ ಟೈಗರ್ ಪ್ರಭಾಕರ್ ಭಾರತದ ಇನ್ನೂ ನಾಲ್ಕು ಭಾಷೆಗಳ ಒಟ್ಟು ಐನೂರು ಚಿತ್ರಗಳಲ್ಲಿ ನಟಿಸಿ ಪಂಚಭಾಷಾ ನಟ ಎನಿಸಿಕೊಂಡಿದ್ದರು.

ಆದರೆ ನಮ್ಮ ಕನ್ನಡ ಚಿತ್ರರಂಗದ ಯಾರೂ ಮೊನ್ನಿನ ಅಮೃತಮಹೋತ್ಸವದ ಸಂದರ್ಭದಲ್ಲಿ ಪ್ರಭಾಕರ್‌ರನ್ನು ನೆನೆಯುವ ಒಂದು ಸಣ್ಣ ಪ್ರಯತ್ನವನ್ನೂ ಮಾಡಲಿಲ್ಲ, ಅಮೃತಮಹೋತ್ಸವದ ಮೊದಲ ದಿನದ ಸಮಾರಂಭದಲ್ಲಿ ಎಲ್ಲ ದಿವಂಗತ ನಟರ ಪರಿಚಯ ಮತ್ತು ಅವರ ಬಗ್ಗೆ ಅವರ ಮಕ್ಕಳು ಮಾತನಾಡಿದ ತುಣುಕುಗಳನ್ನು ಪ್ರದರ್ಶಿಸಲಾಯಿತು. ಆಗ ಪರದೆಯ ಮೇಲೆ ಅಗಲಿದ ಬಹುತೇಕ ನಟರು ಬಂದುಹೋದರು. ಆದರೆ ಅತೀ ಕೆಳಮಟ್ಟದಿಂದ ಬಂದು ಇಡೀ ಇಂಡಿಯಾದ ಚಿತ್ರೋದ್ಯಮದಲ್ಲಿ ಮೆರೆದ, ಆ ಮೂಲಕ ಕನ್ನಡಕ್ಕೆ ಕೀರ್ತಿ ತಂದುಕೊಟ್ಟ, ಬಲಿಷ್ಠ ಮೈಕಟ್ಟಿನ, ವಿಭಿನ್ನ ಧ್ವನಿಯ, ಅಪರೂಪದ 'ಟೈಗರ್' ಮಾತ್ರ ಅಲ್ಲಿ ಬರಲೇ ಇಲ್ಲ, ಮಾತ್ರವಲ್ಲ, ಪ್ರಭಾಕರ್‌ರ ಪುತ್ರ ಮತ್ತು ನಟ ವಿನೋದ್ ಪ್ರಭಾಕರ್‌ಗೆ ಆಹ್ವಾನವನ್ನೂ ಕಳುಹಿಸಿರಲಿಲ್ಲವಂತೆ ಎಂಬ ಸುದ್ದಿ ಈಗ ಎಲ್ಲೆಡೆ ಹರಡಿದೆ.

ಹಾಲಿ ಛೇಂಬರ್ ಅಧ್ಯಕ್ಷೆ ಜಯಮಾಲಾ ಮತ್ತು ಪ್ರಭಾಕರ್ ಹಲವಾರು ಚಿತ್ರಗಳಲ್ಲಿ ನಾಯಕ-ನಾಯಕಿಯಾಗಿ ನಟಿಸಿದ್ದು, ಪ್ರಭಾಕರ್‌ಗೆ ಅದಾಗಲೇ ಮದುವೆಯಾಗಿ ಮೂವರು ಮಕ್ಕಳಿದ್ದರೂ ಜಯಮಾಲಾರನ್ನು ಪ್ರೀತಿಸಿ, ಇಬ್ಬರೂ ಪರಸ್ಪರ ಒಪ್ಪಿ ಮದುವೆಯಾಗಿದ್ದು, ಹತ್ತನ್ನೆರಡು ವರ್ಷ ಕೂಡಿ ಬಾಳಿದ ಈ ಜೋಡಿ ನಂತರ ಸಂಸಾರ ಕಲಹದಿಂದ ಬೇರೆಯಾಗಿ ಹೊಸ ಜೀವನ ಆರಂಭಿಸಿದ್ದು... ಯಾವುದೂ ಗೌಪ್ಯ ಸುದ್ದಿಯೇನಲ್ಲ.

ಆದರೂ ಎಲ್ಲರೂ ಪ್ರಭಾಕರ್ ಅವರನ್ನು ಮರೆತಿದ್ದು ಏಕೆ?

'ಮುಖಪುಟ'ದ ಮರ್ಮ!



ಮೊನ್ನೆ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ 'ಮುಖಪುಟ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭ ನಡೆಯಿತು. ರೂಪ ಅಯ್ಯರ್ ಎಂಬ ಹೈಕ್ಲಾಸ್ ಸೊಸೈಟಿಯ ಕಲಾವಿದೆ ಈ ಚಿತ್ರದ ನಿರ್ದೇಶಕಿ ಕೂಡಾ ಹೌದು.

ಇದು ಏಡ್ಸ್‌ಗೆ ಸಂಬಂಧಪಟ್ಟ ಕಥಾವಸ್ತು ಹೊಂದಿರುವ ಚಿತ್ರ. ಹೀಗಾಗಿ ಚಿತ್ರದ ಧ್ವನಿಸುರುಳಿಗೆ ಅನೇಕ ಏಡ್ಸ್ ಪೀಡಿತ ಮಕ್ಕಳನ್ನು ಅತಿಥಿಯಾಗಿ ಕರೆದುಕೊಂಡು ಬಂದಿದ್ದರು. ಅಷ್ಟೇ ಅಲ್ಲ, ಜೈಲಿನಲ್ಲಿರುವ ಕೈದಿಗಳಿಂದ ನೃತ್ಯ ಕೂಡಾ ಮಾಡಿಸಿದರು. ಆದರೆ ಆ ಮಕ್ಕಳನ್ನು ತೋರಿಸುತ್ತಾ 'ನನ್ನ ಮಕ್ಕಳನ್ನು ಪ್ರೋತ್ಸಾಹಿಸಿ ಬನ್ನಿ' ಎಂದು ಆಕೆ ಅಳುತ್ತಿದ್ದರು. ಅದನ್ನು ನೋಡಿ ಯಾರಿಗೂ ಸಿಂಪಥಿ ಹುಟ್ಟಲಿಲ್ಲ, ಬದಲಿಗೆ ಅದೊಂದು ಕಪಟ ನಾಟಕದ ತರಹ ಇತ್ತು. ಕೈದಿಗಳು ನೃತ್ಯ ಮಾಡಿದ ನಂತರ ಅವರು ಕೂಡಾ 'ನಾವೇನೂ ತಪ್ಪು ಮಾಡಿಲ್ಲ, ಅನಗತ್ಯವಾಗಿ ಜೈಲಿನಲ್ಲಿ ಕೊಳೆಯುತ್ತಿದ್ದೇವೆ' ಎಂದು ಹೇಳಿಕೊಂಡು ಸಹಾಯಕ್ಕಾಗಿ ಮನವಿ ಮಾಡಿಕೊಂಡರು.

ಸಿನಿಮಾ ಸಮಾರಂಭದಲ್ಲಿ ಇಂತಹ ದೃಶ್ಯಗಳು ನಿಜಕ್ಕೂ ಅನಗತ್ಯ. ಏಡ್ಸ್‌ಪೀಡಿತರ ಬಗ್ಗೆ, ಕೈದಿಗಳ ಬಗ್ಗೆ ಕಾಳಜಿ ಇರಬೇಕು ನಿಜ. ಆದರೆ ಅವರನ್ನು ಮುಂದಿಟ್ಟು ಈ. ತರಹ ವ್ಯಾಪಾರಕ್ಕಿಳಿಯಬಾರದು. ಅದು ಈ ನಾಗರಿಕ ಸಮಾಜಕ್ಕೆ ಶೋಭೆ ತರುವಂತದ್ದಲ್ಲ, 'ಮುಖಪುಟ' ಚಿತ್ರವನ್ನು ನಿರ್ದೇಶಿಸಿರುವ ರೂಪಾ ಅಯ್ಯರ್ ಈ ಸಮಾರಂಭದಲ್ಲಿ ಸಂಪೂರ್ಣವಾಗಿ ತನ್ನ ಬೆನ್ನನ್ನು ಪ್ರದರ್ಶಿಸಿ ಓಡಾಡುತ್ತಿದ್ದದ್ದು ವಿಶೇಷವಾಗಿ ಗಮನ ಸೆಳೆಯಿತು. ಈ ಚಿತ್ರವನ್ನು ಮೊದಲು ವಿದೇಶಗಳಲ್ಲಿ ಪ್ರದರ್ಶನ ಮಾಡುವ ಆಲೋಚನೆ ಅವರದ್ದು. ಇದೆಲ್ಲಾ ನೋಡಿದರೆ ಏಡ್ಸ್ ಪೀಡಿತ ಮಕ್ಕಳ ಕಥಾವಸ್ತುವಿನ ಈ ಚಿತ್ರಕ್ಕೆ ವಿದೇಶಿ ಹಣದ ಪ್ರವಾಹವೇ ಹರಿದು ಬರುತ್ತಿದೆಯೇ ಎಂಬ ಗುಮಾನಿಯೂ ಮೂಡುತ್ತದೆ.

ಏನಾದರಾಗಲಿ ಒಂದು ಸಮಕಾಲೀನ/ ಜ್ವಲಂತ ಸಮಸ್ಯೆಯನ್ನು ಕೈಗೆತ್ತಿಕೊಂಡಿರುವ ಈ ಮಹಿಳೆಯ ಪ್ರಯತ್ನವನ್ನು ಮೆಚ್ಚಬೇಕು.

ಚಿಲ್ಲರೆ ಸುದ್ದಿಗಳು

* ರಾಕ್‌ಲೈನ್ ವೆಂಕಟೇಶ್ ಮಗ ಮತ್ತು ಮುನಿರತ್ನಂ ಮಗಳು ಮೇ 1ರಂದು ಗುರು-ಹಿರಿಯರ ಸಮ್ಮುಖದಲ್ಲಿ ವಿವಾಹವಾಗಲಿದ್ದಾರೆ.
* ಬಿ.ಸಿ.ಪಾಟೀಲ್ ನಿರ್ದೇಶನ 'ಸೆಲ್ಯೂಟ್' ಚಿತ್ರದಲ್ಲಿ ಸಾಂಗ್ಲಿಯಾನ ನಟಿಸಲಿದ್ದಾರೆ.
* ಎಸ್.ನಾರಾಯಣ್ ತನ್ನ ಮುದ್ದಿನ ಮಗ ಪಂಕಜ್‌ನನ್ನು ಹಾಕಿಕೊಂಡು 'ಚಲಿಪಿಲಿ' ಎಂಬ ಚಿತ್ರವನ್ನು ಸದ್ದಿಲ್ಲದೆ ಆರಂಭಿಸಿದ್ದಾರೆ.
* 'ಯಜಮಾನ' ಖ್ಯಾತಿಯ ನಿರ್ಮಾಪಕ ರೆಹಮಾನ್ ನಿರ್ಮಿಸಲಿರುವ 'ದೊಡ್ಡಮನುಷ್ಯ' ಎಂಬ ಚಿತ್ರಕ್ಕೆ ವಿಷ್ಣುವರ್ಧನ್ ಸಹಿಹಾಕಿದ್ದಾರೆ.
* ಉಪ್ಪಿ ಮತ್ತು ಪ್ರಿಯಾಂಕ ಜೊತೆಯಾಗಿ ನಟಿಸಲಿರುವ ಚಿತ್ರಕ್ಕೆ 'ಶ್ರೀಮತಿ' ಎಂದು ನಾಮಕರಣ ಮಾಡಲಾಗಿದೆ.
* ಭಾರತಿ ವಿಷ್ಣುವರ್ಧನ್ ನಂತರ ಇದೀಗ ಶ್ರುತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ಅಧ್ಯಕ್ಷೆಯಾದ ಗೌರವಕ್ಕೆ ಪಾತ್ರರಾಗಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44